
# ಅಖಿಲ ಭಾರತ ಪತ್ರಿಕೆ

## ಆಗಸ್ಟ್ 2026



# ಶ್ರೀ ಅರವಿಂದಾಶ್ರಮ

ಬೆಲೆ: 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಜೀವ–ಜೀವನದ ಆ ಗುಹ್ಯ–ಗೂಢದುದ್ಗಮದ ತಾಣದೊಳಗೆ
ಇದು ನಿಯತಿ ಸಹಜ ಇದು ಋತದ ಓಜ ಚೈತನ್ಯದಾತ್ಮದೊಳಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 3 ರೇಣು 2 ಪುಟ 311)**

# ಅಖಿಲ ಭಾರತ ಪತ್ರಿಕೆ

**ಆಗಸ್ಟ್ 2026**

ಸಂಪುಟ: 36 ಸಂಚಿಕೆ: 08



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

### ಶ್ರೀ ಅರವಿಂದಾಶ್ರಮ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಪರಿಕಲ್ಪನೆ** 7
ಅನು: ಶ್ರೀ ಪುಟ್ಟು ಕುಲಕರ್ಣಿ

**ಒಂದು ಸ್ವಪ್ನ** 9
ಅನು: ನಾಗಜ್ಯೋತಿ ಮಾನ್ವಿ

**ಆಶ್ರಮದ ಉಗಮ** 12
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಆಶ್ರಮ; ಶ್ರೀ ಅರವಿಂದರ ದೃಷ್ಟಿ** 26
ಅನು: ಡಾ॥ ಮಹಾದೇವ ಸಕ್ರಿ

**ಆಶ್ರಮ; ಶ್ರೀಮಾತೆಯ ದೃಷ್ಟಿ** 40
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದೋರವರ ಬೋಧನೆ** 49
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 57
ಅನು: ಜಾನ್ವಿ

## ಸಂಪಾದಕರ ಟಿಪ್ಪಣಿ

**ಅಂತರಾತ್ಮದ ಆದೇಶದ ಪ್ರಕಾರವಾಗಿಯೇ ರೂಪುಗೊಂಡ ಕರೆಯನ್ನು ಒಪ್ಪಿ ಶ್ರೀ ಅರವಿಂದರು ಪಾಂಡಿಚೇರಿಗೆ ಆಗಮಿಸಿದ್ದರು. ಈ ಭೂಮಿಗೆ ಮತ್ತು ಮಾನವ ಕುಲಕ್ಕೆ ಅತಿಮಾನವ ಪ್ರಜ್ಞೆಯನ್ನು ದೊರಕಿಸಿಕೊಡುವ ಸಲುವಾಗಿಯೇ, ಅದರ ಸಾಧನೆಗಾಗಿಯೇ ಸೂಕ್ತ ಸ್ಥಳವಾಗಿ ನಿಯತಿಗೊಳಿಸಲ್ಪಟ್ಟಂತಹ ಈ ಪಾಂಡಿಚೇರಿಗೆ ಅವರು ಆಗಮಿಸಿದಾಗ, ಕೆಲವೇ ದಿನಗಳಲ್ಲಿ, ಈ ಪ್ರಚಂಡವಾದ ಉಪಕ್ರಮದಲ್ಲಿ ಶ್ರೀಮಾತೆಯವರೂ ಅವರೊಡನೆ ಸಹವರ್ತಿಯಾದರು.**

2026 ನೇ ಇಸ್ವಿಯು ಅತ್ಯಂತ ಮಹತ್ವಪೂರ್ಣವಾಗಿದೆ. ಅದರಲ್ಲೂ ಎರಡು ಘಟನೆಗಳಂತೂ ನಿತ್ಯ ನೂತನವಾಗಿವೆ. 24 ನವೆಂಬರ್ 2026 ರಂದು ಶ್ರೀ ಅರವಿಂದರ 'ಸಾಧನೆ'ಗೆ 'ಸಿದ್ಧಿ' ಲಭ್ಯವಾದ ದಿನವಾಗಿದೆ. ಕೃಷ್ಣ ಚೈತನ್ಯವು ಸಾಕ್ಷಾತ್ಕಾರಗೊಂಡ ದಿನವಿದು. ಮಾನವನು ಪೂರ್ಣ ಯೋಗದ ಮೂಲಕ ಪರಿಪಕ್ವ ಪರಿಪೂರ್ಣತೆಯನ್ನು ಲಭ್ಯಗೊಳಿಸಕೊಳ್ಳಬಲ್ಲ ಎನ್ನುವದನ್ನು ದ್ರಷ್ಟಾರರಾಗಿ ಕಂಡ ದಿವ್ಯ ಘಳಿಗೆಯಿದು. ಇದನ್ನು ಸಾಕಾರಗೊಳಿಸಿ ಸರ್ವರಿಗೂ ಲಭ್ಯಗೊಳಿಸುವ ಸಲುವಾಗಿ, ಆ ದಿವ್ಯ ಬಯಕೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ "ಆಶ್ರಮ"ವು ಪ್ರಾರಂಭಗೊಂಡ ವರ್ಷದ ಶತಮಾನವೂ ಇದಾಗಿದೆ.

ಈ ಸಂಚಿಕೆಯಲ್ಲಿ ಶ್ರೀ ಅರವಿಂದರು ಪಾಂಡೀಚೇರಿಯ ಶ್ರೀ ಅರವಿಂದ ಆಶ್ರಮದ ಶತಮಾನದ ಆಯಾಮದಲ್ಲಿ ರೂಪಿತಗೊಂಡ ಘಟನೆಗಳನ್ನು ಕುರಿತು ರೂಪಿಸಲ್ಪಟ್ಟಿದೆ. (ಎಐಎಮ್)

## ಸಂಪಾದಕರ ಟಿಪ್ಪಣಿ

## ತಪಸ್ಸಿನ ಹೃದ್ಗುಹೆ

**ಪಾಂಡಿಚೇರಿಯು ನಾನು ಮರಳಿ ಪಡೆದುಕೊಂಡ ನನ್ನ ಮೂಲ ನೆಲೆಯಾಗಿದ್ದು, ಇದು ನನ್ನ ತಪಸ್ಸಿನ ಹೃದ್ಗುಹೆಯಾಗಿದೆ. ಇದು ಕೇವಲ ಯೋಗಿಕ ದೃಷ್ಟಿಯಿಂದ ಮಾತ್ರವಲ್ಲದೇ, ಜೊತೆಗೆ ನನ್ನಲ್ಲಿಯೇ ನನ್ನನ್ನು ಆವಿಷ್ಕರಿಸಿಕೊಳ್ಳುವದೂ ಆಗಿದೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/255 – ಶ್ರೀ ಅರವಿಂದರು**

ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನಗಳು ಭಾರತದ ವಿಷಯಕ್ಕಂತೂ ಯುಗ ಪರಿವರ್ತನೆಯ ಅವಧಿಯಾಗಿದೆ. ತೀವ್ರ ಸ್ವರೂಪದ ಮೌಲ್ಯಗಳ ರೂಪಾಂತರಗಳು ಓತಪ್ರೋತವಾಗಿ, ಕಾಲದ ಮಥನದಲ್ಲಿ ಉದ್ಭವಿಸುತ್ತಿರುವಾಗ, ಅವುಗಳನ್ನು ತಹಬಂದಿಗೆ ತಂದು, ಸೂಕ್ತವಾದ ಒಂದು ಪಥವನ್ನು ನಿರ್ಮಿಸುವಲ್ಲಿ ಆಯಾ ಪ್ರದೇಶದ ಆಧ್ಯಾತ್ಮಿಕ ವಲಯ ತನ್ನನ್ನು ತೊಡಗಿಸಿಕೊಂಡಿರುತ್ತದೆ. ಆದರೆ ಭಾರತದ ವಿಷಯದಲ್ಲಿ ಶತಶತಮಾನಗಳ ಕಾಲದಲ್ಲಿ ಈ ಆಧ್ಯಾತ್ಮಿಕ ವಲಯವನ್ನು ಅದುಮಿಡುವ ಕಾರ್ಯವೇ ಘಟಿಸಿವೆ. ಪಾಶ್ಚಾತ್ಯ ಆಡಳಿತ ವ್ಯವಸ್ಥೆಯಲ್ಲಿ ಭೌತಿಕ ಸ್ವರೂಪದ ಆಕರ್ಷಣೆಗಳನ್ನು ಕಂಡರೂ ಭಾರತೀಯ ಆತ್ಮ ಮಾತ್ರ ಗ್ಲಾನಿಗೆ ಒಳಗಾಯಿತು. ಅದನ್ನು ಸರಿಪಡಿಸಲೆಂದೇ, ಅದೂ ಆಧುನಿಕ ವೈಜ್ಞಾನಿಕ ಭಾಷಾ ವ್ಯವಸ್ಥೆಯಲ್ಲಿಯೇ ಎಲ್ಲರಿಗೂ ತಿಳಿಸುವ ಮಹತ್ವದ ತಿರುವನ್ನು ರೂಪಿಸಿದ್ದು ಶ್ರೀ ವಿವೇಕಾನಂದರು. ಇವರನ್ನು ಅನುಸರಿಸಿಯೇ ಇಂದಿಗೂ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗ ಮತ್ತು ಆಧ್ಯಾತ್ಮದ ವಿಷಯದಲ್ಲಿ, ಇಡೀ ಭೂಮಂಡಲವೇ ಭಾರತವನ್ನು ಗಮನಿಸುತ್ತಿದೆ. ಭೌತಿಕ ಸ್ವಾತಂತ್ರ್ಯದ ಜೊತೆಜೊತೆಗೆ ಆತ್ಮ ಸ್ವಾತಂತ್ರ್ಯವೂ ಇರಬೇಕು, ಈ ಆತ್ಮ ಸ್ವಾತಂತ್ರ್ಯವನ್ನು ಯಾರೂ ಹೊರಗಿನಿಂದ ಕೊಡಲು ಸಾಧ್ಯವಿಲ್ಲ. ಇದು ಅಂತರಂಗದಲ್ಲಿಯೇ ಅರಳಬೇಕು. ಗ್ಲಾನಿಗೊಳಗಾಗಿ ಕುಸಿದು ಹೋಗಿದ್ದ ಭಾರತದ ಆತ್ಮ ಗ್ಲಾನಿಯನ್ನು ಹೋಗಲಾಡಿಸಿ ಎಲ್ಲರಿಗೂ ಈ ವಿಶ್ವ ಪ್ರಜ್ಞೆಯ ಅತಿಮಾನಸದ ಚೈತನ್ಯ ದೊರೆಯಬೇಕು ಎನ್ನುವ ಉದಾತ್ತ ಹಂಬಲದಿಂದ ಶ್ರೀ ಅರವಿಂದರು ಪಾಂಡಿಚೇರಿಗೆ ಬರುತ್ತಾರೆ. ಭೌತಿಕ ಸ್ವಾತಂತ್ರ್ಯದ

ಹೋರಾಟದಲ್ಲಿ ತೀವ್ರಗಾಮೀ ನೆಲೆಯಲ್ಲಿಯೇ ಗುರುತಿಸಿಕೊಂಡಿದ್ದ ಅವರು, ಈ ಭೌತಿಕ ಸ್ವಾತಂತ್ರ್ಯದ ಜೊತೆಗೆ ಆತ್ಮ ಸ್ವಾತಂತ್ರ್ಯದ ವ್ಯಾಪ್ತಿಯನ್ನೂ ಮನುಕುಲಕ್ಕೆ ದೊರಕಿಸಿ ಕೊಡುವ ಉದ್ದೇಶದಿಂದ, ಅದನ್ನು ಸಾಧಿಸುವದಕ್ಕಾಗಿ ಸಾಧನೆಯಲ್ಲಿ ತೊಡಗಿದ್ದು ಒಂದು ನಿಯತಿಯಲ್ಲಿ ಸಾಕಾರಗೊಂಡ ಅಪೂರ್ವ ಘಟನೆಯಾಗಿದೆ. ಇಂದಿನ ಭೌತಿಕ ಸುಖಕ್ಕೆ ವೈಜ್ಞಾನಿಕ ಕೊಡುಗೆಗಳು ಸದಾ ಭ್ರಮಾಪೂರಿತ ಸುಖವನ್ನೇ ತೋರಿಸುತ್ತಿವೆ. ಇದಕ್ಕೆ ಮಾರುಹೋದಲ್ಲಿ ಆವರಿಸಿಕೊಳ್ಳುವ ವೈಚಾರಿಕ ಶೂನ್ಯತೆಯು, ಮಾನವನ ನೈಜ ಸ್ವರೂಪವನ್ನೇ ಬದಲಿಸಿ ಬಿಡುತ್ತವೆ. ಅಲ್ಲದೇ ಭೌತಿಕದಲ್ಲಿ ಕ್ಷಣಿಕ ತೃಪ್ತಿಗಳನ್ನು ಕೊಡುವ ಸಲುವಾಗಿಯೇ ಪರಿಕರಗಳನ್ನು ರೂಪಿಸುವ ಮೂಲಕ ವಿಜ್ಞಾನವೂ ತನ್ನ ಸೀಮಿತತನವನ್ನು ಬಯಲುಗೊಳಿಸಿ–ಕೊಂಡಿದೆ. ಈ ಮೂಲಕ ತನ್ನನ್ನು ತಾನೇ ಬಂಧನಕ್ಕೆ ಒಳಪಡಿಸಕೊಂಡ ವಿಜ್ಞಾನ ಲೋಕವೂ ಸಹಿತ ಹತಾಶಗೊಂಡಿರುವ ಇಂದಿನ ವಿಷಣ್ಣ ಪರಿಸ್ಥಿಯಲ್ಲಿ, ಅನ್ವೇಷಣೆ ಅನ್ವೇಷಣೆ ಎನ್ನುತ್ತಲೇ ಕುಸಿದು ಹೋಗಿರುವ ಇಡೀ ಮಾನವ ಕುಲಕ್ಕೆ, ಒಂದು ಹೊಸ ಭರವಸೆಯ ಕಿರಣಕ್ಕಾಗಿ ಕಾಯುತ್ತಿದೆ. ಈ ರೀತಿಯ ಅಧಃಪತನಗೊಂಡಿರುವ ಸ್ಥಿತಿಯಲ್ಲಿಯೇ ಇರುವಂತೆ ಮಾನವನನ್ನು ದೇವರು ರೂಪಿಸಿಲ್ಲ. ವಿಕಸನದ ಹಂತದಲ್ಲಿ ಬಂದ ಈ ಆಘಾತಗಳನ್ನು ಸೂಕ್ತವಾಗಿ ಎದುರಿಸಿ, ತಲ್ಲಣಗೊಂಡ ಮಾನವ ಕುಲವನ್ನು ಮತ್ತೆ ಪರಿಪೂರ್ಣತೆಯ ಪಥಕ್ಕೆ ಕರೆದೊಯ್ಯಲು, ಅಲ್ಲಿ ಪಯಣವನ್ನು ಮುಂದುವರೆಸಲು, ಅವಶ್ಯವಾಗಿರುವ ಸಾಧನಾ ಪಥವನ್ನೇ ಶ್ರೀ ಅರವಿಂದರು ಸಾಕ್ಷಾತ್ಕರಿಸಿರುವದು. ಆಧುನಿಕ ಮನೋವಿಜ್ಞಾನವೂ ಸಹಿತ ಇಂದಿಗೂ ಸಂಶೋಧಿಸುತ್ತಿರುವದು 'ಮನಸ್ಸಿನ ಕೇಂದ್ರ ಯಾವುದು' ಎನ್ನುವ ವಿಷಯವಾಗಿದೆ. ಆದರೆ ಶ್ರೀ ಅರವಿಂದರು ಈ ಮನಸ್ಸು ಹೊಂದಿರುವ ಆಯಾಮಗಳ ಕುರಿತು, ಅದು ಆ ಊರ್ಧ್ವದಲ್ಲಿರುವ ಅನಂತ ಚೈತನ್ಯದಿಂದಲೇ ರೂಪಿತಗೊಂಡಿದ್ದು, ತಾತ್ಕಾಲಿಕವಾಗಿ ಆವರಿಸಿರುವ ಈ ಭೌತಿಕ ಬಂಧನದಿಂದ ಮುಕ್ತಿ ಪಡೆಯುವ ಅಥವಾ ಈ ಭೌತಿಕದ ಸ್ಪಂದನದಲ್ಲಿಯೇ ಆ ತುರಿಯವನ್ನು ಕಾಣುವ ವಿಧಾನವನ್ನು ತಮ್ಮ ನವೀನ "ಪೂರ್ಣ ಯೋಗ"ದಲ್ಲಿ ನಿರೂಪಿಸಿದ್ದಾರೆ. ಮಾನವನ ಮನಸ್ಸು ಅಡಗಿಸಿಕೊಂಡಿರುವ ಈ ಮಹದ್–ಶಕ್ತಿಯನ್ನು ಜಾಗ್ರತಗೊಳಿಸುವ ಮೂಲ ಹೇಗೆ ವಿಶ್ವ ಪ್ರಜ್ಞೆಯ ಹಿನ್ನೆಲೆಯಲ್ಲಿ ಮಾನವ ಕುಲವನ್ನು ಪೂರ್ಣತ್ವದ ಹಂತ ತಲುಪಲು ಸಾಧ್ಯವಿರುವ ಪಥದ ಕುರಿತು ತಮ್ಮ

ಕೃತಿಗಳಲ್ಲಿ ವಿವೇಚಿಸಿದ್ದಾರೆ. ಶ್ರೀ ಅರವಿಂದರು ಪಾಂಡೀಚೇರಿಗೆ ಬಂದ ಅವಧಿಯಲ್ಲಿ ಇಡೀ ಭಾರತದ ಆತ್ಮ ಯಾವ ರೀತಿಯ ಗೊಂದಲದಲ್ಲಿತ್ತೋ ಅದೇ ರೀತಿಯ ಗೊಂದಲವನ್ನು ಇಂದು ಭಾರತ ಮಾತ್ರವಲ್ಲದೇ ವಿಶ್ವಾದ್ಯಂತ ಕಾಣುತ್ತಿದ್ದೇವೆ. ಇಡೀ ವಿಶ್ವವೇ ಮುಳುಗಿಹೋಗುತ್ತದೆಯೇನೋ ಎನ್ನುವ ವಿಪ್ಲವಕಾರೀ ಘಟನೆಗಳು ಸಾಕ್ಷಿಯಾಗುತ್ತಿವೆ. ಇಂತಹ ಸಂದಿಗ್ಧ ಸ್ಥಿತಿಯಿಂದ ಹೊರಬಂದು, ಆತ್ಮಿಕವಾಗಿಯೂ ಬದುಕಿಗೆ ಹೇಗೆ ಸಮನ್ವಯತೆಯನ್ನು ಸಾಧಿಸಿಕೊಳ್ಳಬಹುದು ಎನ್ನುವ ಹಿನ್ನೆಲೆಯಲ್ಲಿ ಈ ಸಂಚಿಕೆ, ಆ ಪಥದಲ್ಲಿ ತನ್ನ ಪಯಣ ಮುಂದುವರೆಸಿದೆ. ಪೂರ್ಣ ಯೋಗದ ಕುರಿತು ಅದನ್ನು ಹೇಗೆ ಸಪ್ತ ಚತುಷ್ಟಯಗಳ ಅನ್ವಯಿಕೆಯಲ್ಲಿ ಅಳವಡಿಸಿಕೊಳ್ಳಬಹುದು ಎಂದು ಅವರು ಹೇಳುವ ಮೂಲಕ, ಮಾನವನು ಈ ಮೊದಲು ನಿಸರ್ಗ ಸಹಜವಾಗಿಯೇ ಹೊಂದಿದ ಸಾಮರ್ಥ್ಯವನ್ನು ಮತ್ತೆ ಪಡೆದುಕೊಳ್ಳುವ ವಿಧಾನಗಳನ್ನು ಅನುಷ್ಠಾನಗೊಳಿಸಿದ್ದಾರೆ.

> ನಿರ್ಗುಣದ ಗಗನ–ಮಂಡಲಕೆ ವರ್ಣ–ದಂಡೆಗಳ ಮುಡಿಸಲೆಂದು
> ಸ್ವಯಂ–ಲೀಲೆಯಲಿ ಉದಿತ ಮೋದದಲಿ ವಿಕಸನಕೆ ಸಜ್ಜುಗೊಂಡು
> ಜಾಗರಣಗೊಂಡ ಅವನ ಮನವೀಗ, ನಿರ್ಮಾಯ, ಮುಗ್ಧ–ಬದ್ಧ
> ಅವನಿಗವನಲ್ಲಿ ಜೊತೆ ವಿಶ್ವ ಸಹಿತ ಲಿಖಿಸಲೆನೆ ಇರುವ ಶುದ್ಧ
>
> ವಿಜ್ಞಾನಮಯದ ಸಂಭೂತಿಯಿದುವು ನಿಯತದಲಿ ನಿಖರ ನಿತ್ಯ
> ಪ್ರಕೃತಿಯಾ ಸರ್ವ–ಸಾಮಾನ್ಯ–ತಥ್ಯ ಸಮಾನತೆಯಲ್ಲಿ ಸತ್ಯ
> ತೇಜ–ದೀಪ್ತಿಯಲಿ ಕಾಂತಿ ಸೂಸುತಿಹ ಪ್ರಭೆ ಮಿನುಗು ದೇಹವೀಗ
> ಅಂತರಾತ್ಮದಲಿ ಅಂತರ್ನಿವಾಸಿಯಾಗಿರುವ ದೇವನಾಗ

**(ಸಾವಿತ್ರಿ; ದಳ 1 ರೇಣು 5 ಪುಟ 71)**

## ‘ಶ್ರೀ ಅರವಿಂದ ಪಂಚಕ’

ಆಶ್ರಮದ ನಟ್ಟ ನಡು ಗಿಡದ ನೆರಳಲ್ಲಿ
ಶ್ರೀ ಅರವಿಂದ ಸದನ!
ಶಾಂತಿ ಸಂಚರಿಸುವದು, ಮೌನ ಮಾತಾಡುವದು –
ಆನಂದದ ಭವನ!

ಇಂತಿಪ್ಪ ಶ್ರೀಗುರು ಸದನದ ಮೇಲೆ
ಹಾಸಿರುವ ಹೂವುಗಳ ರಾಶಿ!
ಗುಲಾಬಿ ಹೂ ಸೋಸಿ, ಪಾರಿಜಾತ ಹಾಸಿ
ಊದು – ಗುಗ್ಗುಳ– ಶ್ರೀಗಂಧ ಮೂಸಿ!

ಕಮಲ ಕೇದಗೆ ಕರಿತುಂಬಿ ಕಣಗಿಲ
ಕಾಮಕಸ್ತೂರಿ ಕಲ್ಬಾಳೆ ಹೂವು
ಜಾಲಿ – ಆಬಾಲಿ – ಬನ್ನಿ – ಸುರಹೊನ್ನಿ – ಶಿರಸ
ಸಂಪಿಗಿ–ಸೇವಂತಿಗೆ ಹೂವು!

ಉದ್ಧಾರವಾದವು ಹೂವುಗಳ ಕುಲಕೋಟಿ
ಶ್ರೀಗುರು ಸದನವೇರಿ!
ಸಮಾಧಿ ಸುತ್ತಲು ನಿತ್ಯ ನಮಸ್ಕರಿಸಿ
ಎರೆಯುವರು ಹೃದಯ–ಧಾರಿ!

ತಾಯ ನಗೆ ನೋಡಿ, ತಾಯ ಧ್ವನಿ ಕೇಳಿ ಬಾಳುವರ
ಭಾಗ್ಯ ದೊಡ್ಡದು!
ಶ್ರೀ ತಾಯಿ ಶ್ರೀ ಅರವಿಂದರಿಗೆ ನಮಿಸುತ್ತ ಮುಗಿಸುವೆ
ಮುಗಿಯದ ಹಾಡು!

ನೂರು ವರುಷದ ಸಾರ ಹೇಳುವೆನು
ಸತ್ಯವಂತರಿಗೆ ಸದ್ಭಕ್ತರಿಗೆ
ಶ್ರೀಗುರು ಅರವಿಂದರ ಶ್ರೀ ಮೀರಾಮಾತೆಯ
ಮಮತೆಯ ಮಕ್ಕಳಿಗೆ!

ಶ್ರೀ ಚೆನ್ನಮಲ್ಲರ (ಮಧುರಚೆನ್ನರ) ಹಿರಿಯ ಮಗಳು ಸೌ. ಸರೋಜಿನಿ ಗೋಗಿಯವರು 'ಹದಿಬದೆಯ ಧರ್ಮ'ದ ಜಾನಪದ ಧಾಟಿಯಲ್ಲಿ ತಾವೇ ರಚಿಸಿದ ಸು. 100 ಸಾಲುಗಳುಳ್ಳ 'ಶ್ರೀ ಅರವಿಂದ ಪಂಚಕ'ವನ್ನು ಸುಮಧುರವಾಗಿ ಹಾಡಿ ತೋರಿಸಿದ್ದಾರೆ. ಅದರ ಕೊನೆ ಕೊನೆಯ ಸಾಲುಗಳು)

ಬದುಕಿಗೆ ಹೇಗೆ ತಾದಾತ್ಮ್ಯೆಯನ್ನು ಸಾಧಿಸಿಕೊಳ್ಳಬಹುದು ಎನ್ನುವ ಹಿನ್ನೆಲೆಯಲ್ಲಿ ಈ ಸಂಚಿಕೆ ರೂಪಿತವಿದೆ. (ಪಿಪಿಕೆ)

# ಪರಿಕಲ್ಪನೆ

**– ಅನು: ಪುಟ್ಟು ಕುಲಕರ್ಣಿ**




## ಭೂಮಿಯ ಸ್ಥಿತಿ–ಗತಿ

ಭೂಮಿಯ ಸ್ಥಿತಿ–ಗತಿಯ ಸ್ವರೂಪ ಈ ರೀತಿಯಾಗಿದೆ. ಇದೇನೂ ಅಷ್ಟೊಂದು ಉಜ್ವಲವಾಗಿಲ್ಲ. ಆದರೂ ನಮಗೆ ಇದನ್ನು ಉಜ್ವಲಗೊಳಿಸಿಕೊಳ್ಳಲು ಸಾಕಷ್ಟು ಸಾಧ್ಯತೆಗಳು ಉಳಿದುಕೊಂಡಿವೆ– ಈ ವಿಷಯವನ್ನು ನಾನು ಇದಾಗಲೇ ನಿಮ್ಮ ಬಳಿ ಅನೇಕ ಸಲ ಮಾತನಾಡಿದ್ದೇನೆ–ಆದಾಗ್ಯೂ, ಬಹಿರಂಗದಲ್ಲಿ ಎಲ್ಲ ಸಂಗತಿಗಳೂ ಸಂಪೂರ್ಣವಾಗಿ ಕ್ಷೀಣಗೊಳ್ಳತೊಡಗಿದ್ದು, ಪ್ರಳಯಸ್ವರೂಪಿ ಘಟನೆಯ ಸಂದರ್ಭವನ್ನು ತಪ್ಪಿಸಲು ಸಾಧ್ಯವಿಲ್ಲವೇನೋ ಎನಿಸುತ್ತಿದೆ. ಆದರೂ ಇಲ್ಲೊಂದು ಆಶಾಕಿರಣವಿದ್ದು, ಯಾರು ಈ ಅಧಿಮಾನಸದ ಹಂತವನ್ನು ಸ್ಪಂದಿಸುತ್ತಾರೆಯೋ ಅವರಿಗೆ ಈ ಜೀವನವೆನ್ನುವದು ಕೇವಲ ಒಂದು ಭ್ರಮೆಯಾಗಿರುವದಿಲ್ಲ. ಯಾರು ನೈಜತೆಯ(ನಿತ್ಯತ್ವದ) ಕುರಿತು ವಿಶ್ವಾಸವನ್ನು ಹೊಂದಿ, ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಅಭೀಪ್ಸೆಯನ್ನು ಹೊಂದಿರುತ್ತಾರೆಯೋ– ಹಾಗೆಂದು ಈ ಪಾಂಡಿಚೇರಿ ಆಶ್ರಮವಾಸಿಗಳಾಗಲೆಂದು ಇಲ್ಲಿಗೆ ಆಗಮಿಸಿರುವವರು ಮಾತ್ರವಲ್ಲ ಎನ್ನುವದು ನನ್ನ ಅಭಿಪ್ರಾಯ– ಯಾರು ಶ್ರೀ ಅರವಿಂದರ ಜ್ಞಾನದ ಪಥದಲ್ಲಿ ತಮ್ಮನ್ನು ತಾವು ಅರಿತುಕೊಳ್ಳಲು ಸಾಧನೆಯಲ್ಲಿದ್ದಾರೆಯೋ ಅವರನ್ನು ಒಳಗೊಂಡಂತೆ, ಅವರವರ ಜೀವನ ವಿಧಾನದಂತೆ ಮತ್ತು ಆ ಜ್ಞಾನದ ಸೂತ್ರಕ್ಕೆ ಅನುಗುಣವಾಗಿ ಸಾಗುವ ಇಚ್ಛೆಯನ್ನು ಹೊಂದಿ, ಅದರ ಅನ್ವಯವಾಗಿ ಸಕಾರಣವಾಗಿ, ಆತ್ಮಾಭಿಲಾಶೆಯಲ್ಲಿ,

ಸತತ ಪ್ರಯತ್ನದಲ್ಲಿ ಮತ್ತು ತಮ್ಮಲ್ಲಿರುವ ಆಂತರ್ಯದ ಶಕ್ತಿಯನ್ನು ಕೇಂದ್ರೀಕರಿಸಿ–ಕೊಂಡು, ಸಾಕ್ಷಾತ್ಕಾರದ ಅವಧಿಯನ್ನು ಶೀಘ್ರದಲ್ಲಿ ಪಡೆದುಕೊಳ್ಳಬಹುದು. ವೈಯಕ್ತಿಕವಾಗಿ ಪ್ರತಿಯೊಬ್ಬನೂ ಪವಾಡಸದೃಶ ರೀತಿಯಲ್ಲಿಯೇ ಬದುಕು ನಡೆಸಿ – ಒಂದು ಹಂತದವರೆಗೆ ಸಮಷ್ಟಿಯಲ್ಲಿಯೂ ಅಂಶಾಂಶವಾಗಿ – ಅವಕಾಶಗಳನ್ನು ಗೆಲ್ಲುತ್ತ, ಸಾಕ್ಷಾತ್ಕಾರದ ಸಲುವಾಗಿನ ಅವಧಿಯನ್ನು ಕಡಿಮೆ ಮಾಡಿಕೊಳ್ಳುತ್ತ ಸಾಗಬಹುದು. ಅದೂ ಅಲ್ಲದೇ ಉದ್ದೇಶಪೂರ್ವಕವಾಗಿಯೇ ತನ್ನ ಸಾಧನೆಯ ಮಾರ್ಗದಲ್ಲಿ ಶೀಘ್ರಾತಿಶೀಘ್ರವಾಗಿ ಸಾಗುತ್ತ ಆ ದಿಸೆಯಲ್ಲಿ ಪ್ರಯತ್ನಗಳನ್ನು ನಡೆಸುತ್ತ, ಸಾಗಿದಲ್ಲಿ ಅವರಿಗೆ ಈ ಸಾಕ್ಷಾತ್ಕಾರದ ಪಥದ ಮೂಲಕ ಮುಕ್ತಿಯನ್ನು (ಮುಕ್ತತ್ವವನ್ನು) ಲಭ್ಯಗೊಳಿಸಿಕೊಳ್ಳಬಹುದು. ಅಲ್ಲಿರುವ ಬಲ, ಸಾಮರ್ಥ್ಯ, ಪ್ರಕಾಶ, ಸತ್ಯಗಳ ಮೂಲಕ ಸೂಕ್ತವಾದ ಸುರಕ್ಷೆಯನ್ನು ಪಡೆದುಕೊಳ್ಳುತ್ತ, ಊರ್ಧ್ವದಿಂದ ಧಾರಾಕಾರಗೊಳ್ಳುತ್ತಿರುವ ಆ ದಿವ್ಯ ಪ್ರಕಾಶ ಮತ್ತು ಪರಮ ಸತ್ಯದ ಪರಿಶುದ್ಧತೆಯನ್ನು ಪಡೆದುಕೊಳ್ಳುತ್ತ ರೂಪಾಂತರಣ ಹೊಂದಬಹುದು. ಆಗ ಅಲ್ಲಿ ಉದ್ಭವಿಸಬಹುದಾದ ಯಾವುದೇ ಚಂಡಮಾರುತಗಳೂ ಇಲ್ಲಿ ಯಾವ ಉತ್ಪಾತಗಳನ್ನೂ ರೂಪಿಸಲು ಸಾಧ್ಯವಿರುವದಿಲ್ಲ. ಭವಿಷ್ಯವನ್ನು ತಲ್ಲಣಗೊಳಿಸಲು ಸಾಧ್ಯವಿರುವದಿಲ್ಲ.

ಘಟನೆಗಳು ತಮ್ಮಷ್ಟಕ್ಕೆ ತಾವೇ ನಡೆದುಹೋಗಲಿ ಎನ್ನುವ ಮನೋಭಾವದಲ್ಲಿ ಜಡಭಾವದ ಸಮಾಧಾನದಲ್ಲಿ ಮಗ್ನರಾಗಿರುವದಕ್ಕಿಂತ, ತಮ್ಮ ತಮ್ಮ ದೃಢತೆ, ಇಚ್ಛಾಶಕ್ತಿ, ಉತ್ಸಾಹ ಮತ್ತು ಆಕಾಂಕ್ಷೆಗಳ ಮೂಲಕ ಪ್ರಯತ್ನಿಸಿದಲ್ಲಿ ಆ ಪ್ರಕಾಶದ ನೆಲೆಗೆ ಮುಂಚೂಣಿಯಲ್ಲಿ ಸಾಗಲು ಸಾಧ್ಯವಾಗುತ್ತದೆ. ಸದಾ ತಲೆಯನ್ನು ಎತ್ತಿಕೊಂಡು ಆತ್ಮವಿಶ್ವಾಸದಿಂದ ನಡೆಯಬಹುದು. ಚೇತನದ ಆ ಊರ್ಧ್ವಾತಿಊರ್ಧ್ವ ತಾಣದ ಕ್ಷೇತ್ರದಲ್ಲಿ ನೆಲೆ ನಿಲ್ಲಬಹುದು, ಸದಾ ಸುತ್ತುತ್ತಿರುವ ಜಂಝಾವಾತಗಳ ಮಧ್ಯದಲ್ಲಿಯೂ ಅದರಿಂದ ಪುಟಿದೇಳಬಹುದು.

ಇದು ಖಂಡಿತವಾಗಿಯೂ ಲಭ್ಯವಾಗುವದು. ಏಕೆಂದರೆ ಇದಾಗಲೇ ಲಭ್ಯವೂ ಆಗಿದೆ. ಅಲ್ಪ ಪ್ರಮಾಣದಲ್ಲಿಯಾದರೂ ಸರಿ ಇದು ದೊರೆತೇ ದೊರೆಯುತ್ತದೆ. ಆದರೆ ಇಲ್ಲಿ ಇದನ್ನು ಅಪೇಕ್ಷಿಸುವ ಪ್ರತಿಯೊಬ್ಬ ವ್ಯಕ್ತಿಯೂ ಅವನ ಕಾರ್ಯವನ್ನು ಪ್ರಾಮಾಣಿಕವಾಗಿ ಪೂರ್ಣಗೊಳಿಸಿಕೊಳ್ಳುವ ಸಲುವಾಗಿ ಸಾಧನೆಯಲ್ಲಿ ತೊಡಗಿಕೊಳ್ಳಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/170–71** **– ಶ್ರೀಮಾತೆ**

# ಒಂದು ಸ್ವಪ್ನ

– ಅನು: ನಾಗಜ್ಯೋತಿ ಮಾನ್ವಿ

## ಒಂದು ಕನಸು ಇಲ್ಲಿ ಬಿತ್ತಲ್ಪಟ್ಟಿದೆ

ಪೃಥ್ವಿಯ ಮೇಲೆ ಎಲ್ಲೋ ಒಂದು ಜಾಗವಿರಲೇಬೇಕು. ಅದನ್ನು ಯಾವುದೇ ದೇಶವು ತನ್ನದು ಎಂದು ಕರೆಯಬಾರದು. ಪ್ರಾಮಾಣಿಕ ಅಭೀಪ್ಸೆಯನ್ನು ಹೊಂದಿದ ಸದ್ಭಾವದಿಂದ ಕೂಡಿದ ಮಾನವ ಕುಲವು ಆ ಜಗತ್ತಿನ ನಾಗರಿಕರಾಗಿ ಸ್ವತಂತ್ರವಾಗಿ ಜೀವಿಸಬೇಕು ಮತ್ತು ಏಕೈಕ ಅಧಿಕಾರಕ್ಕೆ ವಿಧೇಯರಾಗಿರಬೇಕು. ಅದು ಪರಮ ಸತ್ಯವೇ ಆಗಿರಬೇಕು. ಅದು ಶಾಂತ, ಹೊಂದಾಣಿಕೆ ಮತ್ತು ಸಾಮರಸ್ಯದ ತಾಣವಾಗಿದ್ದು ಅಲ್ಲಿ ಮನುಷ್ಯನ ಹೋರಾಟದ ಎಲ್ಲಾ ಸಹಜ ಪ್ರವೃತ್ತಿಗಳನ್ನು ಕೇವಲ ಆತನ ದುಃಖ ಮತ್ತು ಸಂಕಟಗಳ ಕಾರಣವನ್ನು ಜಯಿಸಲು ಉಪಯೋಗಿಸಬೇಕು. ತನ್ನ ಅಶಕ್ತತೆ ಮತ್ತು ಅಜ್ಞಾನವನ್ನು ನಿವಾರಿಸಲು, ತನ್ನ ಅಶಕ್ತತೆ ಮತ್ತು ಮಿತಿಗಳ ಮೇಲೆ ಜಯ ಸಾಧಿಸಬೇಕು. ಆ ಸ್ಥಳದಲ್ಲಿ ಆಶೆ ಆಕಾಂಕ್ಷೆಗಳನ್ನು ತೃಪ್ತಿಪಡಿಸಿಕೊಳ್ಳುವ, ಆ ಸುಖವನ್ನು ಅರಸುವ ಮತ್ತು ಭೌತಿಕ ಸುಖವನ್ನು ಆಸ್ವಾದಿಸುವದಕ್ಕಿಂತಲೂ ಆತನ ಅವಶ್ಯಕತೆ ಮತ್ತು ಪ್ರಗತಿಯ ಬಗೆಗೆ ಇರುವ ಕಾಳಜಿಯು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿರಬೇಕು. ಈ ಜಾಗದಲ್ಲಿ ಮಕ್ಕಳು ತಮ್ಮ ಆತ್ಮನ ಜೊತೆಗೆ ಸಂಪರ್ಕವನ್ನು ಕಳೆದುಕೊಳ್ಳದೇ ಸಮಗ್ರವಾಗಿ ಬೆಳೆಯಲು ಸಾಧ್ಯವಾಗಬೇಕು; ಶಿಕ್ಷಣವನ್ನು ಕೇವಲ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಲು ಅಥವಾ ಪ್ರಮಾಣ–ಪತ್ರ ಗಳಿಸಲು ಮತ್ತು ಸ್ಥಾನಮಾನವನ್ನು ಗಳಿಸಲು ಮಾತ್ರವಲ್ಲದೇ ಈಗಿರುವ ಸಾಮರ್ಥ್ಯ ಮತ್ತು ಬುದ್ಧಿಶಕ್ತಿಯನ್ನು ಶ್ರೀಮಂತಗೊಳಿಸಲು ಮತ್ತು ಹೊಸ ಸಾಮರ್ಥ್ಯ ಮತ್ತು ಬುದ್ಧಿಶಕ್ತಿಗಳನ್ನು ಹೊರತರಲು ಶಿಕ್ಷಣವನ್ನು ಕೊಡಲಾಗುತ್ತದೆ. ಈ ಜಾಗದಲ್ಲಿ ಅಧಿಕಾರ ಮತ್ತು ಮತ್ತು ಸ್ಥಾನಮಾನದ ಬದಲಾಗಿ ಸೇವೆ ಮತ್ತು ಸಂಘಟನೆಗಳಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಪ್ರತಿಯೊಬ್ಬರ ದೇಹದ ಅವಶ್ಯಕತೆಗಳನ್ನು ಒದಗಿಸಲಾಗುವದು ಮತ್ತು ಪ್ರಾಣದ ಶಕ್ತಿ ಮತ್ತು ಸುಖಗಳನ್ನು ಹೆಚ್ಚಿಸುವದರಿಂದ ಅಲ್ಲದೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸುವದರಿಂದ ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಶ್ರೇಷ್ಠತೆಯನ್ನು ಸಾಮಾನ್ಯ ಸಂಘಟನೆಯಲ್ಲಿ ವ್ಯಕ್ತಪಡಿಸಲಾಗುತ್ತದೆ. ಸೌಂದರ್ಯವು ತನ್ನೆಲ್ಲಾ ಕಲಾತ್ಮಕ ರೂಪಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ಸಾಹಿತ್ಯಗಳು ಸಮಾನವಾಗಿ ಎಲ್ಲರಿಗೂ

ನಿಲುಕುವಂತಿರಬೇಕು; ಇದರಿಂದ ದೊರೆಯುವ ಸಂತೋಷವನ್ನು ಹಂಚಿಕೊಳ್ಳುವ ಯೋಗ್ಯತೆಯ ಅವರವರ ಸಾಮರ್ಥ್ಯದ ಮಿತಿಯ ಮೇಲೆ ಅವಲಂಬಿತ–ವಾಗಿರುತ್ತದೆಯೇ ಹೊರತು ಯಾವುದೇ ಆರ್ಥಿಕ ಅಥವಾ ಸಾಮಾಜಿಕ ಸ್ಥಾನಮಾನದ ಮೇಲೆ ಅಲ್ಲ. ಇಂತಹ ಆದರ್ಶಮಯ ಸ್ಥಳದಲ್ಲಿ ಹಣವು ಸಾರ್ವಭೌಮ ಒಡೆಯನಾಗಿರುವದಿಲ್ಲ; ವೈಕ್ತಿಕ ಯೋಗ್ಯತೆಗೆ ಬಹಳ ಮಹತ್ವ ಕೊಡಲಾಗುವದು ಅದು ವೈಯಕ್ತಿಕ ಯೋಗ್ಯತೆಗೆ ಬಹಳ ಮಹತ್ವ ಕೊಡಲಾಗುವದು. ಅದು ಯಾವುದೇ ಭೌತಿಕ ಸಂಪತ್ತು ಮತ್ತು ಸಾಮಾಜಿಕ ಸ್ಥಾನಮಾನದ ಮೇಲೆ ಅವಲಂಬನವಾಗಿರುದಿಲ್ಲ. ಅಲ್ಲಿ ಕೆಲಸವು ಬದುಕುವದಕ್ಕಾಗಿ ಗಳಿಕೆ ಮಾಡುವ ಮಾರ್ಗವಾಗಿರುವದಿಲ್ಲ. ಆದರೆ ಆ ಸಮುದಾಯಕ್ಕಾಗಿ ಕೆಲಸ ಮಾಡುತ್ತಾ ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳಲು ಮತ್ತು ತನ್ನ ಸಾಮರ್ಥ್ಯ ಮತ್ತು ಸಾರ್ಥಯತೆಗಳನ್ನು ಬೆಳೆಸಿಕೊಳ್ಳುವ ಮಾರ್ಗವಾಗಿದೆ, ಸಮೂಹವು ಪ್ರತಿಯೊಬ್ಬರು ಬದುಕಲು ಮತ್ತು ಅವರ ಕಾರ್ಯಕ್ಷೇತ್ರಕ್ಕೆ ಸ್ಥಳಾವಕಾಶ ಮಾಡಿಕೊಡುತ್ತದೆ. ಸಂಕ್ಷಿಪ್ತವಾಗಿ ಹೇಳುವದಾದರೆ ಈ ಸ್ಥಳದಲ್ಲಿ ಎಲ್ಲಾ ಮಾನವ ಸಂಬಂಧಗಳು, ಅವು ಸಾಮಾನ್ಯವಾಗಿ ಕೇವಲ ಸ್ಪರ್ಧೆ ಮತ್ತು ಹೋರಾಟದ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಇಲ್ಲಿ ಎಲ್ಲಾ ಸಂಬಂಧಗಳು ನಿಜವಾದ ಭ್ರಾತೃತ್ವ, ಸಹಯೋಗ ಮತ್ತು ಸದ್ಭಾವದ ಮೇಲೆ ಅವಲಂಬಿತವಾಗಿರುತ್ತವೆ. ಇಂತಹ ಆದರ್ಶವನ್ನು ಸಾಕ್ಷಾತ್ಕರಿಸಿಕೊಳ್ಳಲು ಪೃಥ್ವಿಯು ಇನ್ನೂ ಸಿದ್ಧವಾಗಿಲ್ಲ. ಮಾನವ ಜನಾಂಗಕ್ಕೆ ಇದನ್ನು ಅರ್ಥಮಾಡಿಕೊಳ್ಳಲು ಮತ್ತು ಇದಕ್ಕೆ ಹೊಂದಿಕೊಳ್ಳಲು ಇನ್ನೂ ಸಾಕಷ್ಟು ಜ್ಞಾನವನ್ನು ಅದು ಪಡೆದುಕೊಂಡಿಲ್ಲ. ಇದನ್ನು ಕಾರ್ಯರೂಪಕ್ಕೆ ತರಲು ಅತ್ಯವಶ್ಯಕವಾದ ಚಿತ್–ಶಕ್ತಿಯ ಕೊರತೆಯಿದೆ; ಈ ಕಾರಣದಿಂದಲೇ ಇದನ್ನು ನಾನು ಕನಸೆಂದು ಕರೆಯುತ್ತೇನೆ.

ಆದಾಗ್ಯೂ ಈ ಕನಸು ನಿಜವಾಗುವ ದಾರಿಯಲ್ಲಿ ಹೊರಟಿದೆ; ಒಂದು ಸಣ್ಣ ಪ್ರಮಾಣದಲ್ಲಿ ನಮ್ಮ ಇತಿಮಿತಿಗೆ ಅನುಗುಣವಾಗಿ ಈ ಕಾರ್ಯ ಮಾಡಲು ಶ್ರೀಅರವಿಂದರ ಆಶ್ರಮದಲ್ಲಿ ನಾವು ಪ್ರಯತ್ನಿಸುತ್ತಿದ್ದೇವೆ. ಇದರ ಸಾಕ್ಷಾತ್ಕಾರವು ಪರಿಪೂರ್ಣತೆಗೆ ಬಹಳ ದೂರವೇ ಇದೆ. ಆದರೆ ಇದು ಪ್ರಗತಿಪರವಾಗಿದೆ; ಸ್ವಲ್ಪಸ್ವಲ್ಪವಾಗಿ ಗುರಿಯ ಕಡೆಗೆ ಮುಂದುವರೆಯುತ್ತಿದ್ದೇವೆ. ನಮ್ಮ ಭರವಸೆ ಏನೆಂದರೆ, ಒಂದು ದಿನ ಜಗತ್ತಿನ ಗೊಂದಲಗಳಿಂದ ಹೊರಬರುವ ಪ್ರಾಯೋಗಿಕ ಪ್ರಭಾವಶಾಲಿ ದಾರಿಯೊಂದು ರೂಪಗೊಳ್ಳಬೇಕಾಗಿದೆ. ಒಂದು ಹೊಸ ಜೀವನ –

ಅದು ಹೆಚ್ಚು ನೈಜತೆಯಿಂದ ಮತ್ತು ಸಾಮರಸ್ಯದಿಂದ ಕೂಡಿದ ಮರುಹುಟ್ಟು ಆಗಲಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/94**

## ಪ್ರಕ್ರಿಯೆ

ಶ್ರೀ ಅರವಿಂದರು ನಮಗೆ ಇದನ್ನು ಹೇಳಿದ್ದಾರೆ ಮತ್ತು ನಾವು ಅದನ್ನು ನಮ್ಮ ಅನುಭವದಿಂದ ಕಂಡುಕೊಂಡಿದ್ದೇವೆ. ಅದೇನೆಂದರೆ, ಮನಸ್ಸಿನ ಆಚೆಗೆ ಮಾನಸಿಕ ಪ್ರಜ್ಞೆಗಿಂತಲೂ ಹೆಚ್ಚಿನ ವಿವೇಕತೆಯಿಂದ ಕೂಡಿದ ಪ್ರಜ್ಞೆಯಿದೆ ಮತ್ತು ವಸ್ತುಗಳ ಆಳದಲ್ಲಿ ಒಂದು ಸಂಕಲ್ಪವಿದೆ, ಅದು ಮಾನವನ ಸಂಕಲ್ಪಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾಗಿದೆ.

ನಮ್ಮ ಎಲ್ಲಾ ಪ್ರಯತ್ನವೆಂದರೆ, ಈ ಪ್ರಜ್ಞೆ ಮತ್ತು ಈ ಸಂಕಲ್ಪವು ನಮ್ಮ ಜೀವನದ ಕ್ರಿಯೆ ಹಾಗು ಎಲ್ಲಾ ಚಟುವಟಿಕೆಗಳನ್ನು ಸಂಘಟಿಸಬೇಕು ಜೊತೆಗೆ ಅದನ್ನು ನಿರ್ವಹಿಸಲು ತನ್ನ ಆಡಳಿತಕ್ಕೆ ಇಟ್ಟುಕೊಳ್ಳಬೇಕು. ಈ ರೀತಿಯ ಆಶಯದಿಂದ ಈ ಆಶ್ರಮವು ಸ್ಥಾಪಿತಗೊಂಡಿದೆ. 1926 ರಿಂದ ಶ್ರೀ ಅರವಿಂದರು ಏಕಾಂತವಾಸಕ್ಕೆ ತೆರಳಿದ ನಂತರ ಆಶ್ರಮದ ಸಂಪೂರ್ಣ ಹೊಣೆಗಾರಿಕೆ ನನಗೆ ವಹಿಸಿದರು. (ಆ ಕಾಲದಲ್ಲಿ ಕೇವಲ ಎರಡೇ ಬಾಡಿಗೆ ಮನೆಗಳಿದ್ದವು. ಕೆಲವೇ ಕೆಲವು ಶಿಷ್ಯರಿದ್ದರು. ಎಲ್ಲವೂ ಈಗ ಬೆಳೆದಿದೆ. ಒಂದು ಅರಣ್ಯದ ರೀತಿಯಲ್ಲಿ ಅಭಿವೃದ್ಧಿಯಾಗಿದೆ. ಇಲ್ಲಿಯ ಎಲ್ಲಾ ಸೇವೆಗಳನ್ನು ಕೃತಕ ಯೋಜನೆಗಳಿಂದ ಮಾಡಲ್ಪಡದೇ, ಅವುಗಳೆಲ್ಲವೂ ಒಂದು ಜೀವಂತ ಮತ್ತು ಕ್ರಿಯಾಶೀಲ ಅವಶ್ಯಕತೆಗೆ ಅನುಗುಣವಾಗಿ ಮಾಡಲಾಗಿದೆ. ಇದೇ ಸತತ ಬೆಳವಣಿಗೆಯ ಮತ್ತು ನಿರಂತರ ಪ್ರಗತಿಯ ರಹಸ್ಯವೂ ಆಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 11 ಮಾರ್ಚ್, 1964**

## ಆಶ್ರಮದಲ್ಲಿನ ಜೀವನದ ತಳಹದಿ

ಇಲ್ಲಿ ಜೀವನದ ತಳಹದಿಯು ಸಂಪೂರ್ಣವಾಗಿ ಆಧ್ಯಾತ್ಮವಾಗಿದೆ. ಒಂದು ಅಂತರಂಗದ ಶಿಸ್ತನ್ನು ಇಲ್ಲಿ ಕೊಡಲಾಗುವದು. ಆದರೆ ಒಂದು ವಿಶಾಲ ರೀತಿಯಲ್ಲಿ

ಪ್ರತಿಯೊಬ್ಬರಿಗೂ ಅವಶ್ಯಕವಾದ ಸಾಮರ್ಥ್ಯವನ್ನೂ ಅವರವರ ಪ್ರಕೃತಿ ಮತ್ತು ಮನೋಧರ್ಮಕ್ಕೆ ಅನುಗುಣವಾಗಿ ಕೊಡಲಾಗುವದು. ಅದರಿಂದ ಸಹಜವಾದ ಬೆಳವಣಿಗೆ ಮತ್ತು ಬದಲಾವಣೆಗಳಾಗುತ್ತಿವೆ. ಒಂದು ವಿಶಾಲಾರ್ಥದಲ್ಲಿ ಸಾಧನವು ಗುರುವಿಗೆ, ಆ ದೈವತ್ವಕ್ಕೆ ಅಂತರಂಗದಲ್ಲಿ ಮತ್ತು ಅದರ ಆಧಾರದಲ್ಲಿ ಬಹಿರಂಗದಲ್ಲಿಯೂ ಸಹ ತನ್ನನ್ನು ತಾನು ಪ್ರಗತಿಪರವಾಗಿ ಶರಣಾಗತಿ ಮಾಡುವದರಲ್ಲಿ ಅಡಕವಾಗಿದೆ; ಧ್ಯಾನ, ಏಕಾಗ್ರತೆ, ಕರ್ಮ, ಸೇವೆಗಳೆಲ್ಲದರ ಮೂಲಕ ನಮ್ಮೆಲ್ಲಾ ಚಲನವಲನಗಳನ್ನು ಒಟ್ಟುಗೂಡಿಸಿ ನಮ್ಮನ್ನು ನಾವು ಒಂದು ಉನ್ನತ ಶಕ್ತಿಗೆ ಅರ್ಪಿಸಿಕೊಳ್ಳುವದೇ ಮೂಲ ಗಮ್ಯವಾಗಿದೆ. ಅದು ನಮ್ಮ ಸತ್ತೆಯಲ್ಲಿ ಕಾರ್ಯವಹಿಸಿ ಆ ಗುರಿಯ ಕಡೆಗೆ ಕರೆದೊಯ್ಯುತ್ತದೆ. ಶ್ರೀಮಾತೆಯವರು ಇಲ್ಲಿ ಮಾರ್ಗದರ್ಶಿಯಾಗಿದ್ದಾರೆ. ಪ್ರತಿಯೊಬ್ಬರ ಪ್ರಕೃತಿ ಮತ್ತು ಅವಶ್ಯಕತೆಗನುಗುಣವಾಗಿ ಅವರಿಗೆ ಶ್ರೀಮಾತೆಯವರು ಸಹಾಯ ಮಾಡುತ್ತಾರೆ. ಎಲ್ಲಿ ಅವಶ್ಯಕತೆ ಇದೆಯೋ, ಅಲ್ಲಿ ಶ್ರೀಮಾತೆಯವರೇ ತಮ್ಮ ಶಕ್ತಿಯ ಮೂಲಕ ಸಹಾಯ ಹಸ್ತ ತೋರಿ ಸಾಧಕನಿಗೆ ಈ ಮಾರ್ಗದಲ್ಲಿರುವ ಕಠಿಣತೆ ಮತ್ತು ಅದನ್ನು ಪರಿಹರಿಸಿಕೊಳ್ಳಲು ಹಾಗು ಸಹನೆಯಿಂದ ತಾಳಿಕೊಳ್ಳಲು ಸಹಾಯ ಮಾಡುತ್ತಾರೆ. ಶ್ರೀಮಾತೆಯವರು ತಮ್ಮನ್ನು ತಾವೇ ಮುಂದಿಟ್ಟು– ತಮ್ಮದೇ ಆದ ಪ್ರೀತಿ, ಶಾಂತಿ, ಜ್ಞಾನ ಮತ್ತು ಪ್ರಜ್ಞೆಯನ್ನು, ಅಭೀಪ್ಸೆ ಪಡುವ ಪ್ರತಿಯೊಂದು ಆತ್ಮನ ಸಹಾಯಕ್ಕಾಗಿ ಸದಾ ಕಾಲವೂ ತಮ್ಮನ್ನು ತೆರೆದಿಟ್ಟುಕೊಂಡಿರುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/332 – ಶ್ರೀ ಅರವಿಂದರು**

## ಆಶ್ರಮದ ಉಗಮ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

1910 ರಿಂದ 1920ರವರೆಗೆ ನಾಲ್ಕು ಅಥವಾ ಐದು ಶಿಷ್ಯರೊಂದಿಗೆ ಶ್ರೀ ಅರವಿಂದೋರವರು ಪಾಂಡಿಚೆರಿಯಲ್ಲಿ ವಾಸಿಸುತ್ತಿದ್ದರು.

ಫ್ರಾನ್ಸ್‌ನಿಂದ ಶ್ರೀಮಾತೆಯವರು 1914ರಲ್ಲಿ ಆಗಮಿಸಿದರು ಮತ್ತು ಆರ್ಯ ಪತ್ರಿಕೆಯ ಸಂಪಾದಕತ್ವವನ್ನು ಶ್ರೀ ಅರವಿಂದೋರವರು ವಹಿಸಿಕೊಂಡರು. ಈ ಕಾರ್ಯವು 1920ನೇ ಇಸವಿ ಜನವರಿಯವರೆಗೂ ಮುಂದುವರೆಯಿತು.

ಜಪಾನಿನಿಂದ ಶ್ರೀಮಾತೆಯವರು 1920ನೇ ಇಸವಿ ಏಪ್ರಿಲ್‌ನಲ್ಲಿ ಹಿಂದಿರುಗಿದರು ಮತ್ತು ಜನರ ಸಂಖ್ಯೆಯು ಅಧಿಕವಾಗತೊಡಗಿದ್ದರಿಂದ 1926ರಲ್ಲಿ ಆಶ್ರಮವನ್ನು ಸ್ಥಾಪಿಸಲಾಯಿತು.

*

**ಆಶ್ರಮದ ಜನನ**

*ನಮ್ಮ ಆಶ್ರಮದ ಸೃಷ್ಟಿಗೆ ಒಂದು ವಿಧ್ಯುಕ್ತ ದಿನಾಂಕವು ಇಲ್ಲ ಎಂಬ ಸತ್ಯದಲ್ಲಿ ವಿಶ್ವಸನೀಯ ಆನಂದದಾಯಕತೆ ಮತ್ತು ಕಾವ್ಯವು ಇರುವದಾದರೂ ನಿಗೂಢ ದೃಷ್ಟಿಕೊನದಿಂದ ಶ್ರೀಮಾತೆಯವರ ಆಗಮನದೊಂದಿಗೆ ಆಶ್ರಮವು ಜನಿಸಿತು ಎಂದು ಹೇಳಬಹುದೇ?*

ನಾನು ಹಿಂದಿರುಗಿದ ಮೇಲೆ ಕೆಲ ಸಂವತ್ಸರಗಳ ನಂತರ 1926ರಲ್ಲಿ ಆಶ್ರಮವು ಜನಿಸಿತು.

*

**ಆಶ್ರಮದಲ್ಲಿಯ ಕೆಲವು ವಿಶೇಷ ದಿನಗಳು**

ಶ್ರೀಮಾತೆಯವರ ಜನ್ಮದಿನವಾಗಿದೆ ಫೆಬ್ರವರಿ 21.

ಶ್ರೀ ಅರವಿಂದೋರವರನ್ನು ಆಕೆ ಮೊದಲ ಸಲ ಭೇಟಿ ಮಾಡಿದ ವಾರ್ಷಿಕೋತ್ಸವವಾಗಿದೆ 29 ಮಾರ್ಚ್.

ಆಶ್ರಮದ ಹೊಸ ವರ್ಷದ ದಿನಾಂಕವಾಗಿದೆ ಏಪ್ರಿಲ್ ನಾಲ್ಕನೇ ತಾರೀಖು, ಪಾಂಡಿಚೆರಿಗೆ ಶ್ರೀ ಅರವಿಂದೋರವರು ಆಗಮಿಸಿದ ದಿನ.

1920 ರಲ್ಲಿ ಶ್ರೀಮಾತೆಯವರು ಪಾಂಡಿಚೆರಿಗೆ ಅಂತಿಮವಾಗಿ ಆಗಮಿಸಿದ ದಿನವಾಗಿದೆ ಏಪ್ರಿಲ್ 24.

ಶ್ರೀ ಅರವಿಂದೋರವರ ಜನ್ಮದಿನವಾಗಿದೆ ಆಗಸ್ಟ್ 15.

---

ಸಂಪಾದಕರ ಟಿಪ್ಪಣಿ: 1956ನೇ ಇಸವಿ ಫೆಬ್ರವರಿ 29 – ಸುಪ್ರಮಾನಸ ಪ್ರಕಟಣೆ (ಸುವರ್ಣ ದಿನ), ಡಿಸೆಂಬರ್ 5ನೇ ತಾರೀಖು (1950) ಶ್ರೀ ಅರವಿಂದೋರವರ ಮಹಾಸಮಾಧಿ ದಿನ, ನವೆಂಬರ್ 17ನೇ ತಾರೀಖು (1973) ಶ್ರೀಮಾತೆಯವರ ಮಹಾಸಮಾಧಿ ದಿನಗಳನ್ನು ಸಹ ವಿಶೇಷ ದಿನಗಳನ್ನಾಗಿ ಆಚರಿಸಲಾಗುವದು.

1926ನೇ ಇಸವಿಯಲ್ಲಿ ಸಂಭವಿಸಿದ ಒಂದು ಬಹಳ ಮುಖ್ಯವಾದ ಆಧ್ಯಾತ್ಮಿಕ ಘಟನೆಯ ಜ್ಞಾಪಕಾರ್ಥವಾಗಿ ವಿಜಯದ ದಿನವೆಂದು ನವೆಂಬರ್ 24ನೇ ತಾರೀಖನ್ನು ಕರೆಯಲಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/105 – ಶ್ರೀಮಾತೆ**

**ದರ್ಶನ**

ಗುಣಪಡಿಸಲು ಮಾನಸಿಕವಾಗಿ ಅಸ್ವಸ್ಥರಾದವರನ್ನು ಮತ್ತು ರೋಗ ಪೀಡಿತರನ್ನು ದರ್ಶನಕ್ಕೆ ಕರೆ ತರುವದು ಸರಿಯಲ್ಲ – ದರ್ಶನವಿರುವದು ಅದಕ್ಕಾಗಿ ಅಲ್ಲ. ಅವರಿಗಾಗಿ ಏನನ್ನಾದರೂ ಮಾಡಬೇಕಿದ್ದರೆ ಅಥವಾ ಮಾಡಬಹುದಾಗಿದ್ದರೆ, ಅದನ್ನು ದೂರದಿಂದಲೇ ಮಾಡಬಹುದು. ದರ್ಶನದ ಕಾಲದಲ್ಲಿ ಕ್ರಿಯಾಶೀಲವಾಗುವ ಶಕ್ತಿ ಬೇರೆಯದೇ ರೀತಿಯದು ಮತ್ತು ಚಿತ್ತ ಭ್ರಮೆಯನ್ನು ಅಥವಾ ದುರ್ಬಲ ಮನಸ್ಸನ್ನು ಹೊಂದಿದವರಿಗೆ ಅದನ್ನು ಸ್ವೀಕರಿಸಲಾಗುವದಿಲ್ಲ ಅಥವಾ ಮೈಗೂಡಿಕೊಳ್ಳಲಾಗುವದಿಲ್ಲ – ಹೀಗಾಗಿ ಅವರ ಈ ಅಸಮರ್ಥತೆಯಿಂದ ಅದನ್ನು ಸ್ವೀಕರಿಸಿದರೆ ತದ್ವಿರುದ್ಧವಾದ ಪರಿಣಾಮಗಳು ಉಂಟಾಗಬಹುದು. ಶಕ್ತಿಯನ್ನು ತಡೆಹಿಡಿದರೆ ಆಗ ದರ್ಶನವು ಉಪಯೋಗ–ರಹಿತವಾಗುವದು. ಅಂತಹ ಜನರು ಅದನ್ನು ಸ್ವೀಕರಿಸಿದರೆ ಅದು ಅಪಾಯಕಾರಿ. ಇದೇ ಕಾರಣಗಳಿಗೆ ದರ್ಶನಕ್ಕೆ ಚಿಕ್ಕ ಮಕ್ಕಳನ್ನು ಕರೆತರಬಾರದು ಎಂಬ ನಿಯಮವಿರುವುದು ಸಹ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/570 – ಶ್ರೀ ಅರವಿಂದರು**

*ದರ್ಶನದ ದಿನಗಳು, ಡಿಸೆಂಬರ್ 5ನೇ ತಾರೀಖು ಮತ್ತು 9ನೇ ತಾರೀಖು ಹಾಗು ನಮ್ಮ ಜನ್ಮದಿನವನ್ನು ಯಾವ ರೀತಿ ವ್ಯಯಿಸಬೇಕು?*

ಸಾಮಾನ್ಯ ಜ್ಞಾನವಲ್ಲದ ಹೆಚ್ಚು ಸತ್ಯವಾದ ಜ್ಞಾನದ ಅನ್ವೇಷಣೆಯಲ್ಲಿ ತೊಡಗಬೇಕು.

5 ಮತ್ತು 9ನೇ ತಾರೀಖುಗಳಲ್ಲಿ ಮರಣವೆಂದರೆ ಏನು? ಎಂದು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು.

ಜೀವನದ ಉದ್ದೇಶವನ್ನು ಅರಿಯಲು ಜನ್ಮದಿನದಂದು ಪ್ರಯತ್ನಿಸಬೇಕು.

ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/415**

**ದರ್ಶನದ ದಿನಗಳು, ಅಂದು ಮತ್ತು ಇಂದು**

*ಪ್ರಿಯ ಶ್ರೀಮಾತೆ, ದರ್ಶನದ ದಿನಗಳಲ್ಲಿ ಒಂದು ವಿಭಿನ್ನವಾದ ವಾತಾವರಣವನ್ನು ನಾವೇಕೆ ಅನುಭವಿಸುವೆವು? ನಾವು ಆ ದಿನ ಏನು ಮಾಡಬೇಕು?*

ವಿಭಿನ್ನವಾಗಿ? ನೀನು ಈ ಪ್ರಶ್ನೆ ಕೆಳುತ್ತಿರುವೆ!... ಹೆಚ್ಚು ಕಮ್ಮಿ ಅಂಧಕಾರಭರಿತ ಮತ್ತು ಬಾಹ್ಯ ಅಂಶಗಳ ಆಕ್ರಮಣವಿರುವದು. ಅವುಗಳು ಸದಾಶಯದೊಂದಿಗೆ ಆಗಮಿಸಬಹುದು, ಅದರ ಸಾಧ್ಯತೆಯೂ ಇದೆ, ಆದರೆ ಸಂಪೂರ್ಣ ಅಜ್ಞಾನಭರಿತವಾಗಿ ಆಗಮಿಸುವವು. ವಾತಾವರಣದಲ್ಲಿ ಅದನ್ನು ಎಸೆಯುವವು. ಹೀಗಾಗಿ ಸಹಜವಾಗಿ ಏನಾಗುತ್ತಿದೆ ಎನ್ನುವದಕ್ಕೆ ಸ್ವಲ್ಪಮಟ್ಟಿಗೆ ಯಾರಾದರೂ ತೆರೆದುಕೊಂಡಿದ್ದರೆ, ಅವರು ಈ ಅಜ್ಞಾನದ ಹೆಚ್ಚಳದಿಂದ ತತ್ತರಿಸುವರು.

ಇಲ್ಲಿ ಅಜ್ಞಾನವಿಲ್ಲವೆಂಬುದು ನನ್ನ ಅಭಿಪ್ರಾಯವಲ್ಲ! ಆದರೂ ಸಹ, ಪರಿಮಾಣವು ಬೇರೆಯಾಗಿದೆ. ಇಲ್ಲಿ, ಅದಕ್ಕೆಲ್ಲಾ, ಹಗಲು ರಾತ್ರಿ ಗೋಚರಿಸುವಹಾಗೆ, ಅಗೋಚರವಾಗಿ ಚೇತನದ ಲೆಕ್ಕಾಚಾರವು ಒಂದು ರೀತಿಯಲ್ಲಿ ನಿರಂತರವಾಗಿ ಸಂಭವಿಸುತ್ತಿದೆ, ಯಾರಿಗಾದರೂ ಅದು ಬೇಕೋ ಅಥವಾ ಬೇಡವೋ, ಏನೇ ಆದರೂ ಅವರು ಸ್ವೀಕರಿಸಲೇಬೇಕಾಗುವದು ಮತ್ತು ಕೆಲ ಕಾಲದ ನಂತರ ಅದು ಪರಿಣಾಮಕಾರಿಯಾಗುವದು.

ಕೆಲವು ಜನರು ಬಂದಾಗ, ಬದಲಾವಣೆಗಳು ಆಗುವವು, ಆದರೆ ನೋವಿನ ಅನುಭವವನ್ನು ಕೊಡುವಷ್ಟು ತೀವ್ರವಾಗಿ ಇರುವದಿಲ್ಲ. ಆದರೆ ಇಂತಹ ನೂಕು ನುಗ್ಗಲು ಇದ್ದಾಗ, ಎಲ್ಲವನ್ನೂ ಒಮ್ಮೆಲೇ ಅಪ್ಪಳಿಸಿದಾಗ ತಕ್ಷಣವೇ ಸಂಪೂರ್ಣ ಸ್ತರವು ಕೆಳಗೆ ಇಳಿಯುವದು. ಆಗ ನಾವು ನಮ್ಮೊಳಗಡೆಗೆ ಸರಿಯಬೇಕು. ನಿಭಾಯಿಸಲಾಗದಂತಹ ಈ ಅಜ್ಞಾನದ ಪ್ರವಾಹ, ಮುಳುಗಿಸುವ ಜಲರಾಶಿಗಳ

ಮೇಲುಗಡೆಗೆ ನಮ್ಮ ತಲೆಯನ್ನು ತರಬೇಕು. ಹಾಗೆ ಮಾಡಲು ಆಗದೆ ಹೋದರೆ, ನಾವು ಬಹಳ ಅಸಮಾಧಾನದ ಪರಿಸ್ಥಿತಿಯನ್ನು ಎದುರಿಸಬೇಕಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/261**

## ವಿಶೇಷ ದಿನಗಳಲ್ಲಿ ಗ್ರಹಣ ಶಕ್ತಿ

ತಮ್ಮ ಜನ್ಮದಿನದಂದು ಜನರು ಹೆಚ್ಚು ಗ್ರಹಣ ಶಕ್ತಿಯನ್ನು ಹೊಂದಿರುವರು. ವಿಶೇಷ ದಿನಗಳಲ್ಲೂ ಅದೇ ರೀತಿಯ ಅನುಭವವಾಗುವದು ಎಂದು ನನಗೆ ಅನಿಸುವದು. ಅಥವಾ ಜನರ ಗ್ರಹಣ ಶಕ್ತಿಯನ್ನು ಜಾಗೃತಗೊಳಿಸಲು ಒಂದು ಸಂದರ್ಭವನ್ನು ನೆನಪಿಸಿದಾಗ ಈ ಅನುಭವವು ಉಂಟಾಗುವದು.

ಶ್ರೀ ಅರವಿಂದೋರವರು ದರ್ಶನವನ್ನು ನೀಡುತ್ತಿದ್ದ ದಿನಗಳಲ್ಲಿ, ಆತನು ಅದನ್ನು ನೀಡುವ ಮೊದಲು ಯಾವಾಗಲೂ ನಿರ್ದಿಷ್ಟ ಶಕ್ತಿಗಳ ಕೇಂದ್ರೀಕರಣವಿರುತ್ತಿತ್ತು ಅಥವಾ ಆತನು ಜನರಿಗೆ ನೀಡಬೇಕೆಂದಿದ್ದ ನಿರ್ದಿಷ್ಟ ಸಾಕ್ಷಾತ್ಕಾರವು ಇರುತ್ತಿದ್ದಿತು. ಈ ರೀತಿ ಹೊಸದೊಂದು ಸೇರ್ಪಡೆಯಾಗುತ್ತಿದ್ದಿತು ಮತ್ತು ಒಂದು ಮುಂದಿನ ಹಂತವಾಗಿರುತ್ತಿತ್ತು ಪ್ರತಿಯೊಂದು ದರ್ಶನ. ಆದರೆ ಆಗ ಸಂದರ್ಶಕರ ಸಂಖ್ಯೆ ಬಹಳ ಕಡಿಮೆ ಇರುತ್ತಿತ್ತು. ಅದನ್ನು ಬೇರೆಯದೇ ಆದ ರೀತಿಯಲ್ಲಿ ವ್ಯವಸ್ಥೆಗೊಳಿಸಲಾಗುತ್ತಿತ್ತು. ಅದು ಸಿದ್ಧತೆಯ ಒಂದು ಅವಶ್ಯಕವಾದ ಭಾಗವಾಗಿತ್ತು.

ಆದರೆ ಈ ವಿಶೇಷ ಕೇಂದ್ರೀಕರಣ, ಈಗ, ಬೇರೆಯ ಸಮಯಗಳಲ್ಲಿ ಸಂಭವಿಸುವದು, ದರ್ಶನ ದಿನಗಳಲ್ಲೇ ಎಂದೇನು ಇಲ್ಲ. ಮತ್ತು ಆಗಾಗ ಅದು ಸಂಭವಿಸುತ್ತಲೇ ಇರುವದು, ಇತರ ವಿಧದ ಸನ್ನಿವೇಶಗಳಲ್ಲಿ, ಮತ್ತಿತರ ಪರಿಸ್ಥಿತಿಗಳಲ್ಲೂ ಅದು ಸಂಭವಿಸುತ್ತಿರುವದು. ಚಲನೆಯು ಹೆಚ್ಚು ತೀವ್ರವಾಗಿದೆ, ಹೆಚ್ಚು ಮುನ್ನಡೆದಿದೆ, ಇನ್ನೂ ಹೆಚ್ಚು ವೇಗವಾಗಿ ಹಂತಗಳು ಒಂದನ್ನೊಂದು ಅನುಕ್ರಮವಾಗಿ ಅನುಸರಿಸುತ್ತಿವೆ. ಮತ್ತು ಬಹುಶಃ ಅನುಸರಿಸುವಿಕೆಯು ಹೆಚ್ಚು ಕಠಿಣವೆಂದೇ ಹೇಳಬಹುದು. ಅಥವಾ ಅದು ಏನೇ ಆಗಲಿ, ವೇಗವಾಗಿ ನಾವು ಅನುಸರಿಸಿಕೊಂಡು ಮುಂದೆ ಸಾಗದಿದ್ದರೆ, ಇತರರು ನಮ್ಮನ್ನು ಹಿಂದೆ ಹಾಕಿ ಮುಂದೆ ಹೊಗುವ ಸಾಧ್ಯತೆಯಿದೆ ಅಥವಾ ನಮ್ಮನ್ನು ತೊರೆಯಲಾಯಿತು ಎಂಬ ಭಾವನೆಗೆ ಒಳಗಾಗುವೆವು. ವಿಷಯಗಳು ಬಹಳ ಬೇಗ ಬದಲಾಗುವವು.

ಮತ್ತು ಈಗಿನ ದರ್ಶನದ ದಿನಗಳು ಜನರ ಈ ನೂಕು ನುಗ್ಗಾಟದಿಂದ ಆಂತರಿಕ ಪ್ರಗತಿಗೆ ಹೆಚ್ಚು ಸಹಾಯಕವಾಗಿಲ್ಲ ಎಂದು ನಾನು ಹೇಳಲೇ ಬೇಕಾಗಿದೆ – ಅಂದರೆ, ಆಶ್ರಮದ ಒಳಗಡೆ–ಹೊರಗಡೆಯ ಪ್ರಸಾರಕ್ಕೆ ಈ ದಿನಗಳನ್ನು ನಾವು ಸ್ವಲ್ಪ ವಿಭಿನ್ನವಾಗಿ ಉಪಯೋಗಿಸಿಕೊಳ್ಳುವೆವು; ಅದು ಮುಂದೆ ಸಾಗಲು, ಒಂದು ವಿಸ್ತಾರವಾದ ಕ್ಷೇತ್ರವನ್ನು ಹೊಂದಲು, ಇನ್ನೂ ಹೆಚ್ಚು ದೂರದ ಅಂಶಗಳನ್ನು ತಲುಪಲು, ಆದರೆ ಕೇಂದ್ರೀಕರಣವು ಕಡಿಮೆ ಮತ್ತು ಜನ ಸಂದಣಿಯ ಅನಾನುಕೂಲತೆ ಸಹ ಇರುವದು. ಈ ತೊಂದರೆ ಯಾವಾಗಲೂ ಇದ್ದಿತು. ಆದರೆ ಪ್ರಾರಂಭದ ಸಮಯಕ್ಕಿಂತಲೂ ಕಳೆದ ಕೆಲವು ವರ್ಷಗಳಿಂದ ಬಹಳ ಜಾಸ್ತಿಯಾಗಿದೆ. ಆರಂಭದಲ್ಲಿ ಇಂತಹ ಜನ ಸಂದಣಿ ಇರಲಿಲ್ಲ ಮತ್ತು ಬಹುಶಃ ಸಭಿಕರ ಗುಣಗಳು ಸಹ ಸ್ವಲ್ಪ ವಿಭಿನ್ನವಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/262–63**

**ದರ್ಶನದ ಸಂದೇಶಗಳು**

ಆದರೆ ಶ್ರೀಮಾತೆ, ಪ್ರತಿಯೊಂದು ದರ್ಶನಕ್ಕೆ ನೀವು ನೀಡುವ ಸಂದೇಶದ ವಿಶಿಷ್ಟತೆ ಏನು? ಉದಾಹರಣೆಗೆ, ಈ ದಿನ ಸುಪ್ರಮಾನಸದ ಪ್ರಕಟಣೆಯನ್ನು ಸಾಂಕೇತಿಸುವ ಹೂವಿನ ಚಿತ್ರವನ್ನು ನೀವು ನೀಡಿದಿರಿ.

ಹೌದು, ನಾನು ಈಗ ತಾನೆ ನಿನಗೆ ಹೇಳಿದಂತೆ, ಇದು ಇಡೀ ಪ್ರಪಂಚದಲ್ಲಿ ಸಾವಿರಾರು ಮುದ್ರಣಗಳಲ್ಲಿ ವ್ಯಾಪಿಸಿದೆ. ಇದು ಒಂದು ವಿಷಯವನ್ನು ಬಾಹ್ಯೀಕರಣಗೊಳಿಸುವ, ಪ್ರಭಾವವನ್ನು ಹರಡುವ ಒಂದು ವಿಧಾನವಾಗಿದೆ, ಸಂದೇಶವನ್ನು ಹರಡುವದು, ದೂರ ದೂರಕ್ಕೆ ತಲುಪಿಸುವದು. ದರ್ಶನದ ಸಂದೇಶಗಳಲ್ಲಿ ಹೇಳಿರುವದೆಲ್ಲವನ್ನೂ ಮೊದಲೇ ಅಧ್ಯಯನ ಮಾಡಲಾಗಿರುವದು, ಪ್ರಮಾಣೀಕರಿಸಲಾಗಿರುವದು, ಪರೀಕ್ಷಿಸಲಾಗಿರುವದು. ಮತ್ತು ದರ್ಶನದ ದಿನ ಅದನ್ನು ನೀಡಲಾಗುವದು. ಮೊದಲು ಪ್ರಯೋಗವನ್ನು ಮಾಡಿ ನಂತರ ಅದನ್ನು ಸಾರ್ವಜನಿಕವಾಗಿ ಘೋಷಿಸಲಾಗುವದು. ವ್ಯಕ್ತಿಗತ ಅಭಿವೃದ್ಧಿಯೇ ಮೊದಲನೇ ಚಲನೆ, ದರ್ಶನದ ಕಾಲದಲ್ಲಿ ಅದನ್ನು ಹೊರಗೆ ಪ್ರಸಾರ ಮಾಡಲಾಗುವದು.

ಶ್ರೀ ಅರವಿಂದೋರವರು ಯಾವಾಗಲೂ ಎರಡು ಚಲನೆಗಳ ಬಗ್ಗೆ ಮಾತನಾಡುತ್ತಿದ್ದರು. ವೈಯಕ್ತಿಕವಾಗಿ ಗುರಿಯನ್ನು ತಲುಪಲು ಸಾಧ್ಯವಾಗುವಂತೆ

ವ್ಯಕ್ತಿಯ ರಚನೆ ಮತ್ತು ಪ್ರಪಂಚದ ಸಿದ್ಧತೆ.... ಏಕೆಂದರೆ ನಿಜಕ್ಕೂ ಇಡೀ ಪ್ರಪಂಚದ ಪರಿಸ್ಥಿತಿಯಿಂದ ವ್ಯಕ್ತಿಗತ ಪ್ರಗತಿಯು ಕುಂಠಿತವಾಗುವದಿಲ್ಲ ಅಥವಾ ಅದರಿಂದ ನೆರವು ಸಹ ಸಿಗುವದಿಲ್ಲ, ಆದರೆ ಇದು ಎರಡರ ಮಧ್ಯೆ ಒಂದು ನಿರ್ದಿಷ್ಟ ಸಮತೋಲನವನ್ನು ತರುವದು. ವ್ಯಕ್ತಿಗತ ಚಲನೆಯು ಯಾವಾಗಲೂ ಹೆಚ್ಚು ಶೀಘ್ರ ಗತಿಯಲ್ಲಿ ಇರುವದು ಮತ್ತು ಹೆಚ್ಚು ವ್ಯಾಪಕ: ಅದು ಬಹಳ ದೂರ ಸಾಗುವದು, ಹೆಚ್ಚು ಆಳವಾಗಿ ಹೋಗುವದಲ್ಲದೆ ಶೀಘ್ರವಾಗಿಯೂ ಚಲಿಸುವದು. ಸಾಮೂಹಿಕ ಚಲನೆಯು ಒಂದು ವಿಧದ ತಳಹದಿಯನ್ನು ರೂಪಿಸುವದು. ಅದು ನಿಗ್ರಹಿಸುವದಲ್ಲದೆ ಆಧಾರವನ್ನು ಸಹ ನೀಡುವದು.

ಅವಶ್ಯಕವಾದುದೇನೆಂದರೆ ಈ ಎರಡು ಚಲನೆಗಳ ನಡುವಿನ ಸಮತೋಲನ. ಆದುದರಿಂದ ನಾವು ವೈಯಕ್ತಿಕವಾಗಿ ಶೀಘ್ರವಾಗಿ ಚಲಿಸುತ್ತಿದ್ದಂತೆ, ಸಾಮೂಹಿಕ ನೆಲೆಯನ್ನು ವಿಸ್ತರಿಸಿ ಶಕ್ತಿಯುತಗೊಳಿಸಲು ಪ್ರಯತ್ನಿಸುವದು ಇನ್ನೂ ಹೆಚ್ಚು ಅವಶ್ಯಕ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/264**

## ಅನುಗ್ರಹದ ಹಾದಿಗಳು

ಆದರೆ ಸರ್ವ–ಶಕ್ತ ಅನುಗ್ರಹವೆಂದು ನಾವು ಯಾವುದನ್ನು ಕರೆಯುವೆವು? ಸಾಮಾನ್ಯ ಮನಸ್ಸು ತಾನು ಯಾವುದನ್ನೂ ಬಯಸುವದೋ ಅಥವಾ ತತ್ಕ್ಷಣದಲ್ಲಿ ಯಾವುದು ಸರಿ ಎಂದು ತಿಳಿಯುವುದೋ ಅದನ್ನು ಪಡೆಯುವದೇ ಸರ್ವ–ಶಕ್ತ ಅನುಗ್ರಹವೆಂದು ಭಾವಿಸುವದು. ನಾನು ಆ ಕಲ್ಪನೆಗಳ ಬಗ್ಗೆ ಮಾತನಾಡಲು ಬಯಸುವದಿಲ್ಲ. ನಾವು ಆ ಉದಾಹರಣೆಯನ್ನು ತಿರಸ್ಕರಿಸಬಹುದು. ಅದು ಬಾಲಿಶವಾದುದು. ನಮಗೆ ಆಘಾತಕರವೆನಿಸುವ ಎಲ್ಲಾ ವಿಷಯಗಳು ಕಾಣದಾಗುವ ಪರಿಪೂರ್ಣ ಜಗತ್ತಿನ ಅಂತರ್ಬೋಧೆ ಅಥವಾ ಉನ್ನತ ಹಾಗು ಆಳವಾದ ದರ್ಶನವನ್ನು ನಾವು ಹೊಂದಿದ್ದೆವೆನ್ನಿ. ಆಗ ನಾವು ನಿಜವಾಗಲೂ ಒಂದು ಪರಿಹಾರರಹಿತ ಸಮಸ್ಯೆಯಲ್ಲಿ ಸಿಲುಕಿಕೊಂಡಿರುವೆವೆಂದೇ ಹೇಳಬಹುದು.

ಇದು ಬಹಳ ಸಾಮಾನ್ಯವಾದ ಮನಸ್ಸುಗಳಲ್ಲಿ ಅತಿ ಸರಳವಾದ ಮತ್ತು ತುಂಬಾ ಬಾಲಿಶವಾದ ರೂಪವನ್ನು ಪಡೆದುಕೊಳ್ಳುವದು: ಮೊದಲನೆಯದು ನಾವು

ದಿವ್ಯ ಸಂಕಲ್ಪದ ಬಗ್ಗೆ ಯೋಚಿಸುವದು ಅಸಾಧ್ಯ – ಅದೇನು ಆಶ್ಚರ್ಯಕರ–ವಾದುದಲ್ಲ! – ಯೋಚಿಸಲು ಅಸಾಧ್ಯ ಮತ್ತು ಈಗಿರುವ ರೂಪದಲ್ಲಿರಲು ವಸ್ತುಗಳಿಗೆ ಅವಕಾಶ ನೀಡಿರುವ ಅದು ರಾಕ್ಷಸನೇ ಹೌದು ಅಥವಾ... ಅನುಗ್ರಹವು ಶಕ್ತಿರಹಿತ.

ಅದು – ನೀನು ಬಲೆಯಲ್ಲಿ ಸಿಕ್ಕ ಹಾಕಿಕೊಳ್ಳದಿರಲೆಂದು ನಿನಗೆ ಎಚ್ಚರಿಕೆ ನೀಡುತ್ತಿರುವೆ – ಅದು ವೈರಿಯ ಬಲವಾದ ವಾದ. ಆತನು ಮನವನ್ನು ದುಗುಡಗೊಲಿಸಲು ಅದನ್ನು ಉಪಯೋಗಿಸುವನು ಮತ್ತು ಪ್ರತಿರೋಧವನ್ನು ಜಾಗೃತಗೊಳಿಸುವನು; ಆದರೆ ಅದು ನಿಜಕ್ಕೂ ಒಂದು ಬಲೆಯೆಂದೇ ಹೇಳಲಾಗುವದು.

ನಂತರ ಇನ್ನೂ ಅನೇಕರು ಹೀಗೆ ಹೇಳುವರು, "ನೀನು ಅದನ್ನು ಆ ರೀತಿಯಲ್ಲಿ ಕಾಣುವೆ ಏಕೆಂದರೆ ನೀನು ಅಜ್ಞಾನದಲ್ಲಿ ಇರುವೆ; ನಿನ್ನ ಪ್ರಜ್ಞೆಯನ್ನು ಬದಲಾಯಿಸು, ದಿವ್ಯ ಚೇತನದ ಸಂಪರ್ಕವನ್ನು ಪಡೆದುಕೋ ಮತ್ತು ಆಗ ನೀನು ವಿಭಿನ್ನವಾಗಿ ದರ್ಶಿಸುವೆ." ಇದು ಪರಿಪೂರ್ಣವಾದ ಸತ್ಯ. ನಾನು ಈಗ ತಾನೇ ನಿನಗೆ ಹೇಳುತ್ತಿದ್ದೆ, ಮತ್ತು ನಾನು ಪುನರಾವರ್ತಿಸಿ ಹೇಳುತ್ತಿರುವೆ. ಸ್ವಲ್ಪವಾದರೂ ದಿವ್ಯ ನೈಜತೆಯೊಂದಿಗೆ ಜೊತೆಗೂಡಿದರೆ ಅಥವಾ ಅದನ್ನು ಪ್ರವೇಶಿಸಿದರೆ ಪ್ರತಿಯೊಂದೂ ಸೂಕ್ಷ್ಮವಾಗಿರುವ, ಅಸಾಧಾರಣವಾದ ಮತ್ತು ಎಲ್ಲದರಲ್ಲೂ ಅನುಗ್ರಹವು ಪ್ರಕಟವಾಗಿರುವ ಆನಂದಭರಿತ ಜೀವನವನ್ನು ಸಾಗಿಸುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/268**

## ಇಲ್ಲಿಯ ಸಾಧನೆಯ ಧ್ಯೇಯ

ಪರಮೋತ್ತಮ ಚೇತನದೊಂದಿಗೆ (ಸತ್–ಚಿತ್–ಆನಂದ) ಜೊತೆಗೂಡುವುದೇ ಸಾಮಾನ್ಯ ಸಾಧನೆಗಳ ಗುರಿಯಾಗಿರುವದು. ಅದನ್ನು ತಲುಪಿದವರು ತಮ್ಮ ಮುಕ್ತಿಯಿಂದ ತೃಪ್ತರಾಗುವರು ಮತ್ತು ಪ್ರಪಂಚವನ್ನು ಅದರ ಅಸಂತೋಷಕರ ಸ್ಥಿತಿಯಲ್ಲೇ ಇರಲು ತ್ಯಜಿಸಿಬಿಡುವರು. ಇದಕ್ಕೆ ಬದಲಾಗಿ ಬೇರೆಯವರ ಸಾಧನೆಯು ಅಂತ್ಯವಾದ ಜಾಗದಲ್ಲೇ ಶ್ರೀ ಅರವಿಂದೋರವರ ಸಾಧನೆಯು ಪ್ರಾರಂಭವಾಗುವದು. ಮೊದಲಿಗೆ ಪರಮೋತ್ತಮದೊಂದಿಗೆ ಸಂಪರ್ಕವನ್ನು ಪಡೆಯಬೇಕು. ನಂತರ ನಾವು ಆ ಅರಿವನ್ನು ಬಾಹ್ಯ ಜಗತ್ತಿಗೆ ತಂದು ಭೂಮಿಯ

ಮೇಲಿನ ಪರಿಸ್ಥಿತಿಗಳನ್ನು ಬದಲಾಯಿಸಬೇಕು. ಸಂಪೂರ್ಣ ಪರಿವರ್ತನೆಯನ್ನು ಸಾಧಿಸುವವರೆಗೂ ಇದನ್ನು ಮುಂದುವರಿಸಬೇಕು. ಈ ಗುರಿಗೆ ಅನುಗುಣವಾಗಿ, ಧ್ಯಾನಮಗ್ನ ಜೀವನವನ್ನು ಮಾಡಲು ಸಮಗ್ರ ಯೋಗದ ಸಾಧಕನು ಪ್ರಪಂಚದಿಂದ ನಿವೃತ್ತನಾಗುವದಿಲ್ಲ. ಪ್ರತಿಯೊಬ್ಬರೂ ಕೊನೆಯ ಪಕ್ಷ ತಮ್ಮ ಸಮಯದ ಮೂರನೇ ಒಂದು ಭಾಗವನ್ನು ಉಪಯುಕ್ತ ಕೆಲಸಕ್ಕೆ ವಿನಿಯೋಗಿಸಬೇಕು. ಆಶ್ರಮದಲ್ಲಿ ಎಲ್ಲಾ ಕಾರ್ಯಗಳನ್ನೂ ಪ್ರತಿನಿಧಿಸಲಾಗಿದೆ. ಪ್ರತಿಯೊಬ್ಬರೂ ತಮ್ಮ ಸ್ವಭಾವಕ್ಕೆ ಅತ್ಯಧಿಕವಾಗಿ ಹೊಂದಾಣಿಕೆಯಾಗುವ ಕೆಲಸವನ್ನು ಆರಿಸಿಕೊಳ್ಳಬೇಕು. ಆದರೆ ಅದನ್ನು ನಿಸ್ವಾರ್ಥ ಸೇವಾ ಮನೋಭಾವದೊಂದಿಗೆ ಮಾಡಬೇಕು. ಮತ್ತು ಯಾವಾಗಲೂ ಸಮಗ್ರ ಪರಿವರ್ತನೆಯ ಗುರಿಯನ್ನು ತನ್ನ ದೃಷ್ಟಿಕೋನದಲ್ಲಿ ಇಟ್ಟಿಕೊಂಡಿರಬೇಕು.

ಈ ಉದ್ದೇಶವು ಸಾಧ್ಯವಾಗುವಂತೆ ಮಾಡಲು ಆಶ್ರಮವನ್ನು ಅದಕ್ಕೆ ಅನುಗುಣವಾಗಿ ವ್ಯವಸ್ಥಿತಗೊಳಿಸಲಾಗಿದೆ. ಇದರಿಂದ ಆಶ್ರಮವಾಸಿಗಳು ತಮ್ಮ ಅತಿರೇಕವಲ್ಲದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು ಮತ್ತು ಅವರ ದೈನಂದಿನ ಜೀವನವು ಸಹ ಸುಗಮವಾಗಿ ಸಾಗುವದು.

ಅತಿ ಕಡಿಮೆ ನಿಬಂಧನೆಗಳು ಇರುವದರಿಂದ ಪ್ರತಿಯೊಬ್ಬರೂ ಸಹ ಅವರ ಅಭಿವೃದ್ಧಿಗೆ ಅವಶ್ಯಕವಾದ ಸ್ವಾತಂತ್ರ್ಯವನ್ನು ಹೊಂದಿರುವರು. ಆದರೆ ಕೆಲವು ವಿಷಯಗಳನ್ನು ಮಾತ್ರ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ: ಅವುಗಳು – (1) ರಾಜಕೀಯ, (2) ಧೂಮಪಾನ, (3) ಮದ್ಯಪಾನ ಮತ್ತು (4) ಲೈಂಗಿಕ ಪ್ರವೃತ್ತಿ.

ವೃದ್ಧರು, ಯುವಕರು, ದೊಡ್ಡವರು ಮತ್ತು ಚಿಕ್ಕವರೆಲ್ಲರ ಶರೀರದ ಸಹಜ ಬೆಳವಣಿಗೆ, ಯೋಗ ಕ್ಷೇಮ ಮತ್ತು ಉತ್ತಮ ಆರೋಗ್ಯದ ಪೋಷಣೆಯ ಕಡೆ ಅತ್ಯಧಿಕ ಗಮನ ಹರಿಸಲಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/107–108**

## ಯೋಗದ ಧ್ಯೇಯ

ನಮ್ಮದು ರಾಜಕೀಯ ಗುರಿಯಲ್ಲ ಅಥವಾ ಸಾಮಾಜಿಕ ಗುರಿಯೂ ಅಲ್ಲ ಆದರೆ ಆಧ್ಯಾತ್ಮಿಕ ಗುರಿಯಾಗಿದೆ. ನಮಗೆ ಬೇಕಾಗಿರುವದು ವೈಯಕ್ತಿಕ ಚೇತನದ ಪರಿವರ್ತನೆ. ಪ್ರಭುತ್ವದ ಅಥವಾ ಸರಕಾರದ ಬದಲಾವಣೆಯಲ್ಲ. ಈ ಗುರಿಯನ್ನು

ತಲುಪಲು ಯಾವುದೇ ಮಾನವ ಸಂಪನ್ಮೂಲಗಳನ್ನು ಅದು ಎಷ್ಟೇ ಶಕ್ತಿಭರಿತವಾಗಿದ್ದರೂ ನಾವು ಆಧರಿಸುವದಿಲ್ಲ. ನಾವು ದಿವ್ಯ ಅನುಗ್ರಹದಲ್ಲಿ ಮಾತ್ರ ಶ್ರದ್ಧೆಯನ್ನು ಹೊಂದಿರುವೆವು.

*

ನಾವು ಇಲ್ಲಿ ಒಂದೇ ಒಂದು ವಿಷಯದ ಕಡೆ ಗಮನ ಹರಿಸುವೆವು. ನಾವು ದಿವ್ಯಕ್ಕಾಗಿ ಕ್ರಿಯಾಶೀಲರಾಗಿರುವೆವು, ದಿವ್ಯಕ್ಕಾಗಿ ಜೀವಿಸುತ್ತಿರುವೆವು ಮತ್ತು ದಿವ್ಯಕ್ಕಾಗಿ ಅಭೀಪ್ಸೆಯನ್ನು ಹೊಂದಿರುವೆವು.

*

ದಿವ್ಯದ ಕಾರ್ಯವನ್ನು ನೆರವೇರಿಸಲು ಅನೇಕ ಜನ್ಮಗಳ ಉತ್ಕಟ ಅಭೀಪ್ಸೆ ನಮ್ಮನ್ನು ಇಲ್ಲಿಗೆ ಕರೆತಂದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/108–109**

## ದಿವ್ಯ ಶಕ್ತಿಯನ್ನು ಸಮರ್ಪಕವಾಗಿ ಸ್ವೀಕರಿಸುವದು

ನಿನ್ನ ಕೋಣೆಯ ಮೊಟ್ಟಿಲುಗಳ ಮೇಲೆ ಕುಳಿತಾಗ, ನನಗೆ ಅಲ್ಲಿ ಏನೋ ವಿಶೇಷ ಅನುಭವವು ಉಂಟಾಗುವದು. ಆದರೆ ಅಲ್ಲಿ ಕುಳಿತಾಗ ನಾನು ಈಗ ದುಷ್ಟ ವಿಚಾರಗಳನ್ನು ಕಾಣುತ್ತಿರುವೆ. ನಾನು ಸುತ್ತಲಿನ ವಾತಾವರಣವನ್ನು ಕಲುಷಿತಗೊಳಿಸುತ್ತಿಲ್ಲವೆಂದು ಭಾವಿಸುತ್ತೇನೆ.

ವಾತಾವರಣದಲ್ಲಿ ಶಕ್ತಿಯಿದೆ. ಆದರೆ ನೀನು ಅದನ್ನು ಸಮರ್ಪಕವಾದ ರೀತಿಯಲ್ಲಿ ಪಡೆಯಬೇಕು – ಸ್ವ–ಸಮರ್ಪಣೆ, ತೆರೆದುಕೊಂಡಿರುವದು ಮತ್ತು ದೃಢವಾದ ನಂಬಿಕೆಯ ಮೂಲಕ. ಉಳಿದುದೆಲ್ಲವೂ ಅದನ್ನು ಅವಲಂಬಿಸಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/631**

## ವಾತಾವರಣದ ಭಿನ್ನತೆ

X ಮತ್ತು Y ಊರಿನಲ್ಲಿಯೇ ಇದ್ದಾರೆಂಬುದನ್ನು ತಿಳಿದು ನನಗೆ ಆಶ್ಚರ್ಯವಾಯಿತು. ಎರಡು ಸಂವತ್ಸರಗಳ ಕಾಲ ಆಶ್ರಮದಲ್ಲಿ ಜೀವಿಸಿ

ಹೊರಗಿನ ವಾತಾವರಣವನ್ನು ಅವರು ಹೇಗೆ ಸಹಿಸಲು ಸಾಧ್ಯ? ಮನೆಗೆ ಹೋಗಿ ಈಗ ತಾನೇ ಹಿಂದಿರುಗಿದ Z ಅಲ್ಲಿಯ ವಾತಾವರಣವು ಅವರಿಗೆ ಸಹಿಸಲು ಅಸಾಧ್ಯವಾಗಿದ್ದಿತೆಂದು ನನಗೆ ಹೇಳಿದರು.

ಇದು ನಿಜಕ್ಕೂ ಆಶ್ಚರ್ಯಕರ. ಬಹುಪಾಲು ಜನರು ಇಲ್ಲಿಯ ವಾತಾವರಣದಲ್ಲಿ ಇದ್ದಮೇಲೆ ಸಾಮಾನ್ಯ ವಾತಾವರಣವನ್ನು ಸಹಿಸಲಾರರು. ಅವರು ಹೊರಗೆ ಹೋದರೆ ಹಿಂದಿರುಗಿ ಬರುವವರೆಗೂ ಚಡಪಡಿಸುತ್ತಿರುವರು. ಕೆಲವು ತಿಂಗಳುಗಳ ಕಾಲ ಮಾತ್ರ ಇಲ್ಲಿ ಇದ್ದ 'A' ಚಿಕ್ಕಮ್ಮ ಸಹ ಹಾಗೆ ಬರೆದಿರುವರು. ಆದರೆ ಬಹುಶಃ X ಮತ್ತು Y ಗಳ ತರಹ, ಸುಳ್ಳಿನ ಹಿಡಿತಕ್ಕೆ ಸಿಲುಕಿದಾಗ ಪಶ್ಚಾತ್ತಪವಿಲ್ಲದ ಪ್ರಾಣಿಕ ಸ್ವಭಾವಕ್ಕೆ ಅವರು ಪ್ರಕ್ಷೇಪಿತವಾಗುವರು ಮತ್ತು ನಂತರ ವಾತಾವರಣದಲ್ಲಿಯ ವ್ಯತ್ಯಾಸವು ಅವರ ಅನುಭವಕ್ಕೆ ಬರುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/570**

ಬಾಹ್ಯಕ್ಕಿಂತಲೂ ಆಶ್ರಮದ ಒಳಗೆ ಸನ್ನಿಧಿಯನ್ನು ಅನುಭವಿಸುವದು ಸುಲಭ. ಆದರೆ ಅದು ಪ್ರಾರಂಭಿಕ ತೊಂದರೆ ಮಾತ್ರವಾಗಿದೆ. ಏಕ ಪ್ರಕಾರವಾದ ಕರೆ ಮತ್ತು ಪ್ರಭಾವಕ್ಕೆ ದೃಢವಾಗಿ ತನ್ನನ್ನು ತಾನು ತೆರೆದುಕೊಳ್ಳುವದರ ಮೂಲಕ ಅದನ್ನು ಜಯಿಸಬಹುದು.

*

ಆಶ್ರಮದ ಒಂದು ಬಲವಾದ ಪ್ರಭಾವವು ಇತರ ಅನೇಕರ ರೀತಿಯಲ್ಲಿ ಮ್ಯಾಗ್ರಿಗೆ ತಕ್ಷಣದಲ್ಲಿ ಉಂಟಾಯಿತು – ಬಹುಪಾಲು ಜನರಿಗೆ ಆಶ್ರಮದಲ್ಲಿ ಶಾಂತ ಮತ್ತು ಸಮಾಧಾನಕರ ವಾತಾವರಣದ ಅನುಭವವಾಗುವದು. ಸಾಮಾನ್ಯ ಪ್ರಪಂಚಕ್ಕಿಂತಲೂ ವಿಭಿನ್ನವಾದುದೊಂದು ಅನುಭವ. ಆತನು ಅದು ಜನರ ವಾತಾವರಣವೆಂದು ಭಾವಿಸಿದನು. ಜೊತೆಗೆ, ಆತನನ್ನು ಕೆಲವರು ಮಾತ್ರ ಭೇಟಿಯಾಗಿದ್ದರು. ಮತ್ತು ಆತನು ಅತ್ಯುತ್ತಮವಾದವರನ್ನು ಮಾತ್ರ ಭೇಟಿಯಾಗಿದ್ದನು. ಜೊತೆಗೆ ಇಲ್ಲಿಯ ಅನೇಕರು (ಬಹುಪಾಲು ಅಲ್ಲದೆ ಇದ್ದರೂ) ಬಾಹ್ಯದ ಜನರಿಗಿಂತಲೂ ಹೊರ ನೋಟದ ತೋರ್ಕೆಯಲ್ಲಿ ವಿಭಿನ್ನವಾಗಿರುವರು; ಸ್ವಲ್ಪಮಟ್ಟಿಗೆ ಪ್ರಕಾಶಮಾನರಾಗಿರುವರು. ಇದನ್ನು ಮ್ಯಾಗ್ರೆಯಂತಹ ತೀಕ್ಷ್ಣ ಗ್ರಹಿಸುವಿಕೆಯನ್ನು ಹೊಂದಿದವರು ಅನುಭವಿಸಬಲ್ಲರು. ಯಾರಾದರೂ ಹೆಚ್ಚು ಕಾಲ ಆಶ್ರಮದಲ್ಲಿ

ಉಳಿದು ಆಶ್ರಮದ ಸಾಮಾನ್ಯ ಜೀವನದಲ್ಲಿ ಭಾಗವಹಿಸಿದರೆ ಅಥವಾ ಸಾಧಕರ ಸಾಮಾನ್ಯ ನುಡಿಗಳನ್ನು ಆಲಿಸಿದರೆ ಮತ್ತೊಂದು ಭಾಗವು ಗೋಚರಿಸುವದು.

*

**ಎರಡು ವಾತಾವರಣಗಳು**

ಆಶ್ರಮದಲ್ಲಿ ಎರಡು ವಾತಾವರಣಗಳಿವೆ, ನಮ್ಮದು ಮತ್ತು ಇನ್ನೊಂದು ಸಾಧಕರದು. ಹೊರಗಿನಿಂದ ಸ್ವಲ್ಪ ಅರಿಯಬಲ್ಲ ಶಕ್ತಿಯನ್ನು ಹೊಂದಿರುವ ಜನರು ಆಗಮಿಸಿದಾಗ, ವಾತಾವರಣದಲ್ಲಿನ ಸಮಾಧಾನ ಮತ್ತು ಶಾಂತಿ ಅವರಿಗೆ ತಾಕುವದು ಮತ್ತು ಅವರು ಸಾಧಕರೊಂದಿಗೆ ಹೆಚ್ಚು ಸಂಭಾಷಣೆ ಮಾಡಿದಾಗ ಈ ಗ್ರಹಿಸುವಿಕೆ ಮತ್ತು ಪ್ರಭಾವವು ಕ್ರಮೇಣ ಇಲ್ಲವಾಗುವದು. ಸ್ವತಃ ಸಾಧಕರಿಂದಲೇ ಮಂಕುತನ ಅಥವಾ ಗೊಂದಲದ ಮತ್ತೊಂದು ವಾತಾವರಣವು ಸೃಷ್ಟಿಯಾಗುವದು – ತಾವು ಇರಬೇಕಾದ ರೀತಿಯಲ್ಲಿ ಅಂದರೆ ಅವರು ಶ್ರೀಮಾತೆಯವರಿಗೆ ತೆರೆದುಕೊಂಡಿದ್ದರೆ ಸಮಾಧಾನ ಮತ್ತು ಶಾಂತಿಯೊಂದಿಗೆ ಜೀವಿಸುವರು ಮತ್ತು ಆತಂಕ ಅಥವಾ ದಡ್ಡತನದಿಂದಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/632 – ಶ್ರೀ ಅರವಿಂದರು**

*ಪ್ರಿಯ ಶ್ರೀಮಾತೆ, ಆಶ್ರಮಕ್ಕೆ ಮಕ್ಕಳು ಬರುವ ಮೊದಲು ನಿಬಂಧನೆಗಳು ಹೆಚ್ಚು ಬಿಗಿ ಮತ್ತು ಕಟ್ಟುನಿಟ್ಟಾಗಿದ್ದವು ಎಂದು ನಮಗೆ ಹೇಳಲಾಗಿದೆ. ಈ ನಿಬಂಧನೆಗಳು ಹೀಗೆ ಮತ್ತು ಏಕೆ ಈಗ ಬದಲಾಗಿವೆ?*

ಮಕ್ಕಳು ಬರುವ ಮೊದಲು, ಸಾಧನೆ ಮಾಡಬಯಸುವವರನ್ನು ಮಾತ್ರ ಆಶ್ರಮಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಸಾಧನೆಗೆ ಉಪಯೋಗಕರವಾದ ಪ್ರವೃತ್ತಿಗಳು ಮತ್ತು ಚಟುವಟಿಕೆಗಳನ್ನು ಮಾತ್ರ ಪರಿಗಣಿಸಲಾಗುತ್ತಿತ್ತು.

ಆದರೆ ಮಕ್ಕಳು ಸಾಧನೆ ಮಾಡಬೇಕೆಂದು ಒತ್ತಾಯಪಡಿಸುವದು ಅವಿವೇಕವೆಂದು ಭಾವಿಸಿ ಆಶ್ರಮಕ್ಕೆ ಮಕ್ಕಳ ಪ್ರವೇಶವಾಗುತ್ತಿದ್ದಂತೆ ಈ ಅತಿ ನಿಯಮ ನಿಷ್ಠೆಗಳು ಕಾಣದಾದವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/109**

## ಅನುಸರಿಸಬೇಕಾದ ಧ್ಯೇಯ

ಮಾನವ ಜನಾಂಗವು ಇದುವರೆಗೂ ಮಾಡಿರುವ ಸಾಧನೆಯು, ಅದು ಎಷ್ಟೇ ಶ್ರೇಷ್ಠವಾದುದಾಗಿದ್ದರೂ, ನಮ್ಮ ಧ್ಯೇಯವಾಗಲು ಸಾಧ್ಯವಿಲ್ಲ. ಮಾನವ ಆದರ್ಶಗಳಿಗೆ ಪ್ರಯೋಗ ಶಾಲೆಯಾಗಿ ಅಥವಾ ಕೇಂದ್ರವಾಗಿ ವಿಸ್ತಾರವಾದ ಜಗತ್ತು ಇದೆ.

ನಮ್ಮ ಉದ್ದೇಶವು ವಿಭಿನ್ನವಾದುದಾಗಿದೆ. ಈಗ ನಮ್ಮ ಸಫಲತೆಯ ಸಾಧ್ಯತೆಗಳು ಬಹಳ ಕ್ಷೀಣವಾಗಿದ್ದರೂ, ಭವಿಷ್ಯವನ್ನು ಸಿದ್ಧಪಡಿಸಲು ನಾವು ಕಾರ್ಯನಿರತರಾಗಿರುವೆವು ಎಂಬುದಂತೂ ಸತ್ಯ.

ಬಾಹ್ಯ ದೃಷ್ಟಿಕೋನದಿಂದ ಪ್ರಪಂಚದಲ್ಲಿನ ಅನೇಕ ಈಗಿನ ಸಾಧನೆಗಳಿಗಿಂತ ನಾವು ಕೆಳಗೆ ಇರುವೆವು ಎಂಬುದು ನನಗೆ ತಿಳಿದಿದೆ. ಆದರೆ ಮಾನವ ಮಾನದಂಡಗಳಿಗೆ ಅನುಗುಣವಾಗಿ ಪರಿಪೂರ್ಣವಾಗಿರಬೇಕೆಂಬುದು ನಮ್ಮ ಗುರಿಯಲ್ಲ. ಭವಿಷ್ಯತ್ಕಾಲಕ್ಕೆ ಸೇರಿದ ಮತ್ತಿನ್ಯಾವುದಕ್ಕೋ ನಾವು ಪ್ರಯತ್ನಿಸುತ್ತಿರುವೆವು.

ಆಶ್ರಮವು ನವ ಜಗತ್ತಿನ ತೊಟ್ಟಿಲಾಗಬೇಕು ಎಂಬ ಉದ್ದೇಶದಿಂದಲೇ ಸ್ಥಾಪಿತವಾಗಿದೆ.

ಸ್ಫೂರ್ತಿಯು ಔನ್ನತ್ಯದಿಂದ ಬಂದಿದೆ, ಮಾರ್ಗದರ್ಶಕ ಶಕ್ತಿಯು ಮೇಲಿನಿಂದ ಆಗಮಿಸಿದೆ. ಸೃಷ್ಟಿ ಶಕ್ತಿಯು ಔನ್ನತ್ಯದಿಂದ ಆಗಮಿಸಿದೆ. ನವ ಸಾಕ್ಷಾತ್ಕಾರದ ಅವರೋಹಣಕ್ಕಾಗಿ ಅವು ಕೆಲಸ ಮಾಡುತ್ತಿವೆ.

ಇಂದಿನ ಜಗತ್ತಿಗೆ ಆಶ್ರಮವು ಸೇರ್ಪಡೆಯಾಗಿರುವದು ಅದರ ಕೊರತೆಗಳು, ಅಭಾವಗಳು ಮತ್ತು ವಿಫಲತೆಗಳಿಂದ ಮಾತ್ರ.

ಆಶ್ರಮವನ್ನು ಅದರ ಕಷ್ಟಗಳಿಂದ ಹೊರಗೆಳೆಯಲು ಮಾನವ ಜನಾಂಗದ ಇಂದಿನ ಯಾವ ಸಾಧನೆಗಳಿಗೂ ಸಾಧ್ಯವಿಲ್ಲ.

ಅದರ ಎಲ್ಲಾ ಸದಸ್ಯರ ಸಂಪೂರ್ಣ ಬದಲಾವಣೆ ಮತ್ತು ಅವರೋಹಿಸುತ್ತಿರುವ ಸತ್ಯದ ಬೆಳಕಿಗೆ ಸಮಗ್ರವಾಗಿ ತೆರೆದುಕೊಳ್ಳುವದರಿಂದ ಮಾತ್ರ ಅದಕ್ಕೆ ನೆರವಾಗಬಹುದು.

ಸಂಶಯಾತೀತವಾಗಿ ಕಾರ್ಯವು ಕಷ್ಟಕರವಾದುದು ಆದರೆ ಅದನ್ನು ಸಾಧಿಸಬೇಕೆಂದು ನಾವು ಆದೇಶವನ್ನು ಪಡೆದಿರುವೆವು ಮತ್ತು ನಾವು ಭೂಮಿಯ ಮೇಲೆ ಇರುವದು ಅದೇ ಉದ್ದೇಶದಿಂದಲೇ.

ಪರಮೋತ್ತಮನ ನೆರವು ಮತ್ತು ಸಂಕಲ್ಪದಲ್ಲಿ ನಿರಂತರವಾದ ಭರವಸೆಗಳೊಂದಿಗೆ ನಾವು ಕೊನೆಯವರೆಗೂ ಮುಂದುವರೆಯೋಣ.

ದ್ವಾರವು ತೆರೆದಿದೆ ಮತ್ತು ಈ ಉದ್ದೇಶಕ್ಕಾಗಿ ತಮ್ಮ ಜೀವನವನ್ನು ನೀಡಲು ನಿರ್ಧರಿಸಿರುವವರೆಲ್ಲರಿಗೂ ಅದು ಸದಾ ಕಾಲ ತೆರೆದಿರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/109–10**

## ನೈಜ ವಿಮೋಚನೆ

*ಗೋಚರಿಸುವಿಕೆಗಳಿಗಿಂತ ಬಹಳ ಉತ್ತಮವಾದುದೇನೋ ಇಲ್ಲಿ ಇದೆ, ಅದು ಆತ್ಮ ಮತ್ತು ಹೃದಯದಲ್ಲಿನ ಒಂದು ಸೌಹಾರ್ದಯುತ ಮತ್ತು ಜೀವಂತ ಸೂರ್ಯನಂತಿದೆ.*

ಇದೇ ನೈಜ ವಿವೇಚನೆ ಮತ್ತು ನಾನು ನಿನ್ನನ್ನು ಅಭಿನಂದಿಸುವೆ. ಒಂದು ನೈಜ ಮತ್ತು ಪ್ರಕಾಶಮಾನವಾದ ಚೇತನದ ಸಾನ್ನಿಧ್ಯದಿಂದ ಜಾಗೃತವಾಗುವ ಅಗ್ರಗಣ್ಯವಾದರೂ ಸೂಕ್ಷ್ಮವಾಗಿರುವ ಭಿನ್ನತೆಗಳ ಬಗ್ಗೆ ವಿವೇಚಿಸಲು ಗೋಚರಿಸುವಿಕೆಗಳನ್ನು ಮಾತ್ರ ನೋಡುವವರಿಗೆ ಅಸಾಧ್ಯ.

*

## ಮತೀಯವಲ್ಲ ಆದರೆ ಆಧ್ಯಾತ್ಮಿಕತೆ

ಇಲ್ಲಿ ನಾವು ಮತೀಯತೆಯನ್ನು ಹೊಂದಿಲ್ಲ. ದಿವ್ಯತೆಗೆ ಹೆಚ್ಚು ಸಮೀಪದಲ್ಲಿರುವ, ಔನ್ನತ್ಯದಲ್ಲಿರುವ, ಹೆಚ್ಚು ಆಳವಾಗಿರುವ ಮತ್ತು ಹೆಚ್ಚು ನೈಜವಾಗಿರುವ ಆಧ್ಯಾತ್ಮಿಕ ಜೀವನವನ್ನು ಮತೀಯತೆಯ ಜಾಗದಲ್ಲಿ ನಾವು ಅಳವಡಿಸಿರುವೆವು. ಏಕೆಂದರೆ ಪ್ರತಿಯೊಂದರಲ್ಲಿಯೂ ದಿವ್ಯವು ನೆಲೆಸಿದೆ, ಆದರೆ ನಾವು ಅದರ ಬಗ್ಗೆ ಜಾಗೃತರಾಗಿಲ್ಲ. ಮಾನವನು ಈ ಅಗಾಧವಾದ ಪ್ರಗತಿಯನ್ನು ಸಾಧಿಸಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/11**

# ಆಶ್ರಮ; ಶ್ರೀ ಅರವಿಂದರ ದೃಷ್ಟಿ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಯೋಗಕ್ಕಾಗಿ ಕರೆ

ನೀವು ಯೋಗಕ್ಕೆ ಯೋಗ್ಯರಾಗಿರಬಹುದು ಅದಕ್ಕಾಗಿ ನಿಮಗೆ ಸ್ಪಷ್ಟವಾದ ಕರೆಯೊಂದಿದೆ; ಆದರೆ ಯೋಗಕ್ಕೆ ವಿಭಿನ್ನ ಮಾರ್ಗಗಳಿವೆ ಮತ್ತು ಪ್ರತಿಯೊಂದಕ್ಕೂ ವಿಭಿನ್ನ ಗುರಿ ಮತ್ತು ಅಂತ್ಯವಿದೆ. ಬಯಕೆಗಳನ್ನು ಜಯಿಸುವುದು, ಜೀವನದ ಸಾಮಾನ್ಯ ಸಂಬಂಧಗಳನ್ನು ಬದಿಗಿಡುವುದು, ಮತ್ತು ಅನಿಶ್ಚಿತತೆಯಿಂದ ಶಾಶ್ವತವಾದ ದೃಢ ನಂಬಿಕೆಯ ಕಡೆಗೆ ಸಾಗಲು ಪ್ರಯತ್ನಿಸುವುದು ಎಲ್ಲ ಯೋಗ ಮಾರ್ಗಗಳಿಗೆ ಸಾಮಾನ್ಯವಾದ ಸಂಗತಿಗಳಾಗಿವೆ. ಕನಸು ಮತ್ತು ನಿದ್ರೆ, ಬಾಯಾರಿಕೆ ಮತ್ತು ಹಸಿವು ಇತ್ಯಾದಿಗಳನ್ನು ಜಯಿಸಲು ನಾವು ಪ್ರಯತ್ನಿಸಬಹುದು. ಆದರೆ ಪ್ರಪಂಚದೊಂದಿಗೆ ಅಥವಾ ಜೀವನದೊಂದಿಗೆ ಸಂಪರ್ಕ ಹೊಂದದೇ ಇರುವುದು ಅಥವಾ ಇಂದ್ರಿಯಗಳನ್ನು ದಮನ ಮಾಡುವುದು ಅಥವಾ ಅವುಗಳ ಕ್ರಿಯೆಯನ್ನು ಸಂಪೂರ್ಣವಾಗಿ ತಡೆಯುವುದು ಶ್ರೀ ಅರವಿಂದರ ಯೋಗದ ಭಾಗವಲ್ಲ. ದೈವೀ ಸತ್ಯದ ಬೆಳಕು, ಶಕ್ತಿ ಮತ್ತು ಆನಂದ ಮತ್ತು ಅದರ ಕ್ರಿಯಾತ್ಮಕ ದೃಢ ನಂಬಿಕೆಗಳನ್ನು ಜೀವನದೊಳಗೆ ತರುವ ಮೂಲಕ ಜೀವನವನ್ನು ಪರಿವರ್ತಿಸುವುದು ಶ್ರೀ ಅರವಿಂದೋ ಅವರ ಯೋಗದ ಉದ್ದೇಶವಾಗಿದೆ.ಈ ಯೋಗವು ಜಗತ್ತನ್ನು ದೂರವಿಡುವ ವೈರಾಗ್ಯದ ಯೋಗವಲ್ಲ, ಆದರೆ ದಿವ್ಯ ಜೀವನದ ಯೋಗವಾಗಿದೆ. ಇನ್ನೊಂದೆಡೆ, ಸಮಾಧಿ ಸ್ಥಿತಿಗೆ ಪ್ರವೇಶಿಸುವ ಮೂಲಕ ಮತ್ತು ಅದರಲ್ಲಿ ಪ್ರಪಂಚದ ಅಸ್ತಿತ್ವದೊಂದಿಗಿನ ಎಲ್ಲಾ ಸಂಪರ್ಕಗಳಿಂದ ದೂರವಾಗುವ ಮೂಲಕ ಮಾತ್ರ ನಿಮ್ಮ ಉದ್ದೇಶವನ್ನು ಸಾಧಿಸಬಹುದು. ಈ ಮಾರ್ಗದಲ್ಲಿ ಶ್ರೀ ಅರವಿಂದರಿಂದ ನೀವು ಸಹಾಯವನ್ನು ಪಡೆಯಲು ಸಾಧ್ಯವಿಲ್ಲ; ಗುರುವನ್ನು ಕಂಡುಕೊಳ್ಳಲು ನೀವು ಬೇರೆಯವರ ಬಳಿಗೆ ಹೋಗಲೇಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/542**

ಈ ಯೋಗದಲ್ಲಿ ಯಾರೂ ಯಾವುದೇ ಔಪಚಾರಿಕ ರೀತಿಯಲ್ಲಿ ದೀಕ್ಷೆಯನ್ನು ಪಡೆದಿಲ್ಲ. ಈ ಯೋಗ ಪಥಕ್ಕಾಗಿ ಅಥವಾ ಶ್ರೀ ಅರವಿಂದೋ ಅವರ ಕಾರ್ಯಕ್ಕಾಗಿ

ಆಂತರಿಕವಾಗಿ ಕರೆಯಲ್ಪಟ್ಟವರನ್ನು ಅಥವಾ ಆಯ್ಕೆಯಾದವರನ್ನು ಶ್ರೀಮಾತೆಯವರು ಸ್ವೀಕರಿಸುತ್ತಾರೆ. ಆ ಸ್ವೀಕೃತಿಯು ಸಾಕು. ಶ್ರೀಮಾತೆಯವರಿಂದ ಹೊರಡುವ ಶಕ್ತಿಯನ್ನು ಅನಾವೃತಗೊಳಿಸಿ ಅದನ್ನು ಸ್ವೀಕರಿಸಬಹುದಾದವರನ್ನು ಮತ್ತು ಅದರ ಕೆಲಸವನ್ನು ಅನುಭವಿಸುವವರನ್ನು ಕರೆಯಲ್ಪಟ್ಟವರು ಅಥವಾ ಆಯ್ಕೆ ಮಾಡಲ್ಪಟ್ಟವರು ಎಂದು ಪರಿಗಣಿಸಲಾಗುತ್ತದೆ. ಅವನು ಈಗ ಏನನ್ನು ಮಾಡುತ್ತಿರುವನೊ ಅದನ್ನು ಮಾಡುವುದರಿಂದ, ಅವನು ಸಮಯಕ್ಕೆ ಸರಿಯಾಗಿ ಶಕ್ತಿಯನ್ನು ಅನಾವೃತಗೊಳಿಸಿ ಅದನ್ನು ಸ್ವೀಕರಿಸಬಹುದು ಮತ್ತು ಅನುಭವಿಸಬಹುದು, ಅದು ಅವನು ಈ ರೀತಿಯ ಯೋಗಕ್ಕೆ ಪರಿಪೂರ್ಣವಾಗಿ ಯೋಗ್ಯನಾಗಿದ್ದಾನೆ ಎಂಬುದರ ಸಂಕೇತವಾಗಿದೆ. ಬೇರೇನೂ ಬೇಕಾಗಿಲ್ಲ; ಪ್ರಾರ್ಥನೆ ಮತ್ತು ಆಕಾಂಕ್ಷೆಗಳು ಸಾಕು. ಪ್ರಾಮಾಣಿಕತೆ ಮತ್ತು ಒಳಗಿನ ನಿಜವಾದ ಕರೆ ಇದ್ದರೆ ಮತ್ತೇನೂ ಬೇಕಾಗಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/542**

**ಯೋಗಕ್ಕಾಗಿ ಸಿದ್ಧತೆ**

ಓದು ಹಾಗೂ ಅಧ್ಯಯನಗಳು ಮನಸ್ಸನ್ನು ತಯಾರಿಗೊಳಿಸಲು ಉಪಯುಕ್ತವಾಗಿದ್ದರೂ, ಯೋಗವನ್ನು ಪ್ರವೇಶಿಸಲು ಅವುಗಳು ಸಮರ್ಪಕವಾದ ಸಾಧನಗಳಲ್ಲ ಎನ್ನುವ ಸಂಗತಿಯನ್ನು ನೀನು ಆತನಿಗೆ ತಿಳಿಸಿ ಹೇಳಬಹುದು. ನಮ್ಮೊಳಗಿನ ಸ್ವಯಂ ಸಮರ್ಪಣೆಯೇ ಯೋಗ ಪ್ರವೇಶಕ್ಕೆ ಸಾಧನವಾಗಿದೆ. ಅದು ಆಶ್ರಮದ ಪರಿಸರದೊಳಗೆ ಪ್ರವೇಶಿಸಲು ಬೇಕಾದಂಥ ಪ್ರವೇಶಾಧಿಕಾರವಲ್ಲ, ಏಕೆಂದರೆ ಆಶ್ರಮದ ವಾತಾವರಣದಲ್ಲಿ ಅನೇಕ ವಿಷಯಗಳಿವೆ, ಅವೆಲ್ಲವೂ ಅಪೇಕ್ಷಣೀಯವಲ್ಲ. ಶ್ರೀಮಾತೆಯವರ ಪ್ರಜ್ಞೆಯ ಜೊತೆ ಅವನು ಒಂದಾಗಬೇಕು ಮತ್ತು ಅಲ್ಲಿಯೂ ಕೂಡ ಮನಸ್ಸು ಮತ್ತು ಹೃದಯದಲ್ಲಿ ಪ್ರಾಮಾಣಿಕವಾದ ಆತ್ಮ–ಸಮರ್ಪಣೆ ಮತ್ತು ಸಂಕಲ್ಪವು ಅದಕ್ಕೆ ಸಾಧನವಾಗಿದೆ. ಶ್ರೀಮಾತೆಯವರು ನೀಡಿದ ಕೆಲಸವು ಯಾವಾಗಲೂ ಆ ಆತ್ಮ–ಸರ್ಪಣೆಗೆ ಕ್ಷೇತ್ರವಾಗಿದೆ; ಇದನ್ನು ಶ್ರೀಮಾತೆಗೆ ಅರ್ಪಣೆಯನ್ನಾಗಿ ಮಾಡಬೇಕು, ಅದರಿಂದ ಸ್ವಯಂ ಸಮರ್ಪಣೆಯ ಮೂಲಕ ಶ್ರೀಮಾತೆಯ ಶಕ್ತಿಯು ಕಾರ್ಯನಿರ್ವಹಿಸುವುದನ್ನು ಮತ್ತು ಅವರ ಉಪಸ್ಥಿತಿಯನ್ನು ಅನುಭವಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/548**

ಯೋಗದಲ್ಲಿ ಎರಡು ಹಂತಗಳಿವೆ ಎನ್ನುವುದನ್ನೂ ಸಹ ನೀವು ಅವನಿಗೆ ಹೇಳಬಹುದು, ಅವುಗಳಲ್ಲಿ ಮೊದನೆಯದು ಸಿದ್ಧತೆಯ ಹಂತ ಮತ್ತು ಎರಡನೆಯದು ನಿಜವಾದ ತೀವ್ರ ಸಾಧನೆ. ಅವನು ಕೈಗೊಳ್ಳಬಹುದಾದ ಹಂತ ಮೊದಲನೆಯದು. ಈ ಹಂತದಲ್ಲಿ ಪ್ರಾರ್ಥನೆಯೊಂದಿಗೆ ಹೃದಯದಲ್ಲಿ ಹಂಬಲ, ಭಕ್ತಿ, ಧ್ಯಾನ, ಜೀವನವನ್ನು ಪರಮಾತ್ಮನಿಗೆ ಅರ್ಪಿಸುವ ಇಚ್ಛೆ ಮುಖ್ಯ ವಿಷಯಗಳಾಗಿವೆ. ಸಹಜ ಸ್ವಭಾವದ ಶುದ್ಧೀಕರಣವು ಸಾಧಿಸಬೇಕಾದ ಮೊದಲ ಗುರಿಯಾಗಿದೆ. ಅನುಭವಗಳಿಗಾಗಿ ಅತಿಯಾದ ಉತ್ಸುಕತೆ ಇರಬಾರದು ಆದರೆ ಬಂದವುಗಳನ್ನು ಗಮನಿಸಬೇಕು ಮತ್ತು ಸರಿಯಾದ ವರ್ತನೆ ಮತ್ತು ನಿಜವಾದ ಬೆಳವಣಿಗೆಗೆ ಸಹಾಯಕವಾಗಿದ್ದರೆ ಅವುಗಳನ್ನು ಸ್ವೀಕರಿಸಬೇಕು. ಅಹಂಕಾರವನ್ನು ಹೊಗಳುವ ಅಥವಾ ಅದನ್ನು ಪೋಷಿಸುವ ಎಲ್ಲವನ್ನೂ ತಿರಸ್ಕರಿಸಬೇಕು. ಪ್ರಗತಿಯು ನಿಧಾನವಾಗಿದ್ದರೆ ಅಥವಾ ಅದಕ್ಕೆ ಅನೇಕ ತೊಂದರೆಗಳಿದ್ದರೆ ಅಲ್ಲಿ ಯಾವುದೇ ರೀತಿಯ ಅಸಹನೆ ಇರಬಾರದು–ಎಲ್ಲವನ್ನೂ ಶಾಂತಿಯಿಂದ, ತಾಳ್ಮೆಯಿಂದ ಮಾಡಬೇಕು–ಮತ್ತು ದಿವ್ಯಮಾತೆಯ ಮೇಲೆ ಸಂಪೂರ್ಣ ಭಾರವನ್ನು ಹಾಕಿ ಎಲ್ಲವನ್ನೂ ಮಾಡಬೇಕು.ಈ ಅವಧಿಯು ಸಾಧಕನ ಸಾಮರ್ಥ್ಯ ಮತ್ತು ದೈವೀ ಕಡೆಗೆ ಅವನ ಆಕಾಂಕ್ಷೆಯ ಪ್ರಾಮಾಣಿಕತೆಯನ್ನು ಪರೀಕ್ಷಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/551**

ಇಲ್ಲಿ ಗೃಹಸ್ಥ ಮತ್ತು ಸನ್ಯಾಸಿ ಎನ್ನುವ ಬಗ್ಗೆ ಯಾವುದೇ ಪ್ರಶ್ನೆಯಿಲ್ಲ, ಏಕೆಂದರೆ ಆ ವಿಷಯವು ನಮಗೆ ಅಪ್ರಸ್ತುತ. ಸಾಮಾನ್ಯ ವಿಧದ ಸನ್ಯಾಸಿಗಳಿಗೆ ಅಲ್ಲಿ ಸ್ಥಾನವಿಲ್ಲ, ಏಕೆಂದರೆ ನಾವು ಜೀವನಕ್ಕೆ ಬೆನ್ನು ಹಾಕುವುದಿಲ್ಲ; ನಾವು ಗೃಹಸ್ಥರೂ ಅಲ್ಲ, ಏಕೆಂದರೆ ನಾವು ನಮ್ಮ ಹಿಂದೆ ಸಾಮಾನ್ಯ ಮಾನವ ಜೀವನವನ್ನು ಮತ್ತು ಅದರ ಆಚಾರ ಕ್ರಮಗಳನ್ನು ಮತ್ತು ಉದ್ದೇಶಗಳನ್ನು ಬಿಟ್ಟಿರುತ್ತೇವೆ.

––

ಎಕ್ಸ್ (X) ಎನ್ನುವವರಿಗೆ ಸಂಬಂಧಿಸಿದಂತೆ, ಎರಡು ಬಗೆಯ ತೊಂದರೆಗಳಿವೆ. ಮೊದನೆಯದು, ಅವರ ಮನಸ್ಸು ಸಾಂಪ್ರದಾಯಿಕ ಕಲ್ಪನೆಗಳಿಗೆ ಮತ್ತು ಕ್ರಿಯಾ ವಿಧಾನಗಳಿಗೆ ಅಂಟಿಕೊಂಡಿರುವಂತೆ ತೋರುತ್ತದೆ, ಆದರೆ ಇಲ್ಲಿ ಅವುಗಳನ್ನು ಸಂಪೂರ್ಣವಾಗಿ ಪಕ್ಕಕ್ಕೆ ಎಸೆಯಲಾಗುತ್ತದೆ. ಒಂದು ಸಂಪೂರ್ಣವಾದ

ಮುಕ್ತಬುದ್ಧಿವಂತಿಕೆ (ಅಥವಾ, ಅದರ ಬದಲಿಗೆ, ಬಲವಾದ ಅತೀಂದ್ರಿಯ ನಂಬಿಕೆ ಮತ್ತು ಉತ್ಸಾಹ) ಇಲ್ಲದೆ ಕ್ರಿಯೆಗಳನ್ನು ಅನುಸರಿಸುವುದು ಇಲ್ಲಿ ಅಸಾಧ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/563**

ಕೇವಲ ಎರಡು ರೀತಿಯ ಜನರು ಯಾವುದೇ ನಿಜವಾದ ಲಾಭದೊಂದಿಗೆ ಇಲ್ಲಿ ಉಳಿಯಬಹುದು;

(1) ಆಧ್ಯಾತ್ಮಿಕ ವಾತಾವರಣವನ್ನು ಮೈಗೂಡಿಸಿಕೊಂಡು ಬದಲಾವಣೆಗೆ ಸಿದ್ಧರಾಗಿರುವವರು.

(2) ಇನ್ನೂ ಸಿದ್ಧವಾಗಿಲ್ಲದವರು ಮಹಿಮೆಗೆ ಶರಣಾಗಬಹುದು ಮತ್ತು ಅವರು ಸಿದ್ಧವಾಗುವವರೆಗೆ ನಿಧಾನವಾಗಿ ತಯಾರಿ ಮಾಡಿಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/563**

... ಖಚಿತವಾದ ಕರೆಯನ್ನು ಅನುಭವಿಸುವವರು ಮತ್ತು ಅವರ ಆಧ್ಯಾತ್ಮಿಕ ಹಣೆಬರಹ ಇಲ್ಲೇ ಇದೆ ಹೊರತು ಬೇರೆಲ್ಲಿಯೂ ಇಲ್ಲ ಎನ್ನುವವರು ಮಾತ್ರ ಇಲ್ಲಿಗೆ ಬರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/567**

*

**ಆಶ್ರಮ ಅಥವಾ ಮತ್ತೊಂದು ಕಡೆಗೆ**

ಚೈತ್ಯ ಸಂಪರ್ಕವು ದೂರದಲ್ಲಿ ಅಸ್ತಿತ್ವದಲ್ಲಿರಬಹುದು ಮತ್ತು ದೈವಿಕತೆಯು ಸ್ಥಳದಿಂದ ಸೀಮಿತವಾಗಿಲ್ಲ, ಆದರೆ ಎಲ್ಲೆಡೆ ಇದೆ ಎನ್ನುವುದು ಖಂಡಿತವಾಗಿಯೂ ನಿಜವಾಗಿದೆ. ಆಧ್ಯಾತ್ಮಿಕ ಜೀವನವನ್ನು ನಡೆಸಲು ಅಥವಾ ಈ ಯೋಗವನ್ನು ಅಭ್ಯಾಸ ಮಾಡಲು, ವಿಶೇಷವಾಗಿ ಅದರ ಪ್ರಾರಂಭದ ಹಂತಗಳಲ್ಲಿ, ಪ್ರತಿಯೊಬ್ಬರೂ ಪಾಂಡಿಚೇರಿಯಲ್ಲಿ ಇರಬೇಕಾದ ಅಥವಾ ದೈಹಿಕವಾಗಿ ಶ್ರೀಮಾತೆಯವರ ಹತ್ತಿರ ಇರಬೇಕಾದ ಅಗತ್ಯವಿಲ್ಲ. ಆದರೆ ಅದು ಸತ್ಯದ ಒಂದು ಮಗ್ಗಲು ಮಾತ್ರ; ಇನ್ನೊಂದು ಮಗ್ಗಲೂ ಇದೆ. ಇಲ್ಲದಿದ್ದರೆ, ಶ್ರೀಮಾತೆಯವರು ಇಲ್ಲಿಯೇ ಇರಬೇಕಾದ

ಅವಶ್ಯಕತೆ ಇರಲಿಲ್ಲ ಅಥವಾ ಆಶ್ರಮದ ಅಸ್ತಿತ್ವಕ್ಕೆ ಅಥವಾ ಯಾರಾದರೂ ಇಲ್ಲಿಗೆ ಬರುವುದು ಅವಶ್ಯಕತೆ ಇರಲಿಲ್ಲ ಎನ್ನುವುದು ತಾರ್ಕಿಕ ತೀರ್ಮಾನವಾಗಿರಬಹುದು.

ಎಲ್ಲರಲ್ಲಿಯೂ ಚೈತ್ಯ ಪುರುಷನಿದ್ದಾನೆ, ಆದರೆ ಕೆಲವೇ ಕೆಲವರಲ್ಲಿ ಮಾತ್ರ ಅದು ಪೂರ್ಣವಾಗಿ ಅಭಿವೃದ್ಧಿಗೊಂಡಿರುತ್ತದೆ, ಪ್ರಜ್ಞೆಯಲ್ಲಿ ಉತ್ತಮವಾಗಿ ಸ್ಥಾಪಿಸಲ್ಪಟ್ಟಿರುತ್ತದೆ ಅಥವಾ ಮುಂಭಾಗದಲ್ಲಿ ಪ್ರಮುಖವಾಗಿರುತ್ತದೆ; ಬಹಳಷ್ಟು ಜನರಲ್ಲಿ ಅದು ಮರೆಮಾಚಲ್ಪಟ್ಟಿರುತ್ತದೆ, ಹೆಚ್ಚಾಗಿ ಪರಿಣಾಮಕಾರಿಯಾಗಿರುವುದಿಲ್ಲ ಅಥವಾ ಒಂದು ಪ್ರಭಾವ ಮಾತ್ರವಾಗಿರುತ್ತದೆ, ಸಾಕಷ್ಟು ಜಾಗೃತವಾಗಿರುವುದಿಲ್ಲ ಅಥವಾ ಆಧ್ಯಾತ್ಮಿಕ ಜೀವನವನ್ನು ಬೆಂಬಲಿಸಲು ಸಾಕಷ್ಟು ಬಲವಾಗಿರುವುದಿಲ್ಲ. ಈ ಕಾರಣಕ್ಕಾಗಿಯೇ ಈ ಸತ್ಯದ ಕಡೆಗೆ ಸೆಳೆಯಲ್ಪಟ್ಟವರು ಇಲ್ಲಿಗೆ ಬರುವುದು ಅವಶ್ಯಕ, ಇದರಿಂದ ಅವರು ಚೈತ್ಯ ಪುರುಷನ ಜಾಗೃತಿಯನ್ನು ತರುವ ಅಥವಾ ಸಿದ್ಧಗೊಳಿಸುವ ಸ್ಪರ್ಶವನ್ನು ಪಡೆಯಬಹುದು – ಅದು ಅವರಿಗೆ ಪರಿಣಾಮಕಾರಿಯಾದ ಚೈತ್ಯ ಪುರುಷನ ಸಂಪರ್ಕದ ಆರಂಭವಾಗಿದೆ. ಈ ಕಾರಣಕ್ಕಾಗಿಯೇ ಅನೇಕರಿಗೆ ಇಲ್ಲಿ ವಾಸ್ತವ್ಯದ ಅಗತ್ಯವಿದೆ– ಅವರು ಸಿದ್ಧರಾಗಿದ್ದರೆ –ನೇರ ಪ್ರಭಾವ ಮತ್ತು ಸಾಮೀಪ್ಯದ ಅಡಿಯಲ್ಲಿ ಅವರು ಈ ಬೆಳವಣಿಗೆಯನ್ನು ಅಥವಾ ಪ್ರಜ್ಞೆಯಲ್ಲಿ ಚೈತ್ಯ ಪುರುಷನ ಅಭಿವೃದ್ಧಿಯನ್ನು ಅಥವಾ ಅದರ ಮುಂಭಾಗದ ಬರುವಿಕೆಯನ್ನು ಹೊಂದಬಹುದು. ಸ್ಪರ್ಶವನ್ನು ನೀಡಿದಾಗ ಅಥವಾ ಅಭಿವೃದ್ಧಿಯನ್ನು ಸಾಧಿಸಿದಾಗ, ಅದರ ಸಮರ್ಥತೆಯ ಕ್ಷಣದಲ್ಲಿ ಸಾಧಕನಿದ್ದಾಗ, ಅವನು ಹೊರಗಿನ ಪ್ರಪಂಚಕ್ಕೆ ಹಿಂದಿರುಗುತ್ತಾನೆ ಮತ್ತು ರಕ್ಷಣೆ ಮತ್ತು ಮಾರ್ಗದರ್ಶನದಲ್ಲಿ (ದೂರದಲ್ಲಿದ್ದರೂ ಕೂಡ) ಸಂಪರ್ಕವನ್ನು ಉಳಿಸಿಕೊಳ್ಳಲು ಮತ್ತು ತನ್ನ ಆಧ್ಯಾತ್ಮಿಕ ಜೀವನವನ್ನು ಮುಂದುವರಿಸಲು ಸಾಧ್ಯವಾಗುತ್ತದೆ. ಆದರೆ ಬಾಹ್ಯ ಜಗತ್ತಿನ ಪ್ರಭಾವಗಳು ಚೈತ್ಯ ಸ್ಪರ್ಶಕ್ಕೆ ಮತ್ತು ಚೈತ್ಯ ಬೆಳವಣಿಗೆಗೆ ಅನುಕೂಲವಾಗಿರುವುದಿಲ್ಲ, ಮತ್ತು ಸಾಧಕನು ಸಾಕಷ್ಟು ಜಾಗೃತನಾಗಿರದಿದ್ದರೆ ಅಥವಾ ಒಂದೆಡೆ ಇರದಿದ್ದರೆ, ಚೈತ್ಯ ಸ್ಪರ್ಶವು ಸ್ವಲ್ಪ ಸಮಯದ ನಂತರ ಸುಲಭವಾಗಿ ನಷ್ಟ ಹೊಂದಬಹುದು ಅಥವಾ ಅಡಗಿ ಹೋಗಬಹುದು ಮತ್ತು ಪ್ರತಿಕೂಲ ಪ್ರಭಾವಗಳಿಂದ ಅಥವಾ ಕ್ರಿಯೆಗಳಿಂದ ಬೆಳವಣಿಗೆಯು ಕುಂಠಿತಗೊಳ್ಳಬಹುದು, ತಟಸ್ಥಗೊಳ್ಳಬಹುದು ಅಥವಾ ಕ್ಷೀಣಿಸಬಹುದು. ಆದ್ದರಿಂದ ಸಂಪರ್ಕವನ್ನು ಬಲಪಡಿಸಲು ಅಥವಾ ಮರುಪಡೆಯಲು ಅಥವಾ ಅಭಿವೃದ್ಧಿಗೆ ನವೀನ ಪ್ರಚೋದನೆಯನ್ನು ನೀಡಲು

ಅಥವಾ ಮರುಸ್ಥಾಪಿಸಲು ಪ್ರಮುಖ ಪ್ರಭಾವದ ಸ್ಥಳಕ್ಕೆ ಹಿಂದಿರುಗುವಿಕೆಯ ಅನಿವಾರ್ಯತೆಯು ಅಸ್ತಿತ್ವದಲ್ಲಿರುತ್ತದೆ ಮತ್ತು ಅದನ್ನು ಆಗಾಗ್ಗೆ ಅನುಭವಿಸಲಾಗುತ್ತದೆ. ಕಾಲಕಾಲಕ್ಕೆ ಅಂತಹ ಸಾಮೀಪ್ಯದ ಆಕಾಂಕ್ಷೆಯು ಒಂದು ಪ್ರಾಣಿಕಬಯಕೆಯಲ್ಲ; ಅದು ಅಹಂಕಾರದಿಂದ ಒತ್ತಾಯಿಸಲ್ಪಟ್ಟಾಗ ಅಥವಾ ಪ್ರಮುಖ ಉದ್ದೇಶದೊಂದಿಗೆ ಬೆರೆತಾಗ ಮಾತ್ರ ಅದು ಒಂದು ಪ್ರಾಣಿಕ ಬಯಕೆಯಾಗುತ್ತದೆ, – ಆದರೆ ಇದು ಚೈತ್ಯ ಪುರುಷನ ಶಾಂತ, ಆಳವಾದ ಮತ್ತು ಅದರಲ್ಲಿ ಗಲಾಟೆಯಿಲ್ಲದೆ ಅಥವಾ ಪ್ರಕ್ಷುಬ್ಧ ಒತ್ತಾಯವಿಲ್ಲದೆ ಇರುವ ಆಕಾಂಕ್ಷೆಯಾಗಿದ್ದರೆ. ಕೇಂದ್ರ ಶಕ್ತಿ ಮತ್ತು ಪರಿಸ್ಥಿತಿಯ ನೇರ ಒತ್ತಡದ ಅಡಿಯಲ್ಲಿ ಆಶ್ರಮದಲ್ಲಿ ವಾಸಿಸಲು ಯಾರನ್ನು ಕರೆದಿಲ್ಲವೋ ಅಥವಾ ಇನ್ನೂ ಕರೆಯಲಾಗಿಲ್ಲವೋ ಅಂಥವರಿಗಾಗಿ ಇದು. ಹಾಗೆ ವಾಸಿಸಬೇಕಾದವರು ಮೊದಲಿನಿಂದಲೂ ಕರೆಯಲ್ಪಟ್ಟವರು ಅಥವಾ ಸಿದ್ಧರಾಗಿರುವವರು ಅಥವಾ ಯಾವುದೋ ಕಾರಣಕ್ಕಾಗಿ ಅಥವಾ ಇನ್ನೊಂದು ಕಾರಣಕ್ಕಾಗಿ ಯೋಗದಿಂದ ಸಿದ್ಧವಾಗುತ್ತಿರುವ ಕಾರ್ಯದ ಅಥವಾ ಸೃಷ್ಟಿಯ ಭಾಗವಾಗಿ ರೂಪುಗೊಳ್ಳಲು ಅವಕಾಶವನ್ನು ಪಡೆದುಕೊಂಡವರು. ಅವರಿಗೆ, ಈ ವಾತಾವರಣದಲ್ಲಿ ವಾಸ್ತವ್ಯ ಮತ್ತು ಸಾಮಿಪ್ಯ ಅನಿವಾರ್ಯ; ನಿರ್ಗಮಿಸುವುದು ಎಂದರೆ ಅವರಿಗೆ ನೀಡಿದ ಅವಕಾಶವನ್ನು ತ್ಯಜಿಸುವುದು, ಆಧ್ಯಾತ್ಮಿಕ ನಿಯತಿಗೆ ಬೆನ್ನು ತಿರುಗಿಸುವುದು. ಬೇಡಿಕೆ ಮತ್ತು ಒತ್ತಡ ಅಸಾಧಾರಣವಾಗಿರುವುದರಿಂದ ಹೊರಗೆ ಉಳಿಯುವವರ ಪ್ರಯಾಸಕ್ಕಿಂತ ಅವರ ಕಷ್ಟಗಳು ತೋರಿಕೆಯಲ್ಲಿ ದೊಡ್ಡದಾಗಿರುತ್ತವೆ; ಆದರೆ ಅವರ ಅವಕಾಶ ಕೂಡಾ ಹೆಚ್ಚಾಗಿರುತ್ತದೆ ಮತ್ತು ಬೆಳವಣಿಗೆಗಾಗಿ ಬೇಕಾದ ಶಕ್ತಿ ಮತ್ತು ಪ್ರಭಾವವನ್ನು ಅವರಿಗೆ ನೀಡಲಾಗುತ್ತದೆ ಮತ್ತು ಅವರು ತಮ್ಮ ಆಯ್ಕೆ ಮತ್ತು ಕರೆಗೆ ನಿಷ್ಠರಾಗಿದ್ದರೆ ಆಧ್ಯಾತ್ಮಿಕವಾಗಿ ಏನಾಗಬೇಕೋ ಅದಾಗುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/576–77**

**ಸರಿಯಾದ ಮನೋಭಾವ**

ನೀನು ಹೇಳುವುದು ಸರಿಯಾಗಿದೆ. ಪರಮಾತ್ಮನಿಗೆ ಸಾಧಕನ ಅವಶ್ಯಕತೆ ಇದೆ, ಸಾಧಕನಿಗೆ ಪರಮಾತ್ಮನ ಅವಶ್ಯಕತೆ ಇಲ್ಲ ಅನ್ನೋ ಈ ಮನೋಭಾವವು ಸಂಪೂರ್ಣ ತಪ್ಪು ಮತ್ತು ಅಸಂಬದ್ಧವಾಗಿದೆ. ಇಲ್ಲಿ ಜನರನ್ನು ಸ್ವೀಕಾರ ಮಾಡಿದಾಗ,

ಅವರಿಗೆ ಒಂದು ದೊಡ್ಡ ದೈವೀ ಅನುಗ್ರಹದ ಅವಕಾಶವನ್ನು ನೀಡಲಾಗುತ್ತದೆ. ಒಂದು ದೊಡ್ಡ (ದೈವೀ) ಕಾರ್ಯದಲ್ಲಿ ಸಾಧನವಾಗುವ ಅವಕಾಶ ಸಿಗುತ್ತದೆ. ಈ ವ್ಯಕ್ತಿ ಅಥವಾ ಆ ವ್ಯಕ್ತಿಯ ಸಹಾಯವಿಲ್ಲದೆ ದೈವವು ತನ್ನ ಕಾರ್ಯವನ್ನು ಮಾಡಲಾಗದು ಎಂದು ಭಾವಿಸುವುದು ಖಂಡಿತವಾಗಿಯೂ ಅತ್ಯಂತ ಸೊಕ್ಕಿನ ಮತ್ತು ತರ್ಕಹೀನವಾದ ಸಂಗತಿಯಾಗಿದೆ. ಗೀತೆಯಲ್ಲಿ ಬೋಧಿಸಲಾದ 'ಋತೇऽಪಿತ್ವಾಂ' "ನೀನಿಲ್ಲದಿದ್ದರೂ" ಕಾರ್ಯವನ್ನು ಮಾಡಬಹುದು ಮತ್ತು ಅದರ 'ನಿಮಿತ್ತಮಾತ್ರಂ ಭವ' ಎನ್ನುವ ಸಂಗತಿಯನ್ನು ಅವರು ನೆನಪಿಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/580**

ಅವರು ಇಲ್ಲಿ (ಆಶ್ರಮದಲ್ಲಿ) ಉಳಿಯದೆ "ಜೀವನದ ಸಮರ್ಪಣೆ" ಸಾಧ್ಯ ಸಂಗತಿಯಾಗಿದೆ. ಇದು ಆಂತರಿಕ ಮನೋಭಾವದ ಮತ್ತು ಪ್ರಮಾತ್ಮನಿಗೆ ನಮ್ಮ ಸಂಪೂರ್ಣ ಸಮರ್ಪಣೆಯ ಪ್ರಶ್ನೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/584**

**ಈ ಆಶ್ರಮವು ಸನ್ಯಾಸಿಗಳಿಗಾಗಿ ಅಲ್ಲ**

ಈ ಆಶ್ರಮವು ಬೇರೆ ಆಶ್ರಮಗಳಂತೆ ಅಲ್ಲ–ಇಲ್ಲಿಯ ಸದಸ್ಯರುಗಳು ಸನ್ಯಾಸಿಗಳಲ್ಲ; ಇಲ್ಲಿ ಯೋಗದ ಏಕೈಕ ಉದ್ದೇಶ ಮೋಕ್ಷವಲ್ಲ. ಇಲ್ಲಿ ಮಾಡುವುದೇನೆಂದರೆ, ಕಾರ್ಯಕ್ಕೆ ಒಂದು ಸಿದ್ಧತೆ – ಬೇರೆಯಾವುದೇ ಅಡಿಪಾಯವಿಲ್ಲದೆ ಯೋಗ ಪ್ರಜ್ಞೆ ಮತ್ತು ಯೋಗ ಶಕ್ತಿಯ ತಳಹದಿಯ ಮೇಲೆ ಹುಟ್ಟುಹಾಕುವಂಥ ಒಂದು ಕಾರ್ಯ. ಇಲ್ಲಿ ಪ್ರತಿಯೊಬ್ಬ ಸದಸ್ಯನು ತನ್ನ ಆಧ್ಯಾತ್ಮ ಸಿದ್ಧತೆಯ ಭಾಗವಾಗಿ ಆಶ್ರಮದಲ್ಲಿ ಏನಾದರೊಂದು ಕಾರ್ಯವನ್ನು ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/590**

ಇನ್ನಿತರೇ ಆಶ್ರಮ ಅಥವಾ ಸಂಸ್ಥೆಗಳಿಗೆ ಸಾಮಾನ್ಯವಾದ ಉದ್ದೇಶಕ್ಕಿಂತ ಭಿನ್ನವಾದ ಉದ್ದೇಶದ ಮೇಲೆ ಈ ಆಶ್ರಮವನ್ನು ಸ್ಥಾಪಿಸಲಾಗಿದೆ. ನಮ್ಮ ಆಶ್ರಮದ ಉದ್ದೇಶ, ಸಾಧಕರು ಪ್ರಪಂಚವನ್ನು ತ್ಯಜಿಸಿ ಸಾಧನೆ ಮಾಡುವುದಕ್ಕಾಗಿ ಅಲ್ಲ. ಈ ಆಶ್ರಮವನ್ನು ಬೇರೆ ರೀತಿಯ ವಿಕಾಸಕ್ಕಾಗಿ ಮತ್ತು ಬೇರೆ ರೀತಿಯ ಜೀವನಕ್ಕಾಗಿ

ಅಭ್ಯಾಸ (ಯೋಗ) ಮಾಡುವ ಒಂದು ಕೇಂದ್ರ ಮತ್ತು ಒಂದು ಕ್ಷೇತ್ರವನ್ನಾಗಿ ಸ್ಥಾಪಿಸಲಾಗಿದೆ. ಅದು ಅಂತಿಮವಾಗಿ ಉನ್ನತ ಆಧ್ಯಾತ್ಮಿಕ ಪ್ರಜ್ಞೆಯಿಂದ ಪ್ರೇರೆಪಿಸಲ್ಪಡುತ್ತದೆ ಮತ್ತು ಆತ್ಮನ ಹೆಚ್ಚಿನ ಜೀವನವನ್ನು ಸಾಕಾರಗೊಳಿಸುತ್ತದೆ. ಸಾಮಾನ್ಯ ಜೀವನವನ್ನು ತ್ಯಜಿಸಿ ಇಲ್ಲಿ (ಆಶ್ರಮಕ್ಕೆ) ಪ್ರವೇಶಿಸುವ ಹಂತಕ್ಕೆ ಯಾವುದೇ ಸಾಮಾನ್ಯ ನಿಯಮವಿಲ್ಲ; ಪ್ರತಿಯೊಬ್ಬರ ವಿಷಯದಲ್ಲಿ ಅದು ವೈಯಕ್ತಿಕ ಬೇಡಿಕೆ ಮತ್ತು ಒತ್ತಾಸೆ ಮತ್ತು ಸಾಧ್ಯತೆಯ ಮೇಲೆ ಅಥವಾ ಅವರು ಈ ಹೆಜ್ಜೆಯನ್ನು ತೆಗೆದುಕೊಳ್ಳುವ ಉಪದೇಶದ ಮೇಲೆ ಅವಲಂಬಿಸಿದೆ. ಆದರೆ ಅಂತಿಮದಲ್ಲಿ ನಿರ್ಣಯವು ಶ್ರೀಮಾತೆಯವರ ಮೇಲೆ ಅವಲಂಬಿತವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/593**

**ದೂರದಿಂದ ಸಹಾಯ**

ಅವನು ದೂರದಿಂದ ಸಹಾಯವನ್ನು ಪಡೆಯಲು ಸಾಧ್ಯವಾಗದಿದ್ದರೆ ಅವನು ಇಲ್ಲಿ ಯೋಗವನ್ನು ಮುಂದುವರಿಸಲು ಹೇಗೆ ಸಾಧ್ಯ? ಈ ಯೋಗವು ಮೌಖಿಕ ಸೂಚನೆಗಳನ್ನು ಅಥವಾ ಬಾಹ್ಯವಾದ ಯಾವುದನ್ನೂ ಅವಲಂಬಿಸದೇ ಇರುವಂಥ ಯೋಗವಾಗಿದೆ. ಆದರೆ ಈ ಯೋಗವು, ಸಂಪೂರ್ಣ ಮೌನದಲ್ಲಿಯೂ ಸಹ ತಮ್ಮನ್ನು ತಾವು ತೆರೆದುಕೊಳ್ಳುವ ಮತ್ತು ಶಕ್ತಿ ಮತ್ತು ಪ್ರಭಾವವನ್ನು ಪಡೆಯುವ ಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಯಾರು ಅದನ್ನು ದೂರದಿಂದ ಪಡೆದುಕೊಳ್ಳಲಾರರೋ, ಅವರು ಇಲ್ಲಿಯೂ ಸಹ ಅದನ್ನು ಪಡೆದುಕೊಳ್ಳಲಾರರು. ತಮ್ಮಲ್ಲಿ ಸ್ಥಿರತೆ, ಶಾಂತಿ, ತಾಳ್ಮೆ ಮತ್ತು ನಿರಂತರ ಪ್ರಯತ್ನ ಇರದೇ ಈ ಯೋಗವನ್ನು ಮಾಡಲಾಗದು. ಹಲವರಿಗೆ, ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಮತ್ತು ಅವುಗಳನ್ನು ಖಂಡಿತವಾಗಿ ಹಾಗೂ ಒಟ್ಟಾರೆಯಾಗಿ ಜಯಿಸಲು ಹಲವು ವರ್ಷಗಳೇ ಬೇಕಾಗುತ್ತವೆ.

**ಆಶ್ರಮವು ಒಂದು ಪ್ರಯೋಗಶಾಲೆಯಂತೆ**

ಅಥರದಾಸ್ ಅವರ ಪ್ರಕಾರ, "ಪ್ರಯೋಗಶಾಲೆ" ಎಂದೂ ಎನಿಸಿರುವ ಒಂದು ಆಶ್ರಮದಲ್ಲಿ, ಆಧ್ಯಾತ್ಮಿಕ ಮತ್ತು ಅತಿಮಾನಸ ಯೋಗಕ್ಕಾಗಿ, ಮಾನವ ಕುಲವನ್ನು ವಿವಿಧ ರೀತಿಯಲ್ಲಿ ಪ್ರತಿನಿಧಿಸುವುದು ಅವಶ್ಯಕ ಅಥವಾ ಅನಿವಾರ್ಯವಾಗಿದೆ.

ಪರಿವರ್ತನೆಯ ಸಮಸ್ಯೆಗೆ ಅನುಕೂಲಕರ ಮತ್ತು ಪ್ರತಿಕೂಲವಾದ ಎಲ್ಲಾ ರೀತಿಯ ಅಂಶಗಳನ್ನು ಎದುರಿಸಬೇಕಾಗುತ್ತದೆ. ಅದೇ ಮನುಷ್ಯ ತನ್ನಲ್ಲಿ ನಿಜವಾಗಿಯೂ ಈ ಎರಡು ವಸ್ತುಗಳ ಮಿಶ್ರಣವನ್ನು ಒಳಗೊಂಡಿರುತ್ತಾನೆ. ಯೋಗಕ್ಕೆ ಕೇವಲ ಸಾತ್ವಿಕ ಮತ್ತು ಸಂಸ್ಕಾರವಂತರು ಮಾತ್ರ ಬಂದರೆ, ಅಂದರೆ ಯಾರಲ್ಲಿ ಪ್ರಾಣಿಕತೊಂದರೆ ಇರುವುದಿಲ್ಲವೋ ಅಂತವರು ಬಂದರೆ, ಭೂಮಂಡಲದ ಪ್ರಕೃತಿಯಲ್ಲಿನ ಪ್ರಾಣಿಕ ಅಂಶದ ಕಷ್ಟವನ್ನು ಎದುರಿಸದೆ ಮತ್ತು ಜಯಿಸದೆ ಇದ್ದರೆ, ಪ್ರಯತ್ನವು ವಿಫಲವಾಗಬಹುದು. ಕೆಲವು ಸಂದರ್ಭಗಳಲ್ಲಿ ಮಾನಸಿಕ, ಪ್ರಾಣಿಕ ಮತ್ತು ಭೌತಿಕದ ಮೇಲೆ ಹೇರಲ್ಪಟ್ಟ ಮನಸ್ಸನ್ನು ಮೀರಿದ ಒಂದು ಸ್ತರವು ಸಂಭಾವ್ಯವಾಗಿರಬಹುದು ಮತ್ತು ಅದು ಅವುಗಳ ಮೇಲೆ ಪ್ರಭಾವ ಬೀರಬಹುದು, ಆದರೆ ಅತಿಮಾನಸ ಅಥವಾ ಮಾನವನ ಯಾವುದೇ ಸರ್ವೋತ್ತಮ ಪರಿವರ್ತನೆ ಕಷ್ಟಕರ. ಆದರೆ ಆಶ್ರಮದಲ್ಲಿ ಇರುವವರು ಎಲ್ಲ ಪ್ರಾಂತಗಳಿಂದ ಬರುತ್ತಾರೆ ಮತ್ತು ಅವರು ಎಲ್ಲ ರೀತಿಯವರಾಗಿರುತ್ತಾರೆ.

ಈ ಯೋಗ ಪಥದಲ್ಲಿ, ಸಾಮೂಹಿಕವಾಗಿ – ಪ್ರತಿಯೊಂದಕ್ಕೂ ಅಗತ್ಯವಿಲ್ಲದಿದ್ದರೂ–ಪ್ರತಿ ಸ್ತರವು ನಿರ್ವಹಿಸಲ್ಪಟ್ಟಾಗ ಅದರ ಎಲ್ಲಾ ತೊಂದರೆಗಳು ಉದ್ಭವಿಸುತ್ತವೆ. ಅದು ಆಶ್ರಮದಲ್ಲಿರುವ ಜನರು ಅಲ್ಲಿ ನಿರೀಕ್ಷೆ ಮಾಡದಕ್ಕಿಂತ ಹೆಚ್ಚು ವಿವರಿಸುತ್ತದೆ. “ಪ್ರಯೋಗಶಾಲೆ”ಯಲ್ಲಿ ಪ್ರಾಥಮಿಕ ಕೆಲಸ ಮುಗಿದ ಮೇಲೆ, ಪರಿಸ್ಥಿತಿಗಳು ಬದಲಾಗಲೇಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/600–01**

## ಎಲ್ಲ ರೀತಿಯ ಆಶ್ರಮ ವಾಸಿಗಳು

ಆಶ್ರಮ ವಾಸಿಗಳ ನಡುವೆ ಸಾಮಾನ್ಯ ರೀತಿಯ ಮಾನವ ಮೈತ್ರಿಯ ಮೇಲೆ ಹೆಚ್ಚಿನ ಒತ್ತಡವನ್ನು ಹಾಕಲಾಗಿಲ್ಲ, (ಆದರೂ ಒಳ್ಳೆಯ ಭಾವನೆ, ಪರಿಗಣನೆ ಮತ್ತು ಸೌಜನ್ಯ ಯಾವಾಗಲೂ ಅಲ್ಲಿ ಇರಬೇಕಾಗಿದ್ದರೂ), ಏಕೆಂದರೆ ಅದು ಗುರಿಯಲ್ಲ; ಇದು ಹೊಸ ಪ್ರಜ್ಞೆಯಲ್ಲಿನ ಏಕತೆಯಾಗಿದೆ, ಅದು ಗುರಿಯಾಗಿದೆ ಮತ್ತು ಪ್ರತಿಯೊಬ್ಬರೂ ತಮ್ಮ ಸಾಧನೆಯನ್ನು ಮಾಡುವುದು, ಹೊಸ ಪ್ರಜ್ಞೆಯನ್ನು ತಲುಪುವುದು ಮತ್ತು ಅಲ್ಲಿ ಏಕತೆಯನ್ನು ಅರಿತುಕೊಳ್ಳುವುದು ಮೊದಲ ಸಂಗತಿಯಾಗಿದೆ.

ಸಾಧಕರಲ್ಲಿ ಏನೇ ದೋಷಗಳಿರಲಿ, ಅವುಗಳನ್ನು ಮೇಲಿನ ಬೆಳಕಿನಿಂದ (ಜ್ಞಾನದಿಂದ) ತೆಗೆದುಹಾಕಲೇಬೇಕು – ಒಂದು ಸಾತ್ವಿಕ ನಿಯಮವು ಒಂದು ಸಾತ್ವಿಕ ನಿಯಮಕ್ಕೆ ಒಳಪಡುವಂತೆ ಮಾಡಲ್ಪಟ್ಟ ಸಹಜ ಗುಣಗಳನ್ನು ಮಾತ್ರ ಬದಲಾಯಿಸುತ್ತದೆ.

*

ಇನ್ನು ಮುಂದೆ ಆಶ್ರಮ ವಾಸವು ಈ ಸಾಧಕರಿಗೆ ಮಾತ್ರ ಲಾಭದಾಯಕ–ವಾಗಿರುತ್ತದೆ: (1) ಯಾರು ಸಾಮಾನ್ಯ ಮಾನವ ಜೀವನದ ಎಲ್ಲಾ ಬಂಧನಗಳಿಗೆ ಬೆನ್ನು ತಿರುಗಿಸಿ ತೀವ್ರವಾದ ಸಾಧನೆಗೆ ಸಿದ್ಧರಾಗಿರುತ್ತಾರೋ, (2) ಯಾರೂ ಇನ್ನೂ ಸಿದ್ಧವಾಗಿಲ್ಲದಿದ್ದರೂ ಗುರಿಯನ್ನು ಸಂಪೂರ್ಣವಾಗಿ ಅರಿತುಕೊಂಡಿರುತ್ತಾರೋ ಮತ್ತು ಅದಕ್ಕೆ ಸಿದ್ಧರಾಗಲು ತಮ್ಮನ್ನು ತಾವು ತೆರೆದುಕೊಳ್ಳುತ್ತಾರೋ, (3) ಯಾರು ಆಂತರಿಕ ಪ್ರಖರ ಸಾಧನೆಗೆ ಇನ್ನೂ ಸಮರ್ಥರಾಗಿರುವುದಿಲ್ಲವೋ, ಅಂಥವರು ಸಾಧನೆಯ ಪಥದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/601**

**ಎರಡು ಪರಿಸರ (ವಾತಾವರಣ)**

ಆಶ್ರಮದಲ್ಲಿ ಎರಡು ವಾತಾವರಣಗಳಿವೆ, ನಮ್ಮದು ಮತ್ತು ಸಾಧಕರದು. ಯಾವಾಗ ಸ್ವಲ್ಪವೇ ಗ್ರಹಣ ಶಕ್ತಿಯನ್ನು ಹೊಂದಿದಂಥ ಜನರು ಹೊರಗಿನಿಂದ ಬರುತ್ತಾರೋ, ಅವರು ಆಶ್ರಮದ ಪರಿಸರದಲ್ಲಿ ಆಳವಾದ ಸ್ತಬ್ದತೆ ಹಾಗೂ ಶಾಂತಿಯಿಂದ ಪ್ರಭಾ ವಿತರಾಗುತ್ತಾರೆ ಮತ್ತು ಅವರು ಆಶ್ರಮದಲ್ಲಿನ ಸಾಧಕರೊಂದಿಗೆ ಹೆಚ್ಚು ಬೆರೆತಾಗ ಮಾತ್ರ ಗ್ರಹಿಕೆ ಮತ್ತು ಪ್ರಭಾವವು ಮಸುಕಾಗುತ್ತದೆ. ಅಪ್ರಬುದ್ದತೆಯ ಅಥವಾ ಅಶಾಂತಿಯ ಮತ್ತೊಂದು ಪರಿಸರವನ್ನು ಸಾಧಕರು ಸ್ವತಃ ಸೃಷ್ಟಿಸುತ್ತಾರೆ–ಅವರು ಶ್ರೀಮಾತೆಯವರಿಗೆ ತೆರೆದುಕೊಳ್ಳಬೇಕಾದಂತೆ ತೆರೆದುಕೊಂಡಿದ್ದರೆ ಅವರು ಸ್ತಬ್ಧತೆ ಹಾಗೂ ಶಾಂತಿಯಲ್ಲಿ ಬದುಕುತ್ತಾರೆ, ಅಶಾಂತಿ ಅಥವಾ ಅಪ್ರಬುದ್ದತೆಯಲ್ಲಿ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/632**

ಆಶ್ರಮ ಆವರಣಗಳು ಯಾವುವು? ಆಶ್ರಮದ ಸಾಧಕರು ವಾಸಿಸುವ ಪ್ರತಿಯೊಂದು ಮನೆಯೂ ಆಶ್ರಮದ ಆವರಣದಲ್ಲಿದೆ. ಜನರು ಈ ಕಾಂಪೌಂಡ್‌ನಲ್ಲಿರುವ ಮನೆಗಳ ಬಗ್ಗೆ ಆಶ್ರಮ ಎಂದು ಮಾತಾಡೋದು ಒಂಥರಾ ವಿಲಕ್ಷಣವಾಗಿದೆ – ಅದಕ್ಕೆ ಯಾವುದೇ ಅರ್ಥವಿಲ್ಲ. ಅಥವಾ ಶ್ರೀಮಾತೆಯವರ ಪ್ರಭಾವ ಅಥವಾ ನನ್ನ ಪ್ರಭಾವ ಕಾಂಪೌಂಡ್‌ನಲ್ಲಿ ಮುಚ್ಚಿಹೋಗಿದೆ ಎಂದು ಅವರು ಭಾವಿಸುತ್ತಾರೆಯೇ?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/630–01**

## ಸನ್ನಿವೇಶಗಳನ್ನು, ಸಮಸ್ಯೆಗಳನ್ನು ಹೇಗೆ ಪರಿಹರಿಸಲಾಗುತ್ತದೆ

ಇಲ್ಲಿ ವಿಷಯಗಳನ್ನು ಹೇಗೆ ನಿಭಾಯಿಲಾಗುತ್ತದೆ ಎಂಬುದನ್ನು ವಿವರಿಸಲು ಪ್ರಯತ್ನಿಸುವುದು ನನಗೆ ಹೆಚ್ಚು ಮಹತ್ವದ್ದೆಂದು ತೋರುತ್ತದೆ. ಅದನ್ನು ನಿಜವಾಗಿ ಅರ್ಥಮಾಡಿಕೊಳ್ಳುವವರು ಬಹಳ ಕಡಿಮೆ ಮತ್ತು ಅದನ್ನು ಅರಿತುಕೊಳ್ಳುವವರು ಇನ್ನೂ ಕಡಿಮೆ.

ಯಾವುದೇ ಸಮಯದಲ್ಲಿ, ಒಂದು ಮಾನಸಿಕ ಯೋಜನೆ, ಒಂದು ಸ್ಥಿರವಾದ ಕಾರ್ಯಕ್ರಮ ಅಥವಾ ಒಂದು ವ್ಯವಸ್ಥೆಯನ್ನು ಮೊದಲೇ ಎಂದಿಗೂ ನಿರ್ಧರಿಸಲ್ಪಟ್ಟಿಲ್ಲ. ಒಂದು ಪ್ರಜ್ಞೆಯ ಕ್ರಿಯೆಯಿಂದ (ಚಿತ್–ತಪಸ್ಸಿನಿಂದ) ಇಡೀ ವಿಷಯವು ಹುಟ್ಟಿದೆ, ಬೆಳೆದಿದೆ ಮತ್ತು ಒಂದು ಜೀವಿಯಾಗಿ ಅಭಿವೃದ್ಧಿ ಹೊಂದಿದೆ, ಇದನ್ನು ನಿರಂತರವಾಗಿ ನಿರ್ವಹಿಸಲ್ಪಟ್ಟಿದೆ, ವರ್ಧಿಸಲಾಗಿದೆ ಮತ್ತು ಬಲಪಡಿಸಲಾಗಿದೆ. ಪ್ರಜ್ಞಾಶಕ್ತಿಯು ಭೌತ ವಸ್ತುವಿನಲ್ಲಿ ಕೆಳಗಿಳಿದು ಹೊರಸೂಸಿದಾಗ, ಅದನ್ನು ವ್ಯಕ್ತಪಡಿಸಲು ಮತ್ತು ಪ್ರಕಟಿಸಲು ಸೂಕ್ತವಾದ ಸಾಧನಗಳನ್ನು ಹುಡುಕುತ್ತದೆ. ಉಪಕರಣವು ಹೆಚ್ಚು ಮುಕ್ತವಾದ, ಗ್ರಹಿಸುವ ಮತ್ತು ಮೃದುವಾಗಿದ್ದರೆ, ಫಲಿತಾಂಶಗಳು ಉತ್ತಮವಾಗಿರುತ್ತವೆ ಎಂದು ಹೇಳದೆ ಹೋಗುತ್ತದೆ. ಸಾಧಕರಲ್ಲಿ ಮತ್ತು ಅವರ ಮುಖಾಂತರ ಸುಗಮವಾಗಿ ಮತ್ತು ಸಾಮರಸ್ಯವಾಗಿ ಕಾರ್ಯನಿರ್ವಹಿಸುವ ಮಾರ್ಗದಲ್ಲಿ ಇರುವ ಎರಡು ಅಡೆತಡೆಗಳು ಯಾವುವು ಅಂದರೆ:

(1) ಪ್ರಜ್ಞಾಶಕ್ತಿಯ ಪ್ರಭಾವ ಮತ್ತು ಕಾರ್ಯನಿರ್ವಹಣೆಗೆ ದಾರಿಯನ್ನು ತಡೆಯುವಂಥ ಪೂರ್ವ ಕಲ್ಪಿತ ಆಲೋಚನೆಗಳು ಮತ್ತು ಮಾನಸಿಕ ರಚನೆಗಳು;

(2) ಅಭಿವ್ಯಕ್ತಿಯನ್ನು ವಿರೂಪಗೊಳಿಸುವ ಮತ್ತು ಸುಳ್ಳಾಗಿಸುವ ಪ್ರಾಣಿಕ ಆದ್ಯತೆಗಳು ಮತ್ತು ಪ್ರಚೋದನೆಗಳು.

ಈ ಎರಡೂ ವಿಷಯಗಳು ಅಹಂಕಾರದ ಸಹಜ ಪರಿಣಾಮಗಳಾಗಿವೆ. ಈ ಎರಡು ಅಂಶಗಳ ಹಸ್ತಕ್ಷೇಪವಿಲ್ಲದೆ ನನ್ನ ಭೌತಿಕ ಹಸ್ತಕ್ಷೇಪದ ಅಗತ್ಯವಿಲ್ಲ.

"ಶ್ರೀಮಾತೆಯವರು ಇಷ್ಟಪಡುವ ಸಂಗತಿಗಳಲ್ಲಿ", "ಶ್ರೀಮಾತೆಯವರು ಇಷ್ಟಪಡದ ಸಂಗತಿಗಳಲ್ಲಿ" ನೀವು ನಂಬಿಕೆಯನ್ನು ಹೊಂದದಿದ್ದಾಗ ನೀವು ಹೇಳಿದ್ದು ಸರಿ: ಇದು ಸಾಕಷ್ಟು ಬಾಲಿಶ ವ್ಯಾಖ್ಯಾನವಾಗಿದೆ.

ಕಾರ್ಯನಿರ್ವಹಿಸುವ ಬಲ ಮತ್ತು ಪ್ರಜ್ಞೆಯ ಬಗ್ಗೆ ಸ್ಪಷ್ಟವಾದ ಗ್ರಹಿಕೆ ಇದೆ, ಮತ್ತು ಈ ಬಲವು ವಿರೂಪಗೊಂಡಾಗ ಅಥವಾ ಪ್ರಜ್ಞೆಯು ಅದರ ಕ್ರಿಯೆಯಲ್ಲಿ ಅಸ್ಪಷ್ಟವಾದಾಗ, ನಾನು ಮಧ್ಯ ಪ್ರವೇಶಿಸಿ ಕಾರ್ಯವನ್ನು ಸರಿಪಡಿಸಬೇಕು. ಹೆಚ್ಚಿನ ಸಂದರ್ಭಗಳಲ್ಲಿ ವಿಷಯಗಳನ್ನು ಬೆರೆಸಲಾಗುತ್ತದೆ ಮತ್ತು ತಿರುಚಲ್ಪಟ್ಟ ಲಿಪ್ಯಂತರವನ್ನು ಶುದ್ಧ ಲಿಪ್ಯಂತರದಿಂದ ಪ್ರತ್ಯೇಕಿಸಲು ನಾನು ಮತ್ತೆ ಅಲ್ಲಿ ಮಧ್ಯ ಪ್ರವೇಶಿಸಬೇಕು.

ಇಲ್ಲವಾದರೆ, ಎಲ್ಲರಿಗೂ ಕ್ರಿಯೆಯ ಒಂದು ಮಹಾಸ್ವಾತಂತ್ರ್ಯವನ್ನು ಬಿಡಲಾಗುತ್ತದೆ, ಏಕೆಂದರೆ ಪ್ರಜ್ಞಾಶಕ್ತಿಯು ತನ್ನನ್ನು ತಾನು ಹಲವು ರೀತಿಗಳಲ್ಲಿ ಅಭಿವ್ಯಕ್ತಗೊಳಿಸಬಹುದು ಮತ್ತು ಅಭಿವ್ಯಕ್ತಿಯ ಪರಿಪೂರ್ಣತೆ ಹಾಗೂ ಸಮಗ್ರತೆಗಾಗಿ ಈ ಯಾವುದೇ ಅನುಮಾನಾತ್ಮಕವಾದ ಮಾರ್ಗಗಳನ್ನು ಬಿಟ್ಟುಬಿಡಲಾಗುವುದಿಲ್ಲ; ಆಯ್ಕೆಯನ್ನು ಮಾಡುವ ಮೊದಲು ಪರೀಕ್ಷೆಗೊಳಪಡಿಸಲಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/676–77**

## ಜನರನ್ನು ಸೆಳೆಯಲು ಅಲ್ಲ

ಜನರನ್ನು ಅದರಲ್ಲೂ ಯುವಜನರನ್ನು ಸಾಧನೆಯ ಪಥಕ್ಕೆ ಸೆಳೆಯುವುದು ಜಾಣತನದ ಸಂಗತಿಯಲ್ಲ ಎಂದು ಹೇಳಬಹುದು. ಈ ಯೋಗಕ್ಕೆ ಬರುವ ಸಾಧಕನು ನಿಜವಾದ ಕರೆಯನ್ನು ಹೊಂದಿರಬೇಕು ಮತ್ತು ನಿಜವಾದ ಕರೆಯೊಂದಿಗೂ ಕೂಡ ಈ ಯೋಗ ಮಾರ್ಗವು ಸಾಕಷ್ಟು ಕಷ್ಟಕರವಾಗಿರುತ್ತದೆ. ಆದರೆ ಉತ್ಸಾಹಭರಿತ ಪ್ರಚಾರದ ಸ್ಫೂರ್ತಿಯಲ್ಲಿ ಜನರನ್ನು ಸೆಳೆದಾಗ, ಒಂದು

ಅನುಕರಣೀಯ ಮತ್ತು ಅವಾಸ್ತವಿಕ ಕಿಡಿಯನ್ನು ಹೊತ್ತಿಸುವ ಅಪಾಯವಿರುತ್ತದೆ, ಇಲ್ಲದಿದ್ದರೆ ಅಲ್ಪಾವಧಿಯ ಕಿಚ್ಚು ಉಳಿಯಲು ಸಾಧ್ಯವಿಲ್ಲ ಮತ್ತು ಪ್ರಾಣಿಕ ಅಲೆಗಳ ಏರಿಳಿತದಿಂದ ಅದು ಮುಳುಗಿಹೋಗುತ್ತದೆ. ಇದು ವಿಶೇಷವಾಗಿ ಸೌಮ್ಯವಾಗಿರುವ (ಮೃದುವಾಗಿರುವ) ಮತ್ತು ತಮ್ಮದಲ್ಲದ ಆಲೋಚನೆ ಮತ್ತು ಭಾವನೆಗಳಿಂದ ಸುಲಭವಾಗಿ ಹಿಡಿಯಲ್ಪಡುವ ಯುವಜನರಿಗೆ ಸಂಬಂಧಿಸಿದೆ – ನಂತರ ಅದರ ಅತೃಪ್ತಿಕರ ಬೇಡಿಕೆಗಳೊಂದಿಗೆ ಪ್ರಾಣವು ಏರಿಕೆಯಾಗುತ್ತದೆ ಮತ್ತು ಅವರು ಎರಡು ವ್ಯತಿರಿಕ್ತ ಶಕ್ತಿಗಳ ನಡುವೆ ಹೊಯ್ದಾಡುತ್ತಾರೆ ಅಥವಾ ಸಹಜವಾದ ಕೌಮಾರ್ಯದ ಆಸಕ್ತಿಯುಳ್ಳ ಸಾಮಾನ್ಯ ಜೀವನ ಮತ್ತು ಕ್ರಿಯೆ ಮತ್ತು ಬಯಕೆಯ ತೃಪ್ತಿಗೆ ವೇಗವಾಗಿ ಸೋತುಹೋಗುತ್ತಾರೆ. ಅಥವಾ ಅನರ್ಹವಾದ ಆಧಾರವು ಅದು ಇನ್ನೂ ಸಿದ್ಧವಾಗಿಲ್ಲದ ಕರೆಯ ಒತ್ತಡದ ಅಡಿಯಲ್ಲಿ ನರಳುತ್ತದೆ. ಒಬ್ಬನು ತನ್ನಲ್ಲಿ ನಿಜವಾದ ವಿಷಯವನ್ನು ಹೊಂದಿರುವಾಗ, ಅವನು ಅಂತಿಮವಾಗಿ ಸಾಧನೆಯ ಪೂರ್ಣ ಮಾರ್ಗದವನ್ನು ಅನುಸರಿಸುತ್ತಾನೆ, ಆದರೆ ಅದನ್ನು ಹಾಗೆ ಮಾಡುವುದು ಕೆಲವರು ಮಾತ್ರ. ತಾವಾಗಿಯೇ ಬರುವ ಜನರನ್ನು ಮಾತ್ರ ಸ್ವೀಕರಿಸುವುದು ಉತ್ತಮ ಮತ್ತು ಅವರಲ್ಲಿ ಯಾರು ನಿಜವಾಗಿಯೂ ತಮ್ಮದೇ ಆದ ಮತ್ತು ನಿರಂತರವಾದ ಕರೆಯನ್ನು ಹೊಂದಿರುತ್ತಾರೋ ಅವರನ್ನು ಮಾತ್ರ ಸ್ವೀಕರಿಸುವುದು ಉತ್ತಮ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/691–92**

## ಒಬ್ಬ ಸಾಧಕನ ಅವಶ್ಯಕತೆಗಳು

ಒಬ್ಬ ಸಾಧಕನ ಅವಶ್ಯಕತೆಗಳು, ಎಷ್ಟು ಸಾಧ್ಯವೊ ಅಷ್ಟು ಕಡಿಮೆ ಇರಬೇಕು; ಏಕೆಂದರೆ, ಜೀವನದಲ್ಲಿ ಅಗತ್ಯವಾಗಿ ಬೇಕಾದ ಸಂಗತಿಗಳು ಕೆಲವು ಮಾತ್ರ. ಉಳಿದವುಗಳು ಸೌಲಭ್ಯಗಳಾಗಿರುತ್ತವೆ ಇಲ್ಲವೇ ಜೀವನಕ್ಕೆ ಅಲಂಕಾರಿಕ ವಸ್ತು ಅಥವಾ ಆಡಂಬರದ ಸಂಗತಿಗಳಾಗಿರುತ್ತವೆ. ಒಬ್ಬ ಯೋಗಿಯು ಇವುಗಳನ್ನು ಹೊಂದುವ ಅಥವಾ ಆನಂದಿಸುವ ಹಕ್ಕನ್ನು ಈ ಕೆಳಗಿನ ಎರಡು ಷರತ್ತುಗಳಲ್ಲಿ ಯಾವುದಾದರೂ ಒಂದು ಷರತ್ತಿನ ಮೇಲೆ ಮಾತ್ರ –

(1) ಅವನು ತನ್ನ ಸಾಧನೆಯ ಸಮಯದಲ್ಲಿ ಅವುಗಳನ್ನು ಯಾವುದೇ ಬಂಧನ ಅಥವಾ ಬಯಕೆಯಿಲ್ಲದೆ ವಸ್ತುಗಳನ್ನು ಹೊಂದಲು ತನ್ನನ್ನು ತಾನು ತರಬೇತುಗೊಳಿಸಲು ಮತ್ತು ಅವುಗಳನ್ನು ಸರಿಯಾಗಿ ಬಳಸಲು ಕಲಿಯಲು,

ದೈವೀ ಚಿತ್ತಕ್ಕೆ ಅನುಗುಣವಾಗಿ, ಸರಿಯಾದ ನಿರ್ವಹಣೆಯೊಂದಿಗೆ, ನ್ಯಾಯಯುತ ಸಂಘಟನೆ, ವ್ಯವಸ್ಥೆ ಮತ್ತು ಪ್ರಮಾಣದೊಂದಿಗೆ ಮಾತ್ರ ಬಳಸಿದರೆ– ಅಥವಾ,

(2) ಅವನು ಈಗಾಗಲೇ ಬಯಕೆ ಮತ್ತು ಬಂಧನದಿಂದ ನಿಜವಾದ ಸ್ವಾತಂತ್ರ್ಯವನ್ನು ಹೊಂದಿದ್ದರೆ ಮತ್ತು ನಷ್ಟ ಅಥವಾ ತಡೆಹಿಡಿಯುವಿಕೆ ಅಥವಾ ಅಭಾವದಿಂದ ಯಾವುದೇ ರೀತಿಯಲ್ಲಿ ಪ್ರಚೋದನೆಗೆ ಅಥವಾ ಪರಿಣಾಮಕ್ಕೆ ಒಳಗಾದಿದ್ದರೆ. ಅವನಿಗೆ ಯಾವುದೇ ದುರಾಶೆ, ಆಸೆ, ಬೇಡಿಕೆ, ಸ್ವಾಧೀನ ಅಥವಾ ಅನುಭೋಗದ ಹಕ್ಕು, ನಿರಾಕರಿಲ್ಪಟ್ಟಾಗ ಅಥವಾ ವಂಚಿಸಲ್ಪಟ್ಟಾಗ ಯಾವುದೇ ಆತಂಕ, ದುಃಖ, ಕೋಪ ಅಥವಾ ಕಿರಿಕಿರಿ ಇದ್ದರೆ, ಅವನು ಉತ್ಸಾಹದಿಂದ ಮುಕ್ತನಾಗಿರುವುದಿಲ್ಲ ಮತ್ತು ಅವನು ಹೊಂದಿರುವ ವಸ್ತುಗಳ ಬಳಕೆ ಸಾಧನಾ ಮನೋಭಾವಕ್ಕೆ ವಿರುದ್ಧವಾಗಿರುತ್ತದೆ. ಅವನು ಮನೋಭಾವದಲ್ಲಿ ಸ್ವತಂತ್ರನಾಗಿದ್ದರೂ, ಅವನು ತನ್ನ ಸ್ವಂತಕ್ಕೆ ವಸ್ತುಗಳನ್ನು ಬಳಕೆ ಮಾಡುವುದನ್ನು ಕಲಿಯದಿದ್ದರೆ ಸ್ವಾಧೀನಕ್ಕೆ ಯೋಗ್ಯನಾಗುವುದಿಲ್ಲ, ಆದರೆ ದೈವೀ ಇಚ್ಛೆಗಾಗಿ, ಒಂದು ಸಾಧನದಂತೆ, ಸರಿಯಾದ ಜ್ಞಾನ ಮತ್ತು ಕ್ರಿಯೆಯೊಂದಿಗೆ ತನ್ನ ಸ್ವಂತಕ್ಕಲ್ಲದೆ ಪರಮಾತ್ಮನಿಗಾಗಿ ಬದುಕುವ ಜೀವನಕ್ಕೆ ಯೋಗ್ಯ ಸಾಧನಕ್ಕಾಗಿ ಬಳಕೆ ಮಾಡುವುದನ್ನು ಕಲಿಯಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/759**

ಎಲ್ಲರೂ ಅಂತಿಮವಾಗಿ ಪಾಂಡಿಚೇರಿಗೆ ಬಂದು ಆಶ್ರಮವನ್ನು ಸೇರುತ್ತಾರೆ ಎಂದು ಭಾವಿಸುವುದು ತುಂಬಾ ತಪ್ಪು. ಅದು ಶ್ರೀಮಾತೆಯವರ ಉದ್ದೇಶವೂ ಅಲ್ಲ, ಅಥವಾ ಅದು ದೈಹಿಕವಾಗಿಯೂ ಸಾಧ್ಯವಿಲ್ಲ. ಮಾಡಬೇಕಾದ ಕೆಲಸವು ಪಾಂಡಿಚೇರಿಗೆ ಸೀಮಿತವಾಗಬಾರದು.

*

> ... ಮತ್ತೊಂದೆಡೆ, ಚಿಂತನೆಯ ಈ ಸ್ಪರ್ಶದ ತಿರುವು ಶ್ರೀಮಾತೆಯವರ ಬಳಿ ಭೌತಿಕವಾಗಿವಾಸಿಸುವ ಆಕಾಂಕ್ಷೆಯ ಸೂಚ್ಯಂಕವೆಂದು ಸಾಬೀತುಪಡಿಸಲು ಸಾಧ್ಯವಿಲ್ಲ. ಇದು ಕೆಲವು ಪರಿಸ್ಥಿತಿಗಳಲ್ಲಿ ಉತ್ತಮ ಫಲಿತಾಂಶಗಳನ್ನು ನೀಡುತ್ತದೆ – ಬೇರೆಲ್ಲಿಯೂ ಸಾಧಿಸಲಾಗದಂಥ ಫಲಿತಾಂಶಗಳನ್ನು?

ಅಗತ್ಯವಿರುವಲ್ಲಿ ಅದನ್ನು ಮಾಡಲಾಗುತ್ತದೆ – ಆದರೆ ಎಲ್ಲರೂ ಇಲ್ಲಿಗೆ ಬಂದು ಶಾಶ್ವತವಾಗಿ ಇರಬೇಕು ಅಂತೇನಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/815**

ನಾನು ಇಡೀ ಜಗತ್ತಿಗೆ "ಆಶ್ರಯ" ನೀಡಲು ಬಯಸುತ್ತೇನೆ, ಅಥವಾ ಕನಿಷ್ಠ ಉತ್ತಮ ಜೀವನ ಬಯಸುವ ಎಲ್ಲರಿಗೂ ಆಶ್ರಯ ನೀಡಲು ಬಯಸುತ್ತೇನೆ. ಆದರೆ ನಮ್ಮಲ್ಲಿ ಸ್ಥಳ ಮತ್ತು ಸಾಧನಗಳ ಕೊರತೆಯಿದೆ.

ಊರು ಬೆಳೆಯಲಿ, ಸಂಪನ್ಮೂಲಗಳು ಹೆಚ್ಚಲಿ, ನಮ್ಮ ಆತಿಥ್ಯವೂ ಹಿಗ್ಗಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/348 – ಶ್ರೀಮಾತೆ**

ಆಶ್ರಮದ ಎಲ್ಲಾ ಕೆಲಸಗಳು ಶ್ರೀಮಾತೆಯವರ ಕೆಲಸ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/408 – ಶ್ರೀ ಅರವಿಂದರು**

## ಆಶ್ರಮ; ಶ್ರೀಮಾತೆಯ ದೃಷ್ಟಿ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

**ತೀರ್ಪನ್ನು ನೀಡದಿರಿ**

ನಿಮ್ಮ ಕಣ್ಣಿಗೆ ಕಾಣುವದನ್ನಷ್ಟೇ ಸತ್ಯವೆಂದು ತಿಳಿದೋ ಅಥವಾ ಅವರಿವರಾಡುವ ನುಡಿಗಳನ್ನು ಕೇಳಿಯೋ ತೀರ್ಪನ್ನು ನೀಡದಿರಿ. ಏಕೆಂದರೆ ಈ ಎರಡೂ ನಿರ್ಧಾರಗಳು ನಿಮ್ಮನ್ನು ಸಂದಿಗ್ಧಕ್ಕೆ ಸಿಲುಕಿಸಬಹುದು. ಒಂದು ವೇಳೆ ನಿಮಗೆ ಇಲ್ಲಿರಲು ಸಾಧ್ಯವಾಗದಿದ್ದರೆ ಅಥವಾ ಇಲ್ಲಿಂದ ತೆರಳಬೇಕು ಎಂದೆನಿಸಿದರೆ, ಖಂಡಿತವಾಗಿಯೂ ನೀವು ತೆರಳಬಹುದು. ಕೇವಲ ಬಾಹ್ಯ ದೃಷ್ಟಿಕೋನದಿಂದ ನೋಡಲಾಗಿ ನಿಮ್ಮ ಈ ನಡೆಯು ಅರ್ಥಪೂರ್ಣವೆಂದೆನಿಸಲೂ ಬಹುದು.

ಹಾಗೆಂದ ಮಾತ್ರಕ್ಕೆ ಇಲ್ಲಿ ಉಳಿದುಕೊಳ್ಳುವುದು ಅಷ್ಟು ಸುಲಭವೂ ಅಲ್ಲ. ಆಶ್ರಮದಲ್ಲಿ ಹೊರಗಿನಂತೆ ಶಿಸ್ತುಬದ್ಧವಾದ ಮತ್ತು ಕೇವಲ ಕಣ್ನೋಟಕ್ಕೆ ಮಾತ್ರ ಸೀಮಿತವೆನಿಸುವಂತಹ ಪರೀಕ್ಷೆಗಳಿಲ್ಲ. ಆದರೆ, ಇಲ್ಲಿ ನಿಮ್ಮ ಆಂತರ್ಯವನ್ನು ನಿರಂತರವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ ಪರೀಕ್ಷೆಯು ಸ್ವಲ್ಪ ಕಠಿಣವೂ

ಆಗಿರಬಹುದು. ಹಾಗಾಗಿ ಇಲ್ಲಿ ಉಳಿದುಕೊಳ್ಳಬೇಕೆಂದುಕೊಂಡರೆ ನಿಮ್ಮಲ್ಲಿರುವ ಎಲ್ಲಾ ಅಹಮಿಕೆಗಳನ್ನು ಮೀರಿ ಒಂದು ಶುದ್ಧ ಅಭೀಪ್ಸೆಯನ್ನು ತೊಟ್ಟು ನಿಲ್ಲಬೇಕಾಗುತ್ತದೆ.

ಆಶ್ರಮವಾಸಿಗಳಿಗೆ ಬೇಕಾಗಿರುವ ಪೂರ್ಣ ರೂಪದ ಸಮರ್ಪಣಾ ಭಾವನೆಯನ್ನು ಇಲ್ಲಿ ಯಾರೂ ನಿಮ್ಮ ಮೇಲೆ ಬಲವಂತವಾಗಿ ಹೇರುವದಿಲ್ಲ. ಆದರೆ, ಇಲ್ಲಿದ್ದುಕೊಂಡು ಆಧ್ಯಾತ್ಮಿಕ ಜೀವನವನ್ನು ಮುಂದುವರಿಸಬೇಕೆಂಬ ಅಭೀಪ್ಸೆಯಿರುವವರಿಗೆ ಈ ಸಮರ್ಪಣಾ ಮನೋಭಾವನೆಯ ಅವಶ್ಯಕತೆಯಿದೆ. ಇಲ್ಲಿ ನಡೆಯುವ ಸಂಗತಿಗಳು ನಿಮ್ಮಲ್ಲಿರುವ ಸಮರ್ಪಣಾ ಭಾವನೆಯು ಎಷ್ಟು ಬಲಿಷ್ಠವಾಗಿದೆ ಎಂಬುದನ್ನು ನಿರಂತರವಾಗಿ ಪರೀಕ್ಷಿಸುತ್ತಲೇ ಇರುತ್ತವೆ. ಅದಾಗ್ಯೂ, ಯಾರು ಶುದ್ಧ ಅಭೀಪ್ಸೆಯನ್ನು ಹೊಂದಿರುತ್ತಾರೋ ಅಂತಹವರಿಗೆ ಆ ದಿವ್ಯತೆಯ ಕೃಪೆ ಮತ್ತು ಅದರ ಅವ್ಯಕ್ತ ಹಸ್ತದ ಸಹಾಯವು ಲಭಿಸುತ್ತದೆ. ಅವುಗಳನ್ನು ಶ್ರದ್ಧೆ ಮತ್ತು ಪೂರ್ಣ ವಿಶ್ವಾಸದೊಂದಿಗೆ ಸ್ವೀಕರಿಸಿದಾಗ ಅವುಗಳಲ್ಲಿರುವ ಅನಂತ ಶಕ್ತಿಯು ನಮ್ಮೊಳಗೆ ಇಳಿದು ಬರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/111**

## ಯೋಗಿಕ ಜೀವನಕ್ಕೆ ಪ್ರವೇಶ

ಜಡ ಜೀವನದಿಂದ ಜುಗುಪ್ಸೆಗೊಂಡೋ ಅಥವಾ ಸುತ್ತಲಿನ ಜನರ ಮೇಲಿನ ತಾತ್ಸಾರ ಭಾವನೆಯಿಂದಾಗಿಯೋ ಯೋಗಿಕ ಜೀವನಕ್ಕೆ ಬರಬಾರದು

ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಲಾಗದೆ, ಅವುಗಳಿಂದ ತಪ್ಪಿಸಿಕೊಳ್ಳಲೆಂದು ಯೋಗಿಕ ಜೀವನಕ್ಕೆ ಬರಬಾರದು.

ಆ ದಿವ್ಯತೆಯ ಪ್ರೇಮ ಮತ್ತು ದಿವ್ಯತೆಯಡಿಯ ರಕ್ಷಣೆಯಲ್ಲಿ ಮಧುರತೆಯನ್ನು ಅನುಭವಿಸಲೆಂದು ಯೋಗಿಕ ಜೀವನಕ್ಕೆ ಬರಬೇಡಿ. ಏಕೆಂದರೆ, ಶುದ್ಧ ಮನೋಭಾವವನ್ನು ಹೊಂದಿದ ಮನುಜರು ಎಲ್ಲಿದ್ದರೂ ಆ ದಿವ್ಯತೆಯ ಪ್ರೇಮ–ರಕ್ಷಣೆಗಳನ್ನು ಅನುಭವಿಸಬಹುದು.

ಆದರೆ, ಈ ಎಲ್ಲ ಮನೋಭಾವನೆಗಳನ್ನು ಮೀರಿದ ಜನಾಂಗವೊಂದಿದೆ. ಅವರು ತಮ್ಮ ವೈಯಕ್ತಿಕ ಅಪೇಕ್ಷೆಗಳಿಗಲ್ಲದೇ, ಆ ದಿವ್ಯತೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಮತ್ತು ಅದಕ್ಕೆ ಪ್ರತಿಯಾಗಿ ಯಾವುದೇ

ಫಲಾನುಭವವನ್ನು ಬಯಸದೇ ಆ ದಿವ್ಯತೆಯ ಸೇವೆಯಲ್ಲಿಯೇ ಆನಂದವನ್ನು ಹೊಂದಲೆಂದು ಬಯಸಿ ಅದರ ಒಂದು ಸ್ಪರ್ಶದ ಅವಕಾಶಕ್ಕಾಗಿ ಜೀವನವಿಡೀ ಕಾಯಲು ಸಿದ್ಧವಿರುತ್ತಾರೆ, ಯಾರಲ್ಲಿ ಇಂತಹ ಶುದ್ಧ ಅಭೀಪ್ಸೆಯೆಂಬುದು ಜಾಗೃತವಾಗಿರುತ್ತದೆಯೋ ಅಂಥವರಿಗೆ ಯೋಗಿಕ ಜೀವನವನ್ನು ಪ್ರವೇಶಿಸಲಿಕ್ಕಿರುವ ದ್ವಾರಗಳು ವಿಶಾಲವಾಗಿ ತೆರೆದುಕೊಂಡಿರುತ್ತವೆ.

ಈ ಜಗತ್ತಿನ ಎಲ್ಲೆಡೆ ಇರುವ ನನ್ನ ಮಕ್ಕಳಿಗೆ ನೀಡುವ ಆಶೀರ್ವಚನವನ್ನೇ ನಿಮಗೂ ಸಹ ನೀಡುತ್ತಿದ್ದೇನೆ: "ಮೊದಲು ನಿಮ್ಮನ್ನು ನೀವು ಸಿದ್ಧಗೊಳಿಸಿಕೊಳ್ಳಿ, ಆಗ ನನ್ನ ಸಹಾಯವು ಸದಾ ನಿಮ್ಮೊಂದಿಗಿರುತ್ತದೆ."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/111**

## ಆಧ್ಯಾತ್ಮಿಕ ಜೀವನವನ್ನು ನಡೆಸಲು ಪೂರೈಸಬೇಕಿರುವ ಷರತ್ತುಗಳು

ಆಧ್ಯಾತ್ಮಿಕ ಜೀವನವನ್ನು ಆರಂಭಿಸುವ ಉದ್ದೇಶಿವಿರುವವರು ಮೊದಲು ಕೆಲವು ಷರತ್ತುಗಳಿಗೆ ನಿಮ್ಮನ್ನು ನೀವು ಬದ್ಧಗೊಳಿಸಿಕೊಳ್ಳಬೇಕು. ಅವುಗಳೆಂದರೆ: ನಿಮ್ಮಲ್ಲಿರುವ ಎಲ್ಲಾ ಕೀಳು ಭಾವನೆಗಳನ್ನು, ಲಾಲಸೆ, ಕಾಮನೆ ಮುಂತಾದ ಆಕರ್ಷಣಾ ಭಾವನೆಗಳನ್ನು ಮತ್ತು ನಿಮ್ಮೊಡನೆ ಇರುವ ಎಲ್ಲಾ ಸಂಬಂಧಗಳನ್ನು ಮೀರಿ ಬೆಳೆಯಬೇಕು. ಏಕೆಂದರೆ, ಇವುಗಳು ಆಧ್ಯಾತ್ಮಿಕ ಜೀವನಕ್ಕೆ ಅಡಚಣೆಯನ್ನುಂಟು ಮಾಡುತ್ತವೆ.

ಆಧ್ಯಾತ್ಮಿಕ ಜೀವನವನ್ನು ಆರಂಭಿಸಿದ ಸಾಧಕರು ಸಂಪೂರ್ಣವಾಗಿ ತಮ್ಮನ್ನು ತಾವು ಆ ದಿವ್ಯತೆಯಲ್ಲಿ ಸಮರ್ಪಿಸಿಕೊಂಡಿರಬೇಕು. ಅವರು ಮಾಡುವ ಎಲ್ಲ ಕಾರ್ಯಗಳು, ಎಲ್ಲ ಅಭೀಪ್ಸೆಗಳು ಸಂಪೂರ್ಣ ಮನೋಭಾವನೆಯಿಂದ ನೇರವಾಗಿ ಆ ದಿವ್ಯತೆಯಲ್ಲೇ ನಿರ್ದೇಶಿತವಾಗಿರಬೇಕು.

ಈ ಸಮರ್ಪಣಾ ಭಾವನೆಯು ನಿಮ್ಮನ್ನು ಒಂದೇ ದಿನದಲ್ಲಿ ಆವರಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ನನಗೂ ತಿಳಿದಿದೆ. ಆದರೆ, ನಿರಂತರವಾದ ಅಭೀಪ್ಸೆಯಿಂದ ಆ ದಿವ್ಯತೆಯು ನೀಡಿದ ಎಲ್ಲಾ ಷರತ್ತುಗಳನ್ನು ಪೂರೈಸುತ್ತ ನೀವದನ್ನು ಸಾಧಿಸಿಕೊಳ್ಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/112**

## ನಿಜವಾದ ಶಿಷ್ಯನೆಂದರೆ ಯಾರು

ಜಡ ಭೌತಿಕ ಸ್ಥಿತಿಯನ್ನೂ ಮೀರಿ ಒಂದು ಆದರ್ಶಯುತವಾದ ವಿಧೇಯತೆಯನ್ನು ಬೆಳೆಸಿಕೊಂಡು, ತನ್ನನ್ನು ಸಂಪೂರ್ಣವಾಗಿ ತನಗಾಗಿ ಮೀಸಲಿರುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವವರೇ ಓರ್ವ ಆದರ್ಶಯುತವಾದ ಶಿಷ್ಯರಾಗಿರುತ್ತಾರೆ.

*

## ಆಶ್ರಮಕ್ಕೆ ಪ್ರವೇಶಿಸಲು ಅಗತ್ಯವಾಗಿರುವ ಆದ್ಯ ಷರತ್ತು

ಆಶ್ರಮವನ್ನು ಪ್ರವೇಶಿಲು ಬಯಸುವ ಅಭ್ಯರ್ಥಿಯು ಯಾವುದೇ ಫಲಾಪೇಕ್ಷೆಯನ್ನು ಬಯಸದೇ ತನ್ನ ಜೀವನವನ್ನು ದಿವ್ಯತೆಯ ಸೇವೆಯಲ್ಲಿ ತೊಡಗಿಸಿಕೊಳ್ಳಲು ದೃಢ ಸಂಕಲ್ಪವನ್ನು ಮಾಡಿರಬೇಕು

*

ಆಶ್ರಮವಾಸಿಯಾಗಿರುವವರು ತಮ್ಮ ಬದುಕನ್ನು ಆ ದಿವ್ಯತೆಯ ಸೇವೆ ಮತ್ತು ದರ್ಶನಕ್ಕಾಗಿ ಮೀಸಲಿಟ್ಟಿರಬೇಕು.

ಈ ಸಮರ್ಪಣಾ ಭಾವನೆಯನ್ನು ಬೆಳೆಸಿಕೊಳ್ಳಲು ನಾಲ್ಕು ಸದ್ಗುಣಗಳನ್ನು ಬೆಲೆಸಿಕೊಳ್ಳಬೇಕು. ಈ ಚತುರ್ಗುಣಗಳು ಸಾಧನೆಯ ಮಾರ್ಗದಲ್ಲಿ ಅಡಚಣೆಯನ್ನುಂಟು ಮಾಡುವ ವೈರುಧ್ಯಗಳನ್ನು ತೊಡೆದುಹಾಕಿ ಸಾಧನೆಯಲ್ಲಿ ಪ್ರಗತಿಯನ್ನು ತರುತ್ತವೆ.

ಆ ಚತುರ್ಗುಣಗಳು ಕ್ರಮವಾಗಿ ಇಂತಿವೆ: ಪ್ರಾಮಾಣಿಕತೆ, ನಿಷ್ಠೆ, ವಿನಮ್ರತೆ ಮತ್ತು ಕೃತಜ್ಞತೆ.

*

*“ಓರ್ವ ವ್ಯಕ್ತಿಯನ್ನು ಅವನು ನಿಜವಾದ ಆಶ್ರಮವಾಸಿ ಎಂದು ಹೇಳೀಕೊಳ್ಳಬೇಕಾದರೆ ಅವನಲ್ಲಿರಬೇಕಾದ ಗುಣಗಳು ಯಾವುವು?”*

ಆಶ್ರಮವಾಸಿಯಲ್ಲಿ ಪ್ರಾಮಾಣಿಕತೆ, ಧೈರ್ಯ, ಶಿಸ್ತು, ಸಹಾನುಭೂತಿ, ದಿವ್ಯತೆಯ ಮೇಲಿನ ನಂಬಿಕೆ ಮತ್ತು ಆ ದಿವ್ಯತೆಯ ಕೃಪೆಯಲ್ಲಿ ಅಚಲವಾದ ನಂಬುಗೆ ಹಾಗೂ ಇವುಗಳ ಜೊತೆಗೆ ತೀವ್ರತರವಾದ ಅಭೀಪ್ಸೆ ಮತ್ತು ಅನಂತ ತಾಳ್ಮೆಯ ಅವಶ್ಯಕತೆಯಿದೆ.

*

ಆಶ್ರಮವು ಮರ್ತ್ಯ ಜೀವನವನ್ನು ದಿವ್ಯ ಜೀವನವನ್ನಾಗಿ ಪರಿವರ್ತಿಸಲು ಶಕ್ಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/113**

*"ಆಶ್ರಮದಲ್ಲಿ ಶಿಷ್ಯನಾಗಿರಬೇಕಾದರೆ ಅವರು ಪೂರೈಸಬೇಕಿರುವ ಎರಡು ಪ್ರಮುಖವಾದ ಷರತ್ತುಗಳು ಯಾವುವು?"*

1. ಅಂತರಾತ್ಮದ ಅಗತ್ಯಗಳಿಗೆ ಮಾತ್ರ ಪ್ರಥಮಾದ್ಯತೆಯನ್ನು ನೀಡುವುದು. ಮತ್ತು ಅನ್ನ–ಪ್ರಾಣ–ಮನಗಳಿಗೆ ಅವಶ್ಯವಿರುವಷ್ಟು ಮಾತ್ರ ಅಗತ್ಯಗಳನ್ನು ಪೂರೈಸಿಕೊಂಡು, ಅದರಿಂದ ಅಂತರಾತ್ಮದ ಅಗತ್ಯಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು.

2. "ಪ್ರತಿಯೋರ್ವರ ಅಂತರಾತ್ಮವು ಬಯಸುತ್ತಿರುವ ಅಗತ್ಯಗಳನ್ನು ಅರಿಯುವ ಸಾಮರ್ಥ್ಯವನ್ನು ನಾನು ಹೊಂದಿದ್ದೇನೆ ಹಾಗಾಗಿ ಈ ವಿಷಯದಲ್ಲಿ ಸ್ವತಃ ನಿರ್ಧಾರವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ನಾನು ಪಡೆದಿದ್ದೇನೆ" ಎಂಬ ದೃಢ ವಿಶ್ವಾಸವನ್ನು ಬೆಳೆಸಿಕೊಳ್ಳುವುದು.

ಪ್ರತಿಯೊಂದು ಕ್ರಿಯೆ ಮತ್ತು ವಿಚಾರಗಳಿಗೆ ಪ್ರತಿಫಲವಾಗಿ ಉತ್ಸರ್ಜಿತವಾಗುವ ಫಲಿತಾಂಶಗಳನ್ನು ಅದು ಘಟಿಸುವದಕ್ಕಿಂತ ಪೂರ್ವದಲ್ಲಿಯೇ ಮುನ್ಸೂಚನೆ ನೀಡುವ ನಂಬಿಕೆಯನ್ನು ಬೆಳೆಸಿಕೊಳ್ಳಬೇಕು. ಒಂದು ವೇಳೆ ಈ ನಂಬಿಕೆಯನ್ನು ಬೆಳೆಸಿಕೊಳ್ಳದೇ ಹೋದ ಪಕ್ಷದಲ್ಲಿ ಆಶ್ರಮದ ಹಲವು ಪ್ರಯೋಜನಗಳಿಂದ ಅವರು ವಂಚಿತರಾಗುತ್ತಾರೆ.

*

**ಪ್ರಜ್ಞಾಪರಿವರ್ತನೆಯ ಅಗತ್ಯವಿದೆ**

ಜನರು ತಮ್ಮ ಮರ್ತ್ಯ ಪ್ರಜ್ಞೆಯನ್ನು ಪರಿವರ್ತಿಸಿಕೊಳ್ಳಲೆಂದು ಆಶ್ರಮಕ್ಕೆ ಬರುತ್ತಾರೆ. ಅವರೆಲ್ಲರೂ ತಮ್ಮ ಈ ಗುರಿಯನ್ನು ನಿಷ್ಠೆಯಿಂದ ಪೂರೈಸಿಕೊಳ್ಳದ ಹೊರತು ಅವರು ಯಾವುದೇ ಸಾಧನೆಯನ್ನು ಮಾಡಲು ಸಾಧ್ಯವಿಲ್ಲ.

ಆಶ್ರಮವಾಸಿಯಾಗಿ ಬದುಕಲು ಬಯಸುವವರು ತಮ್ಮ ಜೀವನಶೈಲಿಗಿಂತ ತಮ್ಮ ಬದುಕಿನ ವಿಧಾನವನ್ನು ಪರಿವರ್ತಿಸಿಕೊಳ್ಳುವ ಅವಶ್ಯಕತೆಯಿದೆ.

ನಾವು ಇಲ್ಲಿ ಇನ್ನಷ್ಟು ಆಳವಾದ, ಪರಿಪೂರ್ಣವಾದ ಋತ ಪ್ರಜ್ಞೆಯ ಕಡೆಗೆ ಆರೋಹಿಸಲು ಪ್ರಯತ್ನಿಸುತ್ತಿದ್ದೇವೆ. ಏಕೆಂದರೆ, ಆ ಋತ ಪ್ರಜ್ಞೆಯನ್ನು ಜಾಗೃತಪಡಿಸುವುದೇ ದಿವ್ಯ ಜೀವನದ ಏಕೈಕ ಉದ್ದೇಶವಾಗಿದೆ.

*

**ಸಾಮಾಜಿಕ ಬದುಕು**

ಸಾಮಾಜಿಕ ಬದುಕಿಗೆ ಸಂಬಂಧಿಸಿದಂತೆ ಎಲ್ಲಾ ಸಂದರ್ಭದಲ್ಲೂ ಒಂದೇ ರೀತಿಯಾದ ಉತ್ತರವನ್ನು ನೀಡಲು ಸಾಧ್ಯವಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗೆ, ಸಂದರ್ಭದಿಂದ ಸಂದರ್ಭಕ್ಕೆ ತಕ್ಕಂತೆ ಭಿನ್ನವಾಗಿರುತ್ತದೆ. ಆದರೆ, ಈ ಸಮಾಜದಲ್ಲಿ ಬದುಕುವ ಪ್ರತಿಯೋರ್ವರೂ ಈ ಸಮಾಜವು ಹಾಕಿಕೊಟ್ಟ ನಿಯಮಗಳನ್ನು ಸಾಧ್ಯವಾದಷ್ಟು ಪಾಲಿಸಲೇಬೇಕು. ಒಂದು ವೇಳೆ ಅವರಲ್ಲಿ ದಿವ್ಯತೆಯ ಪ್ರೇರಣೆಯಾಗಿದ್ದ ಪಕ್ಷದಲ್ಲಿ ಮಾತ್ರ ಅವರು ಸಮಾಜದ ನಿಯಮಾವಳಿಗಳಿಂದ ಪ್ರತ್ಯೇಕವಾಗಿ ಬದುಕಬಹುದು. ಏಕೆಂದರೆ, ಮರ್ತ್ಯ ಸಮಾಜದ ನಿಯಮಗಳಿಗಿಂಗಲೂ ದಿವ್ಯತೆಯಿಂದ ಪ್ರೇರಿತರಾದ ಸಾಧಕರು ಮಾತ್ರವೇ, "ನಾನು ನನ್ನ ಸ್ವಂತ ನಿಯಮಗಳನ್ನು ಪರಿಪಾಲಿಸುತ್ತೇನೆಯೇ ಹೊರತು ಬೇರೊಬ್ಬರು ಹಾಕಿಕೊಟ್ಟ ನಿಯಮಗಳನ್ನಲ್ಲ" ಎಂದು ಘೋಷಿಸಲು ಸಮರ್ಥರಾಗಿರುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/117**

**ಒಂದು ಘೋಷಣೆ**

ಶ್ರೀ ಅರವಿಂದರು ರಾಜಕೀಯದಿಂದ ಹಿಂದೆ ಸರಿದರು; ಮತ್ತು ಅವರ ಆಶ್ರಮದಲ್ಲಿ, ಪ್ರತಿಯೊಬ್ಬರೂ ಎಲ್ಲಾ ರೀತಿಯ ರಾಜಕೀಯದಿಂದ ದೂರವಿರಬೇಕು ಎಂಬ ಅತ್ಯಂತ ಪ್ರಮುಖವಾದ ನಿಯಮವನ್ನು ಜಾರಿಗೆ ತಂದರು. ಇದರರ್ಥ ಶ್ರೀ ಅರವಿಂದರು ಜಗತ್ತಿನಲ್ಲಿ ನಡೆಯುವ ಘಟನೆಗಳ ಬಗ್ಗೆ ಕಾಳಜಿ ವಹಿಸಲಿಲ್ಲ ಎಂದಲ್ಲ, ಬದಲಿಗೆ ಪ್ರಸ್ತುತದಲ್ಲಿರುವ ರಾಜಕೀಯವು ಸುಳ್ಳು, ವಂಚನೆ, ಅನ್ಯಾಯ, ಅಧಿಕಾರದ ದುರುಪಯೋಗ ಮತ್ತು ಹಿಂಸೆಯಿಂದ ಸಂಪೂರ್ಣವಾಗಿ ಆವೃತವಾದ ಕೀಳು ಹಾಗೂ ಕರಾಳ ವಿಚಾರಗಳಿಂದ ತುಂಬಿಹೋಗಿದೆ ಎಂಬ ಕಾರಣಕ್ಕಾಗಿ ಮತ್ತು ರಾಜಕೀಯದಲ್ಲಿ ಯಶಸ್ವಿಯಾಗಲು ವ್ಯಕ್ತಿಯು ತನ್ನಲ್ಲಿ ಕಪಟತನ, ದ್ವಂದ್ವ

ನೀತಿ ಮತ್ತು ನಿರ್ದಯಿಯಾದ ಮಹತ್ವಾಕಾಂಕ್ಷೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ ಎಂಬ ಕಾರಣಕ್ಕಾಗಿ ಅವರು ರಾಜಕೀಯದಿಂದ ಸಾಧ್ಯವಾದಷ್ಟು ದೂರವೇ ಉಳಿದರು.

ನಮ್ಮ ಯೋಗದಲ್ಲಿರುವ ಅಗತ್ಯವಾದ ಅಂಶಗಳೆಂದರೆ: ಪ್ರಾಮಾಣಿಕತೆ, ನಿಷ್ಠೆ, ನಿಸ್ವಾರ್ಥ ಮನೋಭಾವನೆ, ಉದಾತ್ತ ಗುಣ ಮತ್ತು ನೇರ ನಡೆ–ನುಡಿ ಮತ್ತು ನಾವು ಮಾಡಬೇಕಾದ ಕಾರ್ಯದಲ್ಲಿ ನಮ್ಮನ್ನು ನಾವು ಸಂಪೂರ್ಣವಾಗಿ ಸಮರ್ಪಿಸಿ–ಕೊಳ್ಳುವುದು. ಈ ಮೂಲಭೂತ ಸದ್ಗುಣಗಳನ್ನು ಅಭ್ಯಾಸ ಮಾಡದೇ ಇರುವವರು ಶ್ರೀ ಅರವಿಂದರ ಶಿಷ್ಯತ್ವವನ್ನು ಹೊಂದಲು ಮತ್ತು ಆಶ್ರಮವಾಸಿಯಾಗಿರಲು ಯೋಗ್ಯರಲ್ಲ. ಅದಕ್ಕಾಗಿಯೇ ವಿಕೃತ ಮತ್ತು ವಿಕ್ಷಿಪ್ತ ಉದ್ದೇಶವುಳ್ಳ ಮನಸ್ಸುಗಳು ಆಶ್ರಮದ ಮೇಲೆ ಮಾಡಿದ ಮೂರ್ಖತನ ಮತ್ತು ಆಧಾರರಹಿತವಾದ ಆರೋಪಗಳಿಗೆ ಉತ್ತರಿಸಲು ನಾನು ಸಾರಾಸಗಟಾಗಿ ನಿರಾಕರಿಸುತ್ತೇನೆ.

ಶ್ರೀ ಅರವಿಂದರು ತಮ್ಮ ಮಾತೃಭೂಮಿಯನ್ನು ಯಾವಾಗಲೂ ಅಪಾರವಾಗಿ ಪ್ರೀತಿಸುತ್ತಿದ್ದರು. ಆದರೆ ಅವರು ಮಾತೃಭೂಮಿಯನ್ನು ಜಗತ್ತಿನಲ್ಲಿಯೇ ಸರ್ವಶ್ರೇಷ್ಠವೂ, ಉದಾತ್ತವೂ, ಪರಮ ಪವಿತವ್ರೂ ಆಗಿಸಬೇಕೆಂದು ಬಯಸಿದ್ದರು. ಮತ್ತು ಈ ನೆಲವನ್ನು ಅಂಧತೆಯಿಂದ ಕೂಡಿದ ಸ್ವಾರ್ಥ ಮತ್ತು ಅಜ್ಞಾನಯುತವಾದ ಪೂರ್ವಾಗ್ರಹಗಳಿಂದ ಆವೃತ್ತವಾದ ಅಪ್ರಕೇತಕ್ಕೆ ಇಳಿಯಲು ಬಿಡಲಿಲ್ಲ. ಅದಕ್ಕಾಗಿಯೇ, ಅವರು ತಮ್ಮ ಇಚ್ಛೆಗೆ ಸಂಪೂರ್ಣವಾಗಿ ವಿರುದ್ಧರಾಗಿ, ಅಜ್ಞಾನ, ಮೂರ್ಖತನ, ಈರ್ಷೆ ಅಥವಾ ಕೆಟ್ಟ ಉದ್ದೇಶದಿಂದ ಅದನ್ನು ಮಣ್ಣುಗೂಡಿಸಲು ಮತ್ತು ಕೆಳಗೆ ಎಳೆಯಲು ಯತ್ನಿಸುತ್ತಿರುವ ಅಪ್ರಜ್ಞಾ ಶಕ್ತಿಗಳ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಬದಲಿಗೆ "ನಾವು ಸತ್ಯ, ಪ್ರಗತಿ ಮತ್ತು ಮನುಕುಲದ ಪರಿವರ್ತನೆಯ ಧ್ವಜವನ್ನು ಎತ್ತಿ ಹಿಡಿಯುತ್ತೇವೆ. ಅಂತರಾತ್ಮದ ನುಡಿಯಿಂದ ಬದುಕುತ್ತಿರುವ ನಾವೆಲ್ಲರೂ ಅದನ್ನು ಸಮರ್ಥವಾಗಿ ಸಾಧಿಸುತ್ತೇವೆ" ಎಂಬ ನಡೆಯನ್ನು ಮೈಗೂಡಿಸಿಕೊಳ್ಳಬೇಕು ಎಂಬ ಕರೆಯನ್ನು ನೀಡಿದರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/123**

## ಆಶ್ರಮಕ್ಕೆ ಆಗಮಿಸುವುದು ಮತ್ತು ನೆಲೆಸುವುದು

ಜನರು ಇಲ್ಲಿಗೆ ಬಂದು ನೆಲೆಸುವುದು ಕೇವಲ ಸುಖ–ಸೌಕರ್ಯಗಳನ್ನು ಹುಡುಕುವುದಕ್ಕಾಗಿ ಅಲ್ಲ. ಅದೃಷ್ಟವಿದ್ದರೆ ಇವುಗಳನ್ನು ಬೇರೆ ಎಲ್ಲಾದರೂ

ಪಡೆಯಬಹುದು. ಆದರೆ ಇಲ್ಲಿ ಪಡೆಯಬಹುದಾದ ಅಂಶವನ್ನು ಈ ವಿಶ್ವದ ಬೇರೆ ಎಲ್ಲೂ ಪಡೆಯಲು ಸಾಧ್ಯವಿಲ್ಲ. ಅವುಗಳೇ: ದಿವ್ಯ ಪ್ರೇಮ, ದಿವ್ಯ ಕೃಪೆ ಮತ್ತು ದಿವ್ಯ ರಕ್ಷೆ. ಬಾಹ್ಯ ಜಗತ್ತಿನಲ್ಲಿ ಜನರು ಇವುಗಳನ್ನು ಕಳೆದುಕೊಂಡಾಗ ದುಃಖಿತರಾಗುತ್ತಾರೆ. ವಾಸ್ತವವಾಗಿ ಯಾರಾದರೂ ಅಸಂತುಷ್ಟರಾಗಿದ್ದಾರೆ ಮತ್ತು ಅತೃಪ್ತರಾಗಿದ್ದಾರೆ ಎಂದರೆ, ಅವರು ದಿವ್ಯತೆಯು ನೀಡುತ್ತಿರುವ ಪ್ರೇಮ–ಕೃಪೆಯನ್ನು ಬಿಟ್ಟು ಕೇವಲ ಲೌಕಿಕ ಬದುಕಿನಲ್ಲಿ ಮಾತ್ರ ತೃಪ್ತಿಯನ್ನು ಪಡೆಯುತ್ತಿದ್ದಾರೆ ಎಂದರ್ಥ.

*

ನೀವು ಇಲ್ಲಿ ಸಂತೋಷವಾಗಿರಲು ಬಯಸಿದರೆ, ಆತ್ಮ–ಪರಿಪೂರ್ಣತೆಯ ಯೋಗವನ್ನು ಮಾಡುವ ಸಂಕಲ್ಪದೊಂದಿಗೆ ಬಂದಿರಬೇಕು; ಏಕೆಂದರೆ ನೀವು ಈ ಉದ್ದೇಶದಿಂದ ಇಲ್ಲಿಗೆ ಆಗಮಿಸದೇ ಇದ್ದರೆ, ನಿಮ್ಮ ದೈನಂದಿನ ಅಭ್ಯಾಸಗಳಿಗೆ ಮತ್ತು ಸಾಮಾನ್ಯ ಜೀವನದ ತತ್ವಗಳಿಗೆ ವಿರುದ್ಧವಾಗಿರುವ ಇಲ್ಲಿಯ ಸಾತ್ವಿಕ ವಿಷಯಗಳಿಂದ ನೀವು ಪ್ರತಿ ಕ್ಷಣವೂ ಆಘಾತಕ್ಕೊಳಗಾಗುತ್ತೀರಿ, ಮತ್ತು ಈ ಶುದ್ಧ ಪರಿಸರದಲ್ಲಿ ಇರಲು ನಿಮಗೆ ಸಾಧ್ಯವಾಗುವುದಿಲ್ಲ. ಈ ಸಾತ್ವಿಕ ವಿಷಯಗಳು ಇಲ್ಲಿನ ಕಾರ್ಯ ಮತ್ತು ವ್ಯವಸ್ಥೆಗೆ ಅಗತ್ಯವಾಗಿವೆ ಹಾಗೂ ಇವುಗಳನ್ನು ಬದಲಾಯಿಸಲು ಸಾಧ್ಯವಾಗದೇ ಇರುವದರಿಂದ ನಿಮಗೆ ಇಲ್ಲಿನ ವಾತಾವರಣವು ಹಿಡಿಸುವದಿಲ್ಲ.

*

ನಾವು ನಮ್ಮ ಜೀವನವನ್ನು ಸುಲಭ ಮತ್ತು ಆರಾಮದಾಯಕವಾಗಿರಿಸಿಕೊಳ್ಳಲು ಇಲ್ಲಿ ವಾಸಿಸುತ್ತಿಲ್ಲ; ಬದಲಿಗೆ ದಿವ್ಯತೆಯನ್ನು ಶೋಧಿಸಲು, ಆ ದಿವ್ಯತೆಯಲ್ಲಿ ಒಂದಾಗಲು ಮತ್ತು ಆ ದಿವ್ಯತೆಯನ್ನು ಅವತರಣಗೊಳಿಸಲು ಇಲ್ಲಿ ಪ್ರಯತ್ನಿಸುತ್ತಿದ್ದೇವೆ.

ನಾವು ಅನುಭವಿಸುತ್ತಿರುವ ಜೀವನವು ಆ ದಿವ್ಯತೆಯ ಹಸ್ತಕ್ಷೇಪವಾಗಿದೆ. ಹಾಗಾಗಿ ನಮ್ಮ ಜೀವನದ ರೂಪಿಕೆಯ ಕುರಿತು ಯಾವ ಯೋಚನೆಯನ್ನೂ ನಾವು ಮಾಡುವದಿಲ್ಲ.

ಈ ಪ್ರಪಂಚದ ಒಳಿತಿಗೆ ಮತ್ತು ನಮ್ಮ ಪ್ರಗತಿಗೆ ಯಾವುದು ಒಳ್ಳೆಯದು ಎಂಬುದು ನಮಗಿಂತ ದಿವ್ಯತೆಗೆ ಚೆನ್ನಾಗಿ ತಿಳಿದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/128**

ವ್ಯಕ್ತಿಯ ಪ್ರಗತಿಗೆ ಕಾರಣವಾಗುವ ಅನುಭವಗಳು ಆಯಾ ಸಂದರ್ಭಗಳನ್ನು ಅಥವಾ ಅವರು ವಾಸಿಸುವ ವಾತಾವರಣದ ಮೇಲೆ ಅವಲಂಬಿತವಾಗಿಲ್ಲ, ಬದಲಿಗೆ ಅವರ ಆಂತರಿಕ ಮನೋಭಾವ ಮತ್ತು ಇಚ್ಛೆಯನ್ನು ಅವಲಂಬಿಸಿವೆ.

ನಿಮ್ಮ ಆತ್ಮವನ್ನು ಕಂಡುಕೊಳ್ಳಲು, ಅದನ್ನು ತಿಳಿಯಲು ಮತ್ತು ಅದಕ್ಕೆ ವಿಧೇಯರಾಗಿರಲು ನೀವು ಬಯಸಿದರೆ, ಆಶ್ರಮವಾಸಿಯಾಗಿ ಇಲ್ಲಿಯೇ ಇರಿ.

ಇದು ನಿಮ್ಮ ಜೀವನದ ಗುರಿಯಾಗಿಲ್ಲದೇ ಇದ್ದರೆ ಮತ್ತು ನೀವು ಇತರ ಸಾಮಾನ್ಯ ಜನರಂತೆ ಬದುಕಲು ಬಯಸಿದ್ದರೆ, ನೀವು ಈಗಲೇ ನಿಮ್ಮ ಕುಟುಂಬಕ್ಕೆ ಹಿಂತಿರುಗಬಹುದು.

*

**ಜೀವನದ ಕಿರುಚಿತ್ರ**

ಓರ್ವ ಸಾಧಕ ಹೇಗಿರಬೇಕು ಎಂಬ ನಿಮ್ಮ ಭಾವನೆಗಳನ್ನು ನಾನು ಮೆಚ್ಚುತ್ತೇನೆ ಮತ್ತು ಆ ದೃಷ್ಟಿಕೋನದಿಂದ ನೀವು ಹೇಳುವುದು ಸಂಪೂರ್ಣ ಸತ್ಯವಾಗಿದೆ ಎಂಬುದನ್ನೂ ನಾನು ಬಲ್ಲೆ. ಆದರೆ ಆಶ್ರಮವು ಕೇವಲ ಸಾಧಕರಿಂದ ಮಾತ್ರ ಕೂಡಿದ್ದಲ್ಲ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಈ ಆಶ್ರಮವು ಜೀವನದ ಒಂದು ಕಿರುಚಿತ್ರವಾಗಿದೆ, ಯೋಗ ಜೀವನವನ್ನು ನಡೆಸುತ್ತಿರುವ ಕೆಲವಾರು ಜನ. ಮತ್ತು ನನ್ನ ಸಾಧನೆಯಲ್ಲಿ ನನ್ನ ಜೊತೆಗೆ ನಡೆಯುವ ಕೆಲ ಪ್ರಾಮಾಣಿಕರು ಮಾತ್ರ ಇಲ್ಲಿದ್ದರೆ, ಆಶ್ರಮದಲ್ಲಿ ಅತಿ ಕಡಿಮೆ ಜನರು ಮಾತ್ರ ಉಳಿದುಕೊಳ್ಳುತ್ತಾರೆ.

ದಿವ್ಯತೆಯು ಎಲ್ಲರಲ್ಲೂ ಇದೆ ಎಲ್ಲೆಡೆಯೂ ಇದೆ ಎಂಬುದನ್ನು ಶ್ರೀ ಅರವಿಂದರು ನಮಗೆ ಯಾವಾಗಲೂ ನೆನಪಿಸುತ್ತಾರೆ, ಮತ್ತು ಸತ್ಯವಾದ ಕರುಣೆಯನ್ನು ಅಭ್ಯಾಸ ಮಾಡಲು ತಿಳಿಸುತ್ತಾರೆ. ಇದನ್ನು ನಾನು ಈಗ ವ್ಯಾಖ್ಯಾನಿಸುತ್ತಿರುವ ಈ ಸುಭಾಷಿತದಲ್ಲಿ ತಿಳಿಸುತ್ತೇನೆ: “ನಿನ್ನನ್ನು ನೀನು ಸಂಪೂರ್ಣವಾಗಿ ಪರೀಕ್ಷಿಸಿಕೊ, ಆಗ ನೀನು ಇತರರ ಕಡೆಗೆ ಹೆಚ್ಚು ದಯಾಳು ಮತ್ತು ಕರುಣಾಮಯಿಯಾಗುತ್ತೀಯ.”

*

ಆಶ್ರಮದ ಪ್ರತಿಯೊಬ್ಬರಿಗೂ ಸಂದರ್ಶಕರು ಮತ್ತು ವಿದೇಶಿಯರೊಂದಿಗೆ (ಮತ್ತು ತಮ್ಮತಮ್ಮಲ್ಲೇ) ವ್ಯವಹರಿಸುವಾಗ ಒಂದು ಒಳ್ಳೆಯ ಸಲಹೆಯನ್ನು ನೀಡುತ್ತಿದ್ದೇನೆ ಕೇಳಿ:

"ಆಶ್ರಮದಲ್ಲಿನ ಯಾವುದಾದರೂ ವಿಷಯದ ಬಗ್ಗೆ ಅಥವಾ ಯಾರಾದರೊಬ್ಬರ ಬಗ್ಗೆ ಹೇಳಲು ಒಳ್ಳೆಯ ಮಾತುಗಳಿಲ್ಲದಿದ್ದಾಗ, ಮೌನವಾಗಿರಿ."

"ಈ ಮೌನವು ದಿವ್ಯತೆಯ ಕಾರ್ಯಕ್ಕೆ ನೀವು ತೋರುವ ನಿಷ್ಠೆಯಾಗಿದೆ ಎಂಬುದನ್ನು ಅರಿತುಕೊಳ್ಳಿ."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/141**

## ಶ್ರೀ ಅರವಿಂದೋರವರ ಬೋಧನೆ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ಭಾರತದ ಪುರಾತನ ಋಷಿಗಳ ಉಪದೇಶ ತತ್ವದಿಂದ ಪ್ರಾರಂಭವಾಗುವುದು ಶ್ರೀ ಅರವಿಂದೋರವರ ಬೋಧನೆ. ಋಷಿಗಳ ಪ್ರಕಾರ ನಿರಂತರ ಮತ್ತು ಏಕಮೇವಾದ್ವಿತೀಯವಾದ ಎಲ್ಲಾ ವಸ್ತುಗಳ ಆತ್ಮ, ಚೇತನ ಮತ್ತು ಸತ್ತೆಯ ನೈಜತೆಯು ವಿಶ್ವದ ಗೋಚರಿಸುವಿಕೆಗಳ ಹಿಂದುಗಡೆ ಇರುವದು. ಆ ಚೇತನ ಮತ್ತು ಆತ್ಮದಲ್ಲಿ ಎಲ್ಲಾ ಸತ್ತೆಗಳೂ ಜೊತೆಗೂಡಿವೆ. ಆದರೆ ಮನಸ್ಸು, ಪ್ರಾಣ ಮತ್ತು ದೇಹದ ನೈಜತೆ, ತಮ್ಮ ಆತ್ಮದ ನೈಜತೆಯ ಬಗೆಗಿನ ಅಜ್ಞಾನ ಮತ್ತು ಪ್ರಜ್ಞೆಯ ನಿರ್ದಿಷ್ಟ ಭಿನ್ನತೆಯ ಮೂಲಕ ವಿಭಜಿತವಾಗಿದೆ. ಈ ವಿಭಿನ್ನ ಚೇತನದ ಪರದೆಯನ್ನು ತೆರೆದು ನೈಜ ಆತ್ಮದ ಬಗ್ಗೆ ಜಾಗರೂಕರಾಗಲು ಒಂದು ನಿರ್ದಿಷ್ಟ ಮಾನಸಿಕ ಆಯಾಮದ ಮೂಲಕ ಸಾಧ್ಯ ಮತ್ತು ಅದರಿಂದ ನಮ್ಮಲ್ಲಿಯ ಮತ್ತು ಎಲ್ಲರಲ್ಲಿಯ ದಿವ್ಯತೆಯ ಬಗ್ಗೆಯೂ ಜಾಗರೂಕರಾಗಬಹುದು.

ಭೌತದಲ್ಲಿ ಈ ಅನನ್ಯ ಸತ್ತೆ ಮತ್ತು ಚೇತನವು ತೊಡಗಿದೆ ಎಂದು ಶ್ರೀ ಅರವಿಂದೋರವರ ಬೋಧನೆಯು ತಿಳಿಸುವುದು. ವಿಕಸನದ ಮೂಲಕ ಅದು ತನ್ನನ್ನು ತಾನು ಮುಕ್ತಗೊಳಿಸಿಕೊಳ್ಳುವದು; ಅಚಿತ್ ಎಂಬಂತೆ ಕಾಣಿಸಿಕೊಳ್ಳುವದರಲ್ಲಿ ಚಿತ್ ಗೋಚರಿಸುವದು. ಒಮ್ಮೆ ಕಾಣಿಸಿಕೊಂಡಿತೆಂದರೆ ಅದು ಸ್ವ-ಪ್ರೇರಿತವಾಗಿ

ವೃದ್ಧಿಸಿ ಔನ್ನತ್ಯಕ್ಕೇರಿ ಹೆಚ್ಚು ಹೆಚ್ಚು ವಿಸ್ತಾರವಾಗಿ ಪರಿಪೂರ್ಣತೆಯ ಕಡೆ ಅಭಿವೃದ್ಧಿ ಹೊಂದುವದು. ಚೇತನದ ಈ ಹೊರಹೊಮ್ಮುವಿಕೆಯ ಮೊದಲ ಹೆಜ್ಜೆಯೇ ಪ್ರಾಣ. ಎರಡನೆಯದೇ ಮನಸ್ಸು. ಆದರೆ ವಿಕಸನವು ಮನಸ್ಸಿನಿಂದ ಮುಕ್ತಾಯವಾಗುವದಿಲ್ಲ. ಅದು ಇನ್ನೂ ಹೆಚ್ಚು ಶ್ರೇಷ್ಠವಾದುದರ ಹೊರಹೊಮ್ಮುವಿಕೆಗೆ ಕಾಯುತ್ತಿದೆ. ಅಂದರೆ ಆಧ್ಯಾತ್ಮಿಕ ಮತ್ತು ಸುಪ್ರಮಾನಸ ಚೇತನದ ಹೊರಹೊಮ್ಮುವಿಕೆಗಾಗಿ ಕಾಯುತ್ತಿದೆ. ಚೇತನಾಭರಿತ ಸತ್ತೆಯಲ್ಲಿ ಪ್ರಮುಖ ಶಕ್ತಿಯಾಗಿ ಅತಿಮಾನಸ ಮತ್ತು ಆತ್ಮದ ಅಭಿವೃದ್ಧಿಯ ಕಡೆಗಿನ ವಿಕಸನವೇ ಮುಂದಿನ ಹೆಜ್ಜೆ. ಏಕೆಂದರೆ ಆಗ ಮಾತ್ರ ಪ್ರಾಣವು ಪರಿಪೂರ್ಣವಾಗಿ ಪ್ರಕಟವಾಗಿ ವಸ್ತುಗಳಲ್ಲಿ ಅಡಗಿರುವ ದಿವ್ಯತೆಯು ಸಂಪೂರ್ಣವಾಗಿ ಹೊರಹೊಮ್ಮಲು ಸಾಧ್ಯ.

ಪ್ರಾಣಿಗಳು ಮತ್ತು ಸಸ್ಯದ ಜೀವನದಲ್ಲಿ ಪ್ರಜ್ಞಾಭರಿತ ಸಂಕಲ್ಪವಿಲ್ಲದೆಯೇ ಪ್ರಕೃತಿಯು ಮೊದಲಿಗೆ ವಿಕಸನದ ಹೆಜ್ಜೆಗಳನ್ನು ಇರಿಸಿತು. ಆದರೆ ಉಪಕರಣದಲ್ಲಿ ಒಂದು ಪ್ರಜ್ಞಾಭರಿತ ಸಂಕಲ್ಪದಿಂದ ಪ್ರಕೃತಿಯು ಮಾನವನಲ್ಲಿ ವಿಕಸನವಾಗಲು ಸಾಧ್ಯ. ಆದರೇನು ಇದನ್ನು ಸಂಪೂರ್ಣವಾಗಿ ನೆರವೇರಿಸಲು ಮಾನವನಲ್ಲಿಯ ಮಾನಸಿಕ ಸಂಕಲ್ಪ ಮಾತ್ರವೇ ಸಾಕಾಗುವುದಿಲ್ಲ. ಏಕೆಂದರೆ ಮನಸ್ಸು ಒಂದು ನಿರ್ದಿಷ್ಟ ಅಂಶದವರೆಗೆ ಮಾತ್ರ ಮುನ್ನಡೆಯುವದು ನಂತರ ವೃತ್ತಾಕಾರವಾಗಿ ಸುತ್ತ ತೊಡಗುವದು. ಒಂದು ಬದಲಾವಣೆಯನ್ನು ಮಾಡಬೇಕಾಗುವದು. ಚೇತನವು ತಿರುಗುವದರ ಮೂಲಕ ಮನಸ್ಸು ಉನ್ನತ ತತ್ವವಾಗಿ ಬದಲಾಗಬೇಕು. ಯೋಗದ ಅಭ್ಯಾಸ ಮತ್ತು ಪುರಾತನ ಮಾನಸಿಕ ಆಯಾಮದ ಮೂಲಕ ಈ ವಿಧಾನವನ್ನು ಕಂಡುಕೊಳ್ಳಬೇಕು. ಹಿಂದಿನ ಕಾಲದಲ್ಲಿ ಆತ್ಮದ ಅಥವಾ ಚೇತನದ ಉನ್ನತಾವಸ್ಥೆಯಲ್ಲಿ ಕಾಣದಾಗುವದು ಮತ್ತು ಈ ಪ್ರಪಂಚದಿಂದ ದೂರವಾಗುವುದರ ಮೂಲಕ ಇದನ್ನು ಪ್ರಯತ್ನಿಸಲಾಗಿತ್ತು. ಶ್ರೀ ಅರವಿಂದೋರವರು ಉನ್ನತ ತತ್ವದ ಅವರೋಹಣವು ಸಾಧ್ಯವೆಂದು ಬೋಧಿಸುವರು. ಅದು ಪ್ರಪಂಚದಿಂದ ಆಧ್ಯಾತ್ಮಿಕ ಆತ್ಮವನ್ನು ಹೊರಹೊಮ್ಮಿಸುವದು ಮಾತ್ರವಲ್ಲ ಆದರೆ ಪ್ರಪಂಚದಲ್ಲೇ ಅದನ್ನು ಹೊರಹೊಮ್ಮಿಸುವದು, ಸುಪ್ರಮಾನಸ ಸತ್ಯ–ಚೇತನವು ಮನಸ್ಸಿನ ಅಜ್ಞಾನ ಅಥವಾ ಅದರ ಪರಿಮಿತ ಜ್ಞಾನದ ಜಾಗವನ್ನು ಆಕ್ರಮಿಸುವದು. ಅದು ಆಂತರಿಕ ಆತ್ಮದ ಪೂರ್ಣತೆಯನ್ನು ಪಡೆದ ಉಪಕರಣವಾಗಿದ್ದು, ಮಾನವ ಸತ್ತೆಯು ಕ್ರಿಯಾಶೀಲವಾಗಿ ಮತ್ತು ಆಂತರಿಕವಾಗಿ ತನ್ನನ್ನು ತಾನು ಕಂಡುಕೊಳ್ಳಲು ಸಾಧ್ಯವಾಗುವಂತೆ

ಮಾಡುವದು ಮತ್ತು ದಿವ್ಯತೆಯ ಜನಾಂಗವಾಗಿ ಅವನು ಪ್ರಾಣಿಕ ಸ್ವಭಾವದಿಂದ ಬೆಳೆಯುವಂತೆ ಮಾಡುವದು. ಇನ್ನೂ ಗೂಢವಾಗಿರುವ ಸುಪ್ರಮಾನಸ ತತ್ವದ ಕಾರ್ಯವಿಧಾನ ಮತ್ತು ಅವರೋಹಣದ ಮೂಲಕ ಬದಲಾವಣೆ ಅಥವಾ ಪರಿವರ್ತನೆಗೆ ಸತ್ತೆಯ ಎಲ್ಲಾ ಭಾಗಗಳನ್ನು ತೆರೆದುಕೊಳ್ಳಬೇಕು. ಇದನ್ನು ಯೋಗದ ಮಾನಸಿಕ ಆಯಾಮವನ್ನು ಉಪಯೋಗಿಸಿ ಮಾಡಬಹುದು.

ಇದನ್ನು ಒಮ್ಮೆಲೇ ಮಾಡಲಾಗುವುದಿಲ್ಲ. ಅಥವಾ ಕಡಿಮೆ ಸಮಯದಲ್ಲಿ ಅಥವಾ ಶೀಘ್ರಗತಿಯ ಪವಾಡ ಸದೃಶ ಪರಿವರ್ತನೆಯ ಮೂಲಕವೂ ಮಾಡಲಾಗುವುದಿಲ್ಲ. ಸುಪ್ರಮಾನವ ಅವರೋಹಣವು ಸಾಧ್ಯವಾಗುವ ಮುನ್ನ ಸಾಧಕನು ಅನೇಕ ಹೆಜ್ಜೆಗಳು ಮುನ್ನಡೆಯ ಬೇಕಾಗುವುದು. ಮಾನವನು ಮೇಲ್ಮೈಯ ಮನಸ್ಸು, ಪ್ರಾಣ ಮತ್ತು ದೇಹದಲ್ಲಿ ಬಹುಪಾಲು ಜೀವಿಸುವನು. ಆದರೆ ಆತನ ಅಂತರ್ಯದಲ್ಲಿ ಇನ್ನೂ ಹೆಚ್ಚು ಸಾಧ್ಯತೆಗಳನ್ನು ಹೊಂದಿರುವ ಒಂದು ಆಂತರಿಕ ಸತ್ತೆಯು ಇರುವದು. ಮಾನವನು ಅದಕ್ಕೆ ಜಾಗೃತನಾಗಬೇಕು – ಏಕೆಂದರೆ ಅದರಿಂದ ಬಹಳ ಪರಿಮಿತ ಪ್ರಭಾವವನ್ನು ಮಾತ್ರ ಆತನೀಗ ಸ್ವೀಕರಿಸುತ್ತಿರುವವನು. ಆದುದರಿಂದ ಇನ್ನೂ ಹೆಚ್ಚು ಸೌಂದರ್ಯ, ಸಾಮರಸ್ಯ, ಶಕ್ತಿ ಮತ್ತು ಜ್ಞಾನಗಳಿಗಾಗಿ ನಿರಂತರವಾದ ಪ್ರಯತ್ನದತ್ತಲಿನ ತಳ್ಳುವಿಕೆಗೆ ಒಳಗಾಗಿರುವನು. ಹೀಗಾಗಿ ಈ ಆಂತರಿಕ ಸತ್ತೆಯ ಶ್ರೇಣಿಗಳನ್ನು ತೆರೆದುಕೊಂಡು ಅಲ್ಲಿಂದ ಬಾಹ್ಯ ಜೀವನದ ಕಡೆ ದೃಷ್ಟಿ ಹರಿಸುವದೇ ಯೋಗದ ಮೊದಲ ಪ್ರಕ್ರಿಯೆಯಾಗಿದೆ. ಅಂದರೆ ಒಂದು ಆಂತರಿಕ ಬೆಳಕು ಮತ್ತು ಶಕ್ತಿಗಳ ಮೂಲಕ ಆತನ ಬಾಹ್ಯ ಜೀವನದ ಆಡಳಿತವನ್ನು ಮಾಡುವದು. ಹೀಗೆ ಮಾಡುವದರಿಂದ ಆತನು ಮಾನಸಿಕ, ಪ್ರಾಣಿಕ ಮತ್ತು ಭೌತಿಕ ಅಂಶಗಳ ಬಾಹ್ಯ ಮಿಶ್ರಣವಾಗಿರದ ನಿಜವಾದ ಆತ್ಮವನ್ನು ತನ್ನಲ್ಲಿಯೇ ಕಾಣುವನು. ಆ ಆತ್ಮವು ಅವುಗಳ ಹಿಂದಿನ ನೈಜತೆಯಾಗಿದೆ ಎಂಬುದು ಆತನಿಗೆ ಗೋಚರಿಸುವದು. ಅಂದರೆ ದಿವ್ಯ ಜ್ವಾಲೆಯ ಒಂದು ಕಿಡಿಯು ಅದಾಗಿರುವದು. ಆತನು ತನ್ನ ಆತ್ಮದಲ್ಲಿ ಜೀವಿಸುವದನ್ನು ಕಲಿಯಬೇಕು ಮತ್ತು ಅದರ ಚಾಲನೆಯ ಮೂಲಕ ಉಳಿದ ಸ್ವಭಾವಗಳ ನೆಲೆಯನ್ನು ನಿರ್ಧರಿಸಿ ಸತ್ಯದ ಕಡೆ ಅವುಗಳನ್ನು ಪರಿಶುದ್ಧಗೊಳಿಸಿ ತಿರುಗಿಸಬೇಕು. ನಂತರ ಮೇಲುಗಡೆಗೆ ತೆರೆದುಕೊಳ್ಳುವುದಕ್ಕೆ ಮತ್ತು ಉನ್ನತ ತತ್ವವೊಂದರ ಅವರೋಹಣವು ಅನುಸರಿಸಲು ಪ್ರಾರಂಭವಾಗುವದು. ಆದರೂ ಸಹ ಅದು ಒಮ್ಮೆಲೇ ಪರಿಪೂರ್ಣ ಸುಪ್ರಮಾನಸ

ಬೆಳಕು ಮತ್ತು ಶಕ್ತಿಯಾಗಿರುವುದಿಲ್ಲ. ಏಕೆಂದರೆ ಸಾಮಾನ್ಯ ಮಾನವ ಮನಸ್ಸು ಮತ್ತು ಸುಪ್ರಮಾನಸ ಸತ್ಯ–ಚೇತನದ ನಡುವೆ ಹಲವಾರು ಚೇತನದ ಶ್ರೇಣಿಗಳು ಇವೆ. ಈ ಮಧ್ಯದಲ್ಲಿರುವ ಶ್ರೇಣಿಗಳನ್ನು ತೆರೆದು ಮನಸ್ಸು, ಪ್ರಾಣ ಮತ್ತು ಶರೀರಗಳೊಳಗಡೆಗೆ ಅವುಗಳ ಶಕ್ತಿಯು ಅವರೋಹಿಸುವಂತೆ ಮಾಡಬೇಕು. ಆಗ ಮಾತ್ರ ಸತ್ಯ–ಚೇತನದ ಸಂಪೂರ್ಣ ಶಕ್ತಿಯು ಸ್ವಭಾವದಲ್ಲಿ ಕೆಲಸ ಮಾಡುವದು. ಹೀಗಾಗಿ ಈ ಸ್ವ–ನಿಯಮಬದ್ಧತೆ ಅಥವಾ ಸಾಧನೆಯ ಪ್ರಕ್ರಿಯೆಯು ದೀರ್ಘ ಮತ್ತು ಕಷ್ಟಕರವಾದುದಾಗಿದೆ. ಆದರೆ ಇದನ್ನು ಸ್ವಲ್ಪ ಗಳಿಸಿದರೂ ಸಹ ಅಂತಿಮ ಹೊರಹೊಮ್ಮುವಿಕೆ ಮತ್ತು ಪರಿಪೂರ್ಣತೆಯ ಸಾಧ್ಯತೆಯು ಹೆಚ್ಚಾಗುವದು.

ಪುರಾತನ ವ್ಯವಸ್ಥೆಗಳಿಗೆ ಸೇರಿದ ಅನೇಕ ವಿಷಯಗಳು ನಮಗೆ ಈ ಹಾದಿಯಲ್ಲಿ ಅವಶ್ಯಕವೆನಿಸುವವು – ಒಂದು ಹೆಚ್ಚು ಶ್ರೇಷ್ಠವಾದ ವಿಸ್ತಾರತೆ ಮತ್ತು ಆತ್ಮಭಾವ ಹಾಗು ಅನಂತತೆಯ ಕಡೆ ಮನಸ್ಸನ್ನು ತೆರೆದುಕೊಳ್ಳುವದು. ಬ್ರಹ್ಮಾಂಡದ ಚೇತನವೆಂದು ಕರೆಯಲಾಗುವದರೊಳಗಡೆಗೆ ಪ್ರವೇಶಿಸಬೇಕು. ಅಪೇಕ್ಷೆಗಳು ಮತ್ತು ಭಾವನೆಗಳ ಮೇಲೆ ವಿಜಯವನ್ನು ಪಡೆಯಬೇಕು. ಬಾಹ್ಯ ಸನ್ಯಾಸದ ಅಗತ್ಯವು ಇಲ್ಲ. ಆದರೆ, ಅಪೇಕ್ಷೆ ಮತ್ತು ಅಂಟಿಕೊಂಡಿರುವಿಕೆಯ ಮೇಲಿನ ಆಕ್ರಮಣ, ಶರೀರ ಮತ್ತು ಅದರ ಅವಶ್ಯಕತೆಗಳು, ದುರಾಸೆ ಮತ್ತು ಸ್ವಭಾವದ ಮೇಲಿನ ಹಿಡಿತವೂ ಸಹ ಅನಿವಾರ್ಯ. ಪುರಾತನ ವ್ಯವಸ್ಥೆಗಳ ಒಂದು ಸಂಯೋಜನೆಯು ಹೀಗಿದೆ: ಗೋಚರಿಸುವಿಕೆ ಮತ್ತು ನೈಜತೆಗಳ ನಡುವೆ ಮನಸ್ಸಿನ ವಿವೇಚನೆಯ ಮೂಲಕ ಜ್ಞಾನದ ಹಾದಿ, ಭಕ್ತಿ, ಪ್ರೇಮ ಮತ್ತು ಶರಣಾಗತಿಯ ಹೃದಯದ ಪಥ, ಸ್ವಾರ್ಥದ ಪ್ರೇರಣೆಗಳಿಂದ ಸಂಕಲ್ಪವನ್ನು ದೂರ ಸರಿಸಿ ಸತ್ಯದ ಕಡೆ ಕರೆದುಕೊಂಡು ಹೋಗುವ ಕರ್ಮ ಪಥ ಮತ್ತು ಅಹಂಕಾರವನ್ನು ಬಿಟ್ಟು ಇನ್ನೂ ಹೆಚ್ಚಿನ ನೈಜತೆಯ ಸೇವೆ. ಏಕೆಂದರೆ ಇಡೀ ಸತ್ತೆಯನ್ನು ತರಬೇತಿಗೆ ಒಳಪಡಿಸಿ ಅದು ಪ್ರತಿಕ್ರಿಯಿಸಿ ಪರಿವರ್ತನೆಯಾಗುವಂತೆ ಮಾಡಬೇಕು. ಆಗ ಸ್ವಭಾವದಲ್ಲಿ ಆ ಶ್ರೇಷ್ಠ ಬೆಳಕು ಮತ್ತು ಶಕ್ತಿಯು ಕಾರ್ಯನಿರತವಾಗಲು ಸಾಧ್ಯವಾಗುವದು.

ಈ ಆಯಾಮದಲ್ಲಿ, ಒಡೆಯನ ಸ್ಫೂರ್ತಿ ಮತ್ತು ಕಷ್ಟಕರವಾದ ಹಂತಗಳಲ್ಲಿ ಆತನ ಹತೋಟಿ ಮತ್ತು ಸಾನ್ನಿಧ್ಯಗಳು ಅತ್ಯಾವಶ್ಯಕ – ಏಕೆಂದರೆ ಅದಿಲ್ಲದೆ ಹೋದರೆ ಹಾದಿಯಲ್ಲಿ ಎಡವಿ ತಪ್ಪು ಮಾಡುವ ಸಾಧ್ಯತೆಗಳು ಹೆಚ್ಚಾಗಿರುವ ಸಂಭವವು ಅತ್ಯಧಿಕವಾಗಿ ಸಫಲತೆಯ ಅವಕಾಶವು ಕಡಿಮೆ ಆಗುವದು. ಉನ್ನತ

ಚೇತನ ಮತ್ತು ಸತ್ತೆಗೆ ಏರಿರುವವನನ್ನು ನಾಯಕನೆಂದು ಪರಿಗಣಿಸಲಾಗುವದು ಮತ್ತು ಸಾಮಾನ್ಯವಾಗಿ ಅದರ ಪ್ರಕಟಣೆ ಮತ್ತು ಪ್ರತಿನಿಧಿ ಎಂದು ಭಾವಿಸಲಾಗುವದು. ಆತನ ಬೋಧನೆ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಸ್ವಂತ ಪ್ರಭಾವ ಮತ್ತು ಉದಾಹರಣೆಗಳಿಂದ ನೆರವು ನೀಡುವದು ಮಾತ್ರವಲ್ಲ. ಆದರೆ ತನ್ನ ಸ್ವಂತ ಅನುಭವವನ್ನು ಇತರರಿಗೆ ಸಂವಹನೆ ಮಾಡುವ ಶಕ್ತಿಯನ್ನು ಸಹ ಆತನು ಹೊಂದಿರುವನು.

ಇದೇ ಶ್ರೀ ಅರವಿಂದೋರವರ ಬೋಧನೆ ಮತ್ತು ಅಭ್ಯಾಸದ ವಿಧಾನವಾಗಿದೆ. ಯಾವುದಾದರೂ ಒಂದು ಮತವನ್ನು ಅಭಿವೃದ್ಧಿಪಡಿಸುವದು ಅವರ ಗುರಿಯಾಗಿಲ್ಲ ಅಥವಾ ಪುರಾತನ ಮತಗಳನ್ನು ಮಿಶ್ರಣಗೊಳಿಸುವದೂ ಅವರ ಧ್ಯೇಯವಲ್ಲ ಅಥವಾ ಹೊಸ ಮತದ ಸ್ಥಾಪನೆಯನ್ನು ಮಾಡಲು ಅವರು ಬಯಸಲಿಲ್ಲ. ಏಕೆಂದರೆ ಇವೆಲ್ಲವೂ ಆತನ ಪ್ರಮುಖ ಉದ್ದೇಶದಿಂದ ದೂರ ಸರಿಸುವಂತಹವಾಗಿದ್ದವು. ಆಂತರಿಕ ಸ್ವ–ಅಭಿವೃದ್ಧಿಯೇ ಆತನ ಯೋಗದ ಗುರಿಯಾಗಿತ್ತು. ಅದನ್ನು ಅನುಸರಿಸುವ ಪ್ರತಿಯೊಬ್ಬರೂ ಕಾಲಾನುಕ್ರಮದಲ್ಲಿ ಎಲ್ಲರಲ್ಲಿಯ ಏಕ ಆತ್ಮವನ್ನು ಅನ್ವೇಷಿಸುವರು ಮತ್ತು ಮಾನಸಿಕವಲ್ಲದ ಉನ್ನತ ಚೇತನವನ್ನು ವಿಕಸಿತ–ಗೊಳಿಸುವರು. ಅಂದರೆ ಮಾನವ ಸ್ವಭಾವವನ್ನು ದಿವ್ಯವಾಗಿ ಪರಿವರ್ತಿತಗೊಳಿಸುವ ಆಧ್ಯಾತ್ಮಿಕ ಮತ್ತು ಸುಪ್ರಮಾನಸ ಚೇತನವನ್ನು ಪಡೆಯುವರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/547–550**

**ಇದು ಇತರ ಆಶ್ರಮಗಳ ರೀತಿಯದಲ್ಲ**

ಇದು ಇತರ ಆಶ್ರಮಗಳ ರೀತಿಯಲ್ಲಿ ಇಲ್ಲ – ಇಲ್ಲಿಯ ಸದಸ್ಯರು ಸನ್ಯಾಸಿಗಳಲ್ಲ. ಇಲ್ಲಿಯ ಯೋಗದ ಏಕೈಕ ಧ್ಯೇಯವು ಮೋಕ್ಷ ಸಾಧನೆಯಲ್ಲ. ಒಂದು ಕೆಲಸಕ್ಕಾಗಿ ಇಲ್ಲಿ ಸಿದ್ಧತೆಯನ್ನು ಮಾಡಲಾಗುತ್ತಿದೆ. ಯೋಗ–ಶಕ್ತಿ ಮತ್ತು ಯೌಗಿಕ ಚೇತನದ ಮೇಲೆ ಅದು ಸ್ಥಾಪಿತವಾಗುವದು ಮತ್ತು ಅದು ಇನ್ನು ಯಾವುದೇ ತಳಹದಿಯನ್ನೂ ಹೊಂದಿರುವುದಿಲ್ಲ. ಜೊತೆಗೆ ತನ್ನ ಆಧ್ಯಾತ್ಮಿಕ ಸಿದ್ಧತೆಯ ಅಂಗವಾಗಿ ಆಶ್ರಮದಲ್ಲಿ ಯಾವುದಾದರೂ ಕೆಲಸವನ್ನು ಪ್ರತಿಯೊಬ್ಬ ಸದಸ್ಯನು ಮಾಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/590**

ಇಂತಹ ಸಂಸ್ಥೆಗಳನ್ನು ನಿರ್ಮಿಸುವಾಗ ಸಾಮಾನ್ಯವಾಗಿ ಇರುವ ಆಶಯಗಳೊಂದಿಗೆ ಈ ಆಶ್ರಮವು ನಿರ್ಮಿತವಾಗಿಲ್ಲ. ಪ್ರಪಂಚವನ್ನು ತ್ಯಾಗ ಮಾಡುವುದು ಇಲ್ಲಿಯ ಧ್ಯೇಯವಲ್ಲ ಆದರೆ ಮತ್ತೊಂದು ವಿಧದ ಜೀವನ ಶೈಲಿಯ ವಿಕಸನ ಮತ್ತು ಅಭ್ಯಾಸದ ಕೇಂದ್ರ ಮತ್ತು ಕ್ಷೇತ್ರವಾಗಿ ಇದು ರಚಿತವಾಗಿದೆ. ಅಂತಿಮವಾಗಿ ಇದು ಉನ್ನತ ಆಧ್ಯಾತ್ಮಿಕ ಚೇತನದಿಂದ ಚಾಲಿತವಾಗುವದು ಮತ್ತು ಆತ್ಮದ ಹೆಚ್ಚು ಶ್ರೇಷ್ಠ ಜೀವನವನ್ನು ಸಾಕಾರಗೊಳಿಸುವದು. ಯಾವ ಹಂತದಲ್ಲಿ ಸಾಧಕನು ಸಾಮಾನ್ಯ ಜೀವನವನ್ನು ತೊರೆದು ಇಲ್ಲಿ ಪ್ರವೇಶಿಸಬಹುದು ಎಂಬುದಕ್ಕೆ ಯಾವುದೇ ಸಾಮಾನ್ಯ ನಿಯಮವಿಲ್ಲ; ಪ್ರತಿಯೊಬ್ಬ ಸಾಧಕನ ವಿಷಯದಲ್ಲೂ ಅದು ಆತನ ವೈಯಕ್ತಿಕ ಅವಶ್ಯಕತೆ, ಪ್ರೇರಣೆ ಮತ್ತು ಸಾಧ್ಯತೆ ಅಥವಾ ಮೆಟ್ಟಿಲನ್ನು ಏರಲು ಅವಶ್ಯಕವಾದ ಅರ್ಹತೆಯನ್ನು ಅವಲಂಬಿಸಿದೆ. ಶ್ರೀಮಾತೆಯವರು ಮಾತ್ರ ಈ ನಿರ್ಧಾರವನ್ನು ಕೈಗೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/592–593**

ಮತೀಯ ಬೋಧನೆಯ ಗುರಿಯನ್ನು ಈ ಆಶ್ರಮ ಹೊಂದಿಲ್ಲ. ಆದರೆ ಯೋಗಾಭ್ಯಾಸದ ಧ್ಯೇಯವನ್ನು ಹೊಂದಿದೆ ಎಂದು ಬರೆಯುತ್ತಿದ್ದೇನೆ; ಅದರ ಗುರಿ ಎಲ್ಲಾ ಯೋಗಗಳಂತೆ ಉನ್ನತ ಚೇತನದ ಸಾಧನೆ ಮತ್ತು ಆಧ್ಯಾತ್ಮಿಕ ಜೀವನ. ಆದರೆ ಎಲ್ಲಾ ಯೋಗಗಳ ಈ ಸಾಮಾನ್ಯ ಗುರಿಯೊಂದಿಗೆ ಶ್ರೀ ಅರವಿಂದೋರವರ ಯೋಗವು ತನ್ನದೇ ಆದ ವಿಶಿಷ್ಟ ಧ್ಯೇಯದೊಂದಿಗಿನ ಅಸಾಮಾನ್ಯ ಹಾದಿಯಾಗಿದೆ. ಬಹಳ ಕಷ್ಟಕರವಾದ ಈ ಅನನ್ಯ ಹಾದಿಗೆ ಕರೆಯನ್ನು ಪಡೆದವರನ್ನು ಮಾತ್ರ ಸೇರಿಸಿಕೊಳ್ಳಲಾಗುವದು. ಅವರು ಅದನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುವದರ ಬಗ್ಗೆ ಪರೀಕ್ಷಿಸಲಾಗುವದು. ಅವರು ಉಳಿದುದೆಲ್ಲವನ್ನು ತ್ಯಜಿಸಿ ಯಾವುದೇ ಅಭ್ಯಂತರವಿಲ್ಲದೆ ಶ್ರೀ ಅರವಿಂದೋರವರ ಮಾರ್ಗದರ್ಶನವನ್ನು ಅನುಸರಿಸಬೇಕು. ಮಹಿಳೆಯರಿಗಾಗಿ ಬೇರೆಯಾದ ಆಶ್ರಮವಿಲ್ಲ. ಆಶ್ರಮದಲ್ಲಿ ಅನೇಕ ಮನೆಗಳು ಇವೆ. ಅನುಕೂಲತೆಗೆ ಅನುಗುಣವಾಗಿ ವಸತಿಯನ್ನು ನೀಡಲಾಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/599**

**ನಿಬಂಧನೆಗಳು**

ಆತನು ಬರಬಹುದು. ಆದರೆ ಇಲ್ಲಿ ನೆಲೆಸುವದರಿಂದ ಆತನು ಲಾಭ ಪಡೆಯಲು ಯಾವ ನಿಬಂಧನೆಗಳನ್ನು ಅರ್ಥಮಾಡಿಕೊಂಡಿರಬೇಕು ಮತ್ತು

ಅನುಸರಿಸಬೇಕು ಎಂಬುದನ್ನು ಅರಿತಿರಬೇಕು. ಆದುದರಿಂದ ಇಲ್ಲಿ ನೆಲೆಸುವಿಕೆಯು ಲಾಭದಾಯಕವಾಗಲು (1) ಸಾಮಾನ್ಯ ಮಾನವ ಜೀವನದ ಎಲ್ಲಾ ಅಂಟುಗಳನ್ನು ತ್ಯಜಿಸಿ ತೀವ್ರವಾದ ಸಾಧನೆಗೆ ಸಿದ್ಧವಾಗಿರಬೇಕು, (2) ಸಿದ್ಧವಾಗಿಲ್ಲದಿದ್ದರೂ, ಗುರಿಯನ್ನು ಸಂಪೂರ್ಣವಾಗಿ ಗುರುತಿಸಿ ಅದಕ್ಕೆ ಸಿದ್ಧವಾಗಲು ಪೂರ್ತಿಯಾಗಿ ತೆರೆದುಕೊಂಡಿರುವವರು, (3) ಆಂತರಿಕವಾದ ತೀವ್ರ ಸಾಧನೆಗೆ ಇನ್ನೂ ಅಸಮರ್ಥವಾಗಿದ್ದರೂ, ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ಮುಡಿಪಾಗಿಡಲು ಬಯಸುವವರು.

*

ಈಗಿನ ಸಂದರ್ಭದಲ್ಲಿ ಇಲ್ಲಿಗೆ ಬರುವದು ಆತನಿಗೆ ಸಾಧ್ಯವಿಲ್ಲ ಅಥವಾ ಯುಕ್ತವಲ್ಲ. ಆಶ್ರಮದಲ್ಲಿ ಈಗಾಗಲೇ 80 ಜನರು ವಾಸಿಸುತ್ತಿದ್ದಾರೆ ಮತ್ತು ಎಲ್ಲಾ ವಸತಿಯೂ ಭರ್ತಿಯಾಗಿದೆ ಅಥವಾ ಬರುವವರಿಗಾಗಿ ಈಗಾಗಲೇ ಮೀಸಲಿಡಲಾಗಿದೆ. ಅಷ್ಟೇ ಅಲ್ಲ, ಭಾವನಾತ್ಮಕವಾಗಿ ಶರಣಾಗಲು ಸಾಧ್ಯವಾಗದಿದ್ದರೆ ಆತನಿಗೆ ಇಲ್ಲಿಗೆ ಬರುವದರಿಂದ ಉಪಯೋಗವಾಗುವುದಿಲ್ಲ. ಏಕೆಂದರೆ ಇಲ್ಲಿಯ ಸಾಧನೆಯ ನಿಬಂಧನೆಗಳು ಹಿಂದಿನಂತೆ ಇಲ್ಲ. ನಮ್ಮ ನೆರವಿನಿಂದ ಲಾಭ ಪಡೆಯಲು ಅಥವಾ ಮುಂದಿನ ಯಾವುದೇ ನೈಜ ಪ್ರಗತಿಗೆ ಈ ಭಾವನಾತ್ಮಕ ಶರಣಾಗತಿಯೇ ಮೊಟ್ಟ ಮೊದಲ ನಿಬಂಧನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/602**

ಆತನ ಸಾಧನೆಯ ವಿಷಯಕ್ಕೆ ಬಂದಾಗ, ಆತನ ಮನೋಭಾವನೆಯು ಈಗಿನಂತೆಯೇ ಮುಂದುವರಿದು ಸಂಪೂರ್ಣವಾಗಿ ಅದರಲ್ಲಿ ಪ್ರಾಮಾಣಿಕವಾಗಿದ್ದರೆ ಆತನು ಈಗ ಅನುಭವಿಸುತ್ತಿರುವ ಕಷ್ಟವು ಕಾಣದಾಗುವುದು ನಿಶ್ಚಯ. ಅವಶ್ಯಕವಾಗಿ, ಹಿಂದಿನ ಅವುಗಳ ಎಲ್ಲಾ ಚಾಳಿಗಳನ್ನೂ ಆಧರಿಸಿ, ಭಾವನಾತ್ಮಕ ಸತ್ತೆ ಮತ್ತು ಶರೀರದಲ್ಲಿನ ವಿರೋಧಗಳನ್ನು ಒಂದೇ ದಿನದಲ್ಲಿ ಜಯಿಸಲಾಗುವದಿಲ್ಲ. ಆತನ ವಿಷಯದಲ್ಲಿ ಬಹುಶಃ ಮನಸ್ಸು ಶರಣಾಗಲು ಸಿದ್ಧವಾಗಿರಬಹುದು. ಆದರೆ ಭಾವನಾತ್ಮಕ ಪುರುಷನು ಇನ್ನೂ ನಿರಾಕರಿಸುತ್ತಿರುವನು. ಮೇಲ್ಮೈ ಭಾಗದಲ್ಲಿನ ವಿರೋಧ ಮಾತ್ರವಲ್ಲ. ಆದರೆ ಹಿಂದುಗಡೆಯ ಭಾವನಾತ್ಮಕ ಸತ್ತೆಯ ವಿರೋಧಕ್ಕೂ ಸಹ ಆತನು ಸಾಧನೆಯಲ್ಲಿ ಮನಸ್ಸಿನಿಂದ ವಿಭಿನ್ನವಾಗಿ ಜಾಗೃತವಾದರೆ

(ಪೂರ್ತಿಯಾಗಿ) ಮತ್ತು ಅದರ ಎಲ್ಲಾ ಆಳವಾದ ಚಲನೆಗಳನ್ನೂ ನೋಡಲು ಸಾಧ್ಯವಾದರೆ ಹಾಗೂ ಅವುಗಳನ್ನು ಸಂಪೂರ್ಣವಾಗಿ ಮತ್ತು ಸವಿವರವಾಗಿ ಪರಿವರ್ತನೆಗಾಗಿ ಶ್ರೀಮಾತೆಯವರಿಗೆ ಸಮರ್ಪಿಸಿದರೆ, ಆಗ ಪರಿವರ್ತನೆಯ ಕಾರ್ಯವನ್ನು ಮಾಡಬಹುದು. ಸಮರ್ಪಣೆಗೆ ಇನ್ನೂ ಹೆಚ್ಚು ಹೆಚ್ಚು ಪ್ರಜ್ಞೆಗಾಗಿ ಮತ್ತು ಹೆಚ್ಚು ಹೆಚ್ಚು ಶಕ್ತಿಗಾಗಿ ಆತನು ಪ್ರಾರ್ಥಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/602–603 – ಶ್ರೀ ಅರವಿಂದರು**

ನೀನು ಆತನಿಗೆ ಹೀಗೆ ಬರೆಯಬಹುದು, ದುಷ್ಟ ಶಕ್ತಿಗಳ ಪ್ರಭಾವಕ್ಕೆ ಸಿಲುಕಿದ್ದರೆ ಆತನು ಈಗ ಆಶ್ರಮಕ್ಕೆ ಬರುವ ಪರಿಸ್ಥಿತಿಯಲ್ಲಿ ಇಲ್ಲ. ಆಶ್ರಮದ ವಾತಾವರಣದಿಂದ ಲಾಭವನ್ನು ಪಡೆಯಲು ಯಾರು ಸಿದ್ಧವಾಗಿರುವರೋ ಅಂತಹವರನ್ನು ಮಾತ್ರ ಇಲ್ಲಿಗೆ ಕರೆಯಲಾಗುವದು ಮತ್ತು ಇಲ್ಲಿ ನೆಲೆಸಲು ಅವರಿಗೆ ಅನುಮತಿ ನೀಡಲಾಗುವದು. ಆತನು ಬಯಸಿದರೆ, ಏನು ಮಾಡಬಹುದೆಂದರೆ, ದರ್ಶನಕ್ಕಾಗಿ ಆಗಸ್ಟ್ 15 ರಂದು ಬರಬಹುದು – ಆತನನ್ನು ನೋಡಿದ ಮೇಲೆ ನಾವು ಹೆಚ್ಚು ನಿರ್ದಿಷ್ಟವಾಗಿ ಏನಾದರೂ ಹೇಳಬಹುದು.

*

ಮೊದಲಿಗೆ ಸಾಮರ್ಥ್ಯ ಮತ್ತು ಎರಡನೆಯದಾಗಿ ಯೋಗಕ್ಕಾಗಿ ಆಕರ್ಷಣೆ ಮತ್ತು ಸಂಕಲ್ಪವಿದ್ದರೆ ಮಾತ್ರ ಜನರಿಗೆ ಇಲ್ಲಿ ಬಂದು ನೆಲೆಸುವುದು ಲಾಭಕರ, ಇಲ್ಲದಿದ್ದರೆ ಉಪಯೋಗರಹಿತ.

*

ಇಲ್ಲ, ಆಶ್ರಮದಲ್ಲಿ ಇರುವುದು ಮಾತ್ರವೇ ಸಾಕಾಗುವುದಿಲ್ಲ – ಶ್ರೀಮಾತೆವರಿಗೆ ತೆರೆದುಕೊಳ್ಳಬೇಕು ಮತ್ತು ಪ್ರಪಂಚದಲ್ಲಿನ ಕೆಸರನ್ನು ದೂರ ಸರಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/602–603**

**– ಶ್ರೀ ಅರವಿಂದರು**

# ಶ್ರೀ ಅರವಿಂದರ
# ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

## 44

## ಎರಡನೆಯ ಸರಣಿ:

## ಅಧ್ಯಾಯ – 7

## ಗೀತೆಯ ಪರಮ ವಚನ (7/1)

ಗೀತಾ ಯೋಗದ ಆಂತರಿಕ ಸಾರ ಭಾಗವನ್ನು ನಾವು ಇದುವರೆಗೆ ಅಧ್ಯಯನ ಮಾಡಿದ್ದೇವೆ. ಅದರ ಸಮಗ್ರ ಬೋಧನೆಯ ಜೀವಂತ ಉಸಿರಾಡುವ ಕೇಂದ್ರವನ್ನು ದರ್ಶಿಸಿದ್ದೇವೆ. ಈಗ ನಾವು ಅರ್ಥಮಾಡಿಕೊಂಡಿದ್ದೇನೆಂದರೆ ಮಾನವನು (ಅವನ ಆತ್ಮವು) ನಿಮ್ನ ಪ್ರಕೃತಿಯಿಂದ ಹಾಗೂ ಅಹಂನ ಹಿಡಿತದಿಂದ ಬಿಡಿಸಿಕೊಂಡು ನಿರ್ವಿಕಾರ, ನಿಶ್ಚಲ, ಶಾಂತ, ಮೌನ, ಸ್ಥಿರ, ಅಚಲ ಆತ್ಮ ಸ್ಥಿತಿಗೆ ಏರುವುದು ಕೇವಲ ಮೊದಲ ಹೆಜ್ಜೆ, ಆರಂಭದ ಹಂತ ಅಷ್ಟೇ. ಅಂತೆಯೇ ಗೀತೆಯು ಆರಂಭದಿಂದಲೇ ಈಶ್ವರ, ಸಗುಣ ದೇವತಾ ಸ್ವರೂಪ, “ಅಹಂ, ಮಾಂ” ಎಂದು ಹೇಳಬಲ್ಲ ಸ್ವಯಂ ತನ್ನ ಬಗ್ಗೆ ತನ್ನ ರಹಸ್ಯ, ಸರ್ವಾಂತರ್ಯಾಮಿ ಅಸ್ತಿತ್ವದ ಬಗ್ಗೆ ತನ್ನ ಜಗನ್ನಿಯಾಮಕತ್ವದ ಬಗ್ಗೆ, ಮಾನವನ ಆತ್ಮದ ಪ್ರಭುವಿನ ಬಗ್ಗೆ, ಅಷ್ಟೇ ಅಲ್ಲ ನಿರ್ವಿಕಾರ ಆತ್ಮದ ಅಸ್ತಿತ್ವಕ್ಕಿಂತಲೂ ಹಿರಿದಾದ ತನ್ನ ಸ್ಥಿತಿಯ ಬಗ್ಗೆ ಮೇಲಿಂದ ಮೇಲೆ ಸಾರುತ್ತಿದ್ದ ಭಗವತ್ಸ್ವರೂಪ (ಶ್ರೀ ಕೃಷ್ಣನ) ಬಗ್ಗೆ ಏಕೆ ಒತ್ತಿ ಒತ್ತಿ ಹೇಳುತ್ತದೆ ಎಂಬುದನ್ನು ಕೂಡ ನಾವೀಗ ಅರಿತಿದ್ದೇವೆ. ಯಾವುದೇ ಪರಿಸ್ಥಿತಿ, ಸಂದರ್ಭಗಳಲ್ಲೂ ಅವಿಚಲಿತನಾಗಿರುವ, ವ್ಯಕ್ತಿ ನಿಷ್ಠ ಹಾಗೂ ವಸ್ತು ನಿಷ್ಠ ಹೀಗೆ ಯಾವುದೇ ರೀತಿಯ ಪ್ರಕೃತಿಯ ದರ್ಶನಕ್ಕೂ ನಿಲುಕದ ಸಗುಣ ಸಾಕಾರ (ಅವತಾರ ಪುರುಷನ) ಬಗ್ಗೆ ಏಕೆ ಇಷ್ಟು ಒತ್ತಾಯ ಪೂರ್ವಕವಾಗಿ ಹೇಳುತ್ತದೆ ಎಂಬುದು ನಮಗೀಗ ಅರ್ಥವಾಗಿದೆ.

ಎಲ್ಲ ಯೋಗಗಳೂ ಭಗವಂತನನ್ನೇ ಅರಸುತ್ತವೆ. ಪರಮ ಶಾಶ್ವತನಾದ ಅವನಲ್ಲಿ ಸೇರಿ ಹೋಗಲು ಬಯಸುತ್ತವೆ. ನಮ್ಮ ಕಾಣ್ಕೆಗೆ ಭಗವಂತ ಎಷ್ಟು ದಕ್ಕುತ್ತಾನೋ, ಆ ಶಾಶ್ವತ ಪುರುಷನ ಅರ್ಥೈಕೆ ಸಾಧ್ಯವೋ ಅಷ್ಟೇ, ಅದೇ ನಮ್ಮ

ಶೋಧನೆಯ ದಾರಿ, ನಮ್ಮ ಸಾಕ್ಷಾತ್ಕಾರದ ಸಮಗ್ರತೆ ಹಾಗೂ ಅವರ ಜೊತೆಗಿನ ಏಕತೆಯ ಅನುಭವದ ಆಳ ಮತ್ತು ಘನಿಷ್ಠತೆ. ಮಾನಸಿಕ ಜೀವಿಯಾದ ಮಾನವನು ಅನಂತನಾದ ಪರಮಾತ್ಮನನ್ನು ತನ್ನ ಸಾಂತ ಮನದ ಮೂಲಕವೇ ಸಮೀಪಿಸುತ್ತಾನೆ, ತನ್ನ ಸಾಂತದ ದ್ವಾರವನ್ನು ತೆರೆದೇ ಅನಂತದೆಡೆಗೆ ಸಾಗುತ್ತಾನೆ. ತನ್ನ ಮನಸ್ಸಿಗೆ ಎಷ್ಟು ಸಾಧ್ಯವೋ ಅಷ್ಟು ಬೃಹತ್ತಾದ ಅಥವಾ ಅರ್ಥಮಾಡಿಕೊಳ್ಳಲು ಸಾಧ್ಯವಾದ ರೂಪವನ್ನು ಮಾನವ ಕಲ್ಪಿಸಿಕೊಳ್ಳುತ್ತಾನೆ, ಕೆಲವೊಂದು ಪ್ರಾಕೃತಿಕ ಶಕ್ತಿಗಳನ್ನು ತನ್ನ ಗ್ರಹಿಕೆ, ಅರ್ಥೈಕೆಗೆ ತಕ್ಕಂತೆ ಅಸಾಮಾನ್ಯ ಶಕ್ತಿಗಳನ್ನಾತ (ತನ್ನ ಕಲ್ಪನೆಯ ಭಗವಂತನಿಗೆ) ನೀಡುತ್ತಾನೆ. ಅದು ಅನಂತ ಸತ್ಯ, ತನ್ನ ಮಾನಸ ಗ್ರಹಿಕೆಯನ್ನು ಮೀರಿದ್ದರೂ ಅದು ಪರಮ ಸತ್ಯ ಎಂದಾತ ಭಾವಿಸುತ್ತಾನೆ. ಭಗವಂತನೇನೋ ಅನಂತನಿದ್ದಾನೆ, ಅನಂತ ಸ್ವರೂಪ ಹೊಂದಿದ್ದಾನೆ, ಎಲ್ಲವೂ ಅನಂತ ಸತ್ಯಗಳೇ ಆಗಿವೆ, ಆದರೂ ಮಾನವನು ತನಗೆ ಇಷ್ಟವಾದ ರೂಪವನ್ನು ಅವನಿಗೆ ನೀಡಿ, ಅದಕ್ಕೆ ಬದ್ಧನಾಗಿ ನಿಂತುಕೊಂಡು, ಭಕ್ತಿಯಿಂದ ಅವನ ಶಬ್ದಗಳನ್ನೂ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತ, ನೇರವಾದ ಅನುಭವದ ಮೂಲಕ ಅಗಣಿತ ನಿಸ್ಸೀಮ ಸತ್ಯವನ್ನು ಕಂಡುಕೊಳ್ಳಲು ಪ್ರಯತ್ನ ಮಾಡುತ್ತಾನೆ. ಈ ದಾರಿ ಸಂಕುಚಿತವಾಗಿರಬಹುದು, ಆದರೆ ಅವನು ಮಾತ್ರ ಅದರಲ್ಲಿ ಸಂತುಷ್ಟನಾಗಿರುತ್ತಾನೆ, ಸಮಾಧಾನಿತನಾಗಿರುತ್ತಾನೆ. ತನ್ನ ಆತ್ಮದ ಕರೆಗೆ ಇನಿತಾದರೂ ಸ್ಪಂದನೆ ಸಿಕ್ಕಿದೆ ಅನಿಸಿದರಂತೂ ಮುಗಿದೇ ಹೋಯಿತು, ಉನ್ನತ ಶಿಖರವನ್ನು ಹೋಗಿ ಮುಟ್ಟುವವರೆಗೂ ಅವನು ಛಲಬಿಡದೇ ಮುಂದುವರಿಯುತ್ತಾನೆ. ಅವನು ಹೇಗೆ ಮುಂದುವರಿಯುತ್ತಾನೋ ಭಗವಂತ ಕೂಡ ಅವನನ್ನು ಹಾಗೆಯೇ ಸ್ವೀಕರಿಸುತ್ತಾನೆ. ಮೇ ಯಥಾ ಮಾಂ ಪ್ರಪದ್ಯಂತೇ (4.11).

ತಾತ್ವಿಕ ಮನಸ್ಸುಳ್ಳವರು ಶಾಶ್ವತನಾದ ಪರಮಾತ್ಮನನ್ನು ಅಮೂರ್ತವಾದ ಪರಿಕಲ್ಪನೆಯ ಮೂಲಕ ಅರಿಯುವ ಪ್ರಯತ್ನ ಮಾಡುತ್ತಾನೆ. ಜ್ಞಾನವೆಂದರೆ ಸಮಗ್ರ ಅರಿವು ಹೊಂದುವುದು, ಸಾಂತ ಬುದ್ಧಿಗೆ ಅದು ನಿರ್ದಿಷ್ಟ ಪಡಿಸುವುದು, ನಿಖರವಾಗಿ ಹೇಳುವುದು ಎಂದು ಅರ್ಥ. ಆದರೆ ಯಾವುದು ಅನಿರ್ಧಾರ್ಯವಾಗಿದೆಯೋ Indeterminate ಅದನ್ನು ನಿರ್ಧಾರಿತ ಪಡಿಸುವುದು ಕಠಿಣ, ಅದಕ್ಕಾಗಿ ನೇತಿ ನೇತಿ ಎಂಬ ನಿರಾಕರಣ ಪದ್ಧತಿಯನ್ನು ಅವಲಂಬಿಸಬೇಕಾದುದು ಅನಿವಾರ್ಯ.

ಆದ್ದರಿಂದ ಮನಸ್ಸು ಏನೆಲ್ಲ ನಿರ್ಧಾರಿತವಾಗಿದೆಯೋ, ಸೀಮಿತವಾಗಿದೆಯೋ ಇಂದ್ರಿಯ ಗ್ರಾಹ್ಯವಾಗಿದೆಯೋ, ಅದೆಲ್ಲವನ್ನೂ ಶಾಶ್ವತತೆಯಿಂದ ಹೊರಗಿಡುತ್ತದೆ. ಆತ್ಮ ಮತ್ತು ಅನಾತ್ಮ ಇವುಗಳ ನಡುವೆ, ಶಾಶ್ವತ, ಅವಿಕಾರಿ, ಅನಿರ್ವಚನೀಯ ಸ್ವಯಂ ಅಭಿವ್ಯಕ್ತಿ ಹಾಗೂ ಅಸ್ತಿತ್ವದ ಎಲ್ಲ ಆಕಾರಗಳ ನಡುವೆ ತೀವ್ರ ಭೇದವನ್ನು ಕಲ್ಪಿಸಲಾಗುತ್ತದೆ. ಬ್ರಹ್ಮ ಮತ್ತು ಮಾಯೆ, ಅವರ್ಣನೀಯ ಪರಾತ್ಪರ ಸತ್ಯ ಹಾಗೂ ಅದು ಸ್ವ–ಅಭಿವ್ಯಕ್ತಿಗಾಗಿ ಧರಿಸುವ ಎಲ್ಲ ಆಕಾರಗಳು ಹಾಗೂ ಕರ್ಮ ಮತ್ತು ನಿರ್ವಾಣ, ನಿರಂತರ ಹಾಗೂ ಅಶಾಶ್ವತ ಕಾರ್ಯ ಇವೆಲ್ಲವುಗಳ ನಡುವೆ ತೀವ್ರ ಭೇದ ಕಲ್ಪಿಸುತ್ತದೆ. ಒಂದು ವಿಶ್ವಾತ್ಮಕ ಮಹಾಶಕ್ತಿ ಮತ್ತು ಒಂದು ಶಬ್ದಾತೀತ ಸರ್ವ ನಿರಾಕರಣ (ನೇತಿ ನೇತಿ), ಪೂರ್ಣ ಶೂನ್ಯ ಅಂದರೆ ಮನಸ್ಸು, ಪ್ರಾಣ ಇವಾವೂ ಇಲ್ಲ. ಏನೂ ಇಲ್ಲದ ನಿರ್ವಾಣ ಸ್ಥಿತಿಯನ್ನು ಕಲ್ಪಿಸಿ ಮುಂದುವರಿಯುತ್ತದೆ. ಈ ತೆರನಾದ ಜ್ಞಾನದ ತೀವ್ರ ದಾಹವು ಪರಾತ್ಪರ ಶಾಶ್ವತದೆಡೆಗಿನ ಸೆಳೆತವು ವ್ಯಕ್ತಿಯನ್ನು ನಶ್ವರವಾದ ಜಗದಿಂದ ದೂರಕ್ಕೆ ಕರೆದೊಯ್ಯುತ್ತದೆ, ಜಗವನ್ನೇ ನಿರಾಕರಣ ಮಾಡುವ ಮಟ್ಟಕ್ಕೆ ಹೋಗುತ್ತದೆ. ಈ ತೆರನಾದ ಭಾವ ತೀವ್ರತೆಯು ಜಗತ್ತು, ಜೀವ, ಜೀವನವನ್ನು ನಿರಾಕರಿಸುವ ಹಂತಕ್ಕೆ ಒಯ್ಯುತ್ತದೆ, ತನ್ನ ಮೂಲ ನಿರ್ವಿಕಾರ ಶಾಶ್ವತ ಸತ್ತೆಗೆ ಹೋಗುವಂತೆ ಪ್ರೇರಿಸುತ್ತದೆ. ಅನಾಮಧೇಯ, ನಿರ್ವೈಯಕ್ತಿಕ, ನಿರಾಕಾರ ಸತ್ತೆಯೆಡೆಗೆ ಕರೆದೊಯ್ಯುತ್ತದೆ. ಹೃದಯದ ಆಶೆ–ಬಯಕೆಗಳು, ಸಂಕಲ್ಪದ ಮೂಲಕ ಮಾಡಬಹುದಾದ ಕೆಲಸಗಳು, ಮನಸ್ಸಿನ ಎಲ್ಲ ಪರಿಕಲ್ಪನೆಗಳು ನಿರಾಕರಿಸಲ್ಪಡುತ್ತವೆ. ಕೊನೆ ಕೊನೆಗಂತೂ ಜ್ಞಾನವು ಕೂಡ ನಿರಾಕೃತವಾಗುತ್ತದೆ. ಎಲ್ಲವೂ ಅಜ್ಞೇಯ ಸಾರೂಪ್ಯದಲ್ಲಿ ಸೇರಿ ಲಯವಾಗಿ ಬಿಡುತ್ತದೆ. ಈ ರೀತಿ ನಿರಂತರ ವರ್ಧಿಸುತ್ತ ಹೋಗುವ ಶಾಂತಿ, ಸಮಚಿತ್ತತೆ, ಸ್ಥಿರತೆಯಿಂದ ಬಹುಪಾಲು ತಟಸ್ಥ ಧೋರಣೆ ಬಂದು ಬಿಡುತ್ತದೆ. ಮಾಯೆಯೇ ಈ ಪ್ರಪಂಚವನ್ನೆಲ್ಲ ಸೃಷ್ಟಿಸಿದೆ, ನಮ್ಮ ಜೀವ, ಜೀವಾತ್ಮ, ಶರೀರಾದಿ ಎಲ್ಲವೂ ಭ್ರಮೆ ಎಂಬ ಭಾವ ಬಲಿತು, ವ್ಯಕ್ತಿ, ವ್ಯಕ್ತಿತ್ವ ಎಲ್ಲವೂ ಲಯವಾಗಿ ಕೊನೆಗೆ ಇಹದ ಬದುಕಿನಿಂದ ಸಂಪೂರ್ಣ ನಿವೃತ್ತವಾಗಿ ನಿರ್ವಾಣದಲ್ಲಿ ಸೇರಿ ಮಾಯವಾಗಿ ಬಿಡುತ್ತದೆ.

ಆದರೆ ಇದು ತುಸು ಕಠಿಣವಾದ ಕ್ರಮ; ಇದು ಅಮೂರ್ತವಾಗಿ ನೇತಿ ನೇತಿ ಎಂದು ಎಲ್ಲವನ್ನೂ ಅಲ್ಲಗಳೆಯುತ್ತ ಹೋಗುವುದರಿಂದ ಒಂದು ವಿಧವಾದ

ಅಪರೂಪದ ಪರಿಕಲ್ಪನೆಗೆ ಒಯ್ದರೂ, ವಿಶ್ವಾತ್ಮಕವಾಗಿ ಎಲ್ಲರಿಗೂ ಈ ಕ್ರಮ ತೃಪ್ತಿಕೊಡದೇ ಹೋಗುವುದು. ಏಕೆಂದರೆ ಮಾನವನ ಸಂಕೀರ್ಣ ಪ್ರಕೃತಿಯನ್ನು ಪರಮಾತ್ಮನೆಡೆಗೆ ಸಮಗ್ರವಾಗಿ ಒಯ್ಯಲು ಸಾಧ್ಯವಾಗುವುದಿಲ್ಲ. ಕೇವಲ ಅವನ ಸಾವಧಾನ ಬುದ್ಧಿ ಮಾತ್ರವಲ್ಲ, ಅವನ ಹೃದಯದ ತುಡಿತ, ಸಕ್ರಿಯ ಸಂಕಲ್ಪ, ಸಕಾರಾತ್ಮಕ ವಿಧಾಯಕ ಮನಸ್ಸು ಎಲ್ಲವೂ ದೈವೀ ಸತ್ಯವನ್ನು ಕಾಣಲು ಕಾತರಿಸುತ್ತವೆ, ಅದಕ್ಕೆಲ್ಲ ಈ ದೃಶ್ಯ ಪ್ರಪಂಚ ಅಥವಾ ಅಸ್ತಿತ್ವವೇ ಕೀಲಿಯ ಕೈ, ಇದರ ಆಧಾರದ ಮೇಲೆಯೇ ಎಲ್ಲವೂ ಪರಾತ್ಪರ ಶಾಶ್ವತ ಅನಂತ ಪುರುಷನನ್ನು ಕಾಣಲು ಬಯಸುತ್ತವೆ, ತಮ್ಮನ್ನು ಆ ಪರಾತ್ಪರನಲ್ಲಿ ಸಂಲಗ್ನಗೊಳಿಸಲು ಬಯಸುತ್ತವೆ. ಈ ಅವಶ್ಯಕತೆಯೇ ಭಕ್ತಿ ಯೋಗದ ಹುಟ್ಟಿಗೆ ಕಾರಣವಾಗಿದೆ. ಕರ್ಮ ಯೋಗಕ್ಕೂ ಸಹ ಇದೇ ಆಧಾರ. ಭಕ್ತಿ ಹಾಗೂ ಕರ್ಮಗಳು ಮಾನವನನ್ನು ಸಮಾಧಾನ ಪಡಿಸುವುದಲ್ಲದೇ ಭಗವಂತನೆಡೆಗೆ ಹೋಗಲು ಸಹಾಯ ಮಾಡುತ್ತವೆ. ಇವು ಅತಿ ಮಹತ್ವದ ಸಕ್ರಿಯ ಉಪಾಯಗಳಾಗಿದ್ದು ಇವುಗಳ ಮೂಲಕವೇ ಜ್ಞಾನವು ಸಾಫಲ್ಯತೆ ಪಡೆದುಕೊಳ್ಳುವುದು, ಬೌದ್ಧ ತತ್ವವಾದರೂ ಸಹ, ಎಷ್ಟೇ ತೀವ್ರವಾಗಿ ಆತ್ಮ ನಿಷ್ಠ ಹಾಗೂ ವಸ್ತು ನಿಷ್ಠ ಎರಡೂ ಪ್ರಪಂಚವನ್ನು ನಿರಾಕರಿಸಿದರೂ, ಆರಂಭದಲ್ಲಿ ದೈವೀ ಕರ್ಮ ಯೋಗವನ್ನು ಅವಲಂಬಿಸಲೇಬೇಕಾಯಿತು, ಭಕ್ತಿ ಯೋಗದ ಬದಲಾಗಿ ಆಧ್ಯಾತ್ಮೀಕರಣಗೊಂಡ ಭಾವನಾತ್ಮಕತೆಯನ್ನು ವಿಶ್ವಾತ್ಮಕ ಪ್ರೇಮ, ದಯೆ, ಕರುಣೆಗಳ ರೂಪದಲ್ಲಿ ಒಪ್ಪಿಕೊಳ್ಳಲೇಬೇಕಾಯಿತು. ಯಾವುದೇ ಮಾರ್ಗ ಇರಲಿ ಅಥವಾ ಕ್ರಮ ಇರಲಿ ಇದೊಂದೇ ಮಾನವತೆಯನ್ನು ದೈವಿಕತೆಯ ಕಡೆಗೆ ಸೆಳೆಯಬಲ್ಲದು. ಅಷ್ಟೇ ಏಕೆ ಭ್ರಮಾತ್ಮಕವಾದ ಮಾಯಾವಾದವು ಕೂಡ, ಕರ್ಮ ಮತ್ತು ಮಾನಸಿಕ ಕ್ರಿಯೆಗಳಿಗೆ ತರ್ಕಬಾಹಿರವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸಿದರೂ, ಮಾನವ, ವಿಶ್ವ, ಭಗವಂತ ಇವರಿಗೆಲ್ಲ ಆರಂಭಿಕ ವ್ಯಾವಹಾರಿಕ ಸತ್ಯತ್ವವನ್ನು ನೀಡಲೇಬೇಕಾಯಿತು. ಏಕೆಂದರೆ ಅದಕ್ಕೊಂದು ಕಾಲಿಡಲಾದರೂ ಜಾಗ ಬೇಕು, ಆರಂಭ ಮಾಡಲಿಕ್ಕಾದರೂ ಒಂದು ಆರಂಭದ ಬಿಂದು ಬೇಕು. ಅಂತೆಯೇ ತಾನು ಏನನ್ನು ಅಂತಿಮವಾಗಿ ಆತ್ಯಂತಿಕವಾಗಿ ನಿರಾಕರಿಸುವುದೋ ಅದನ್ನು ಮನುಷ್ಯನ ಬಂಧನ, ಅವನ ಮುಮುಕ್ಷು ಪ್ರಯತ್ನ ಇವುಗಳಿಗಾಗಿ ಒಪ್ಪಿಕೊಳ್ಳಲೇಬೇಕಾಯಿತು. ಇದೆಲ್ಲವನ್ನು ಕೊನೆಯಲ್ಲಿ ಅಲ್ಲಗಳೆಯಲಿ ಆದರೆ ಆರಂಭದಲ್ಲಿ ಅವೆಲ್ಲವನ್ನು ಮನ್ನಿಸಲೇಬೇಕಾಯಿತು.

ಆದರೆ ಕ್ರಿಯಾಶೀಲವಾದ ಹಾಗೂ ಭಾವನಾತ್ಮಕವಾದ ಧರ್ಮಗಳ ದೌರ್ಬಲ್ಯವೇನೆಂದರೆ ಅವು ಯಾವುದಾದರೊಂದು ಸಗುಣ ರೂಪಕ್ಕೆ ಅಂಟಿಕೊಂಡು ಬಿಡುತ್ತವೆ, ಯಾವುದೋ ನಿರ್ದಿಷ್ಟ ಧರ್ಮ, ಧಾರ್ಮಿಕ ಮೌಲ್ಯಗಳಿಗೆ ಅಂಟಿಕೊಂಡು ಬಿಡುತ್ತವೆ. ಆದರೆ ಅದಾವುದೂ ಅನಂತವಾಗಿರದೇ ತಾತ್ಕಾಲಿಕವಾಗಿರುತ್ತದೆ. ಅನಂತದ ಪರಿಕಲ್ಪನೆ ಇದೆ, ಭಗವಂತ ಅನಂತ ಎಂದು ಹೇಳಿದರೂ ಕೂಡ ಅವು ನಮಗೆ ಪೂರ್ಣ ತೃಪ್ತಿ ನೀಡುವುದಿಲ್ಲ, ಜ್ಞಾನವನ್ನು ಕೊಡುವುದಿಲ್ಲ, ಏಕೆಂದರೆ ಅವು ತಮ್ಮ ಆತ್ಯಂತಿಕ ಉನ್ನತ ಹಾಗೂ ಮೂಲ ಪ್ರವೃತ್ತಿಯಲ್ಲಿ ಇವುಗಳನ್ನು ಹೊಂದಿರುವುದಿಲ್ಲ. ಈ ಧರ್ಮಗಳು ಅಥವಾ ಮತಗಳು ಪರಮ ಶಾಶ್ವತದಲ್ಲಿ ಹೋಗಿ ಸೇರಲು, ಅದರ ಜೊತೆ ಸಂಪೂರ್ಣವಾಗಿ ತಾದಾತ್ಮ್ಯ ಹೊಂದಲು ಕೊರತೆ ಅನುಭವಿಸುತ್ತವೆ. ಸ್ವಲ್ಪ ಮಟ್ಟಿಗಿನ ಏಕಾತ್ಮತೆ, ತಾದಾತ್ಮ್ಯ ಸಾಧ್ಯವಾಗಬಹುದು, ಸಂಪೂರ್ಣ ಅಲ್ಲದೇ ಹೋದರೂ ಸಾಕಷ್ಟು ಏಕತೆ ಆಗಬಹುದು; ಏಕೆಂದರೆ ಇವೆಲ್ಲದರಲ್ಲೂ ಐಕ್ಯದ, ಏಕತೆಯ ತಾದಾತ್ಮ್ಯದ ಪರಿಕಲ್ಪನೆ ಇದೆ, ಮಾನವರ ಆತ್ಮ ಆ ಪರಮ ಆತ್ಮದ ಜೊತೆ ಒಂದಾಗಲೇಬೇಕೆಂಬ ಆದರ್ಶವನ್ನು ಹೊಂದಿವೆ, ಎಂದಾದರೊಂದು ಅದು ಸಾಧ್ಯವಾಗಲೇಬೇಕು. ಈ ಕಡೆಗೆ ಧ್ಯಾನಾವಸ್ಥಿತ ತದ್ಗತೇನ ಆಧ್ಯಾತ್ಮಿಕ ಚಿಂತನೆಯ ದೌರ್ಬಲ್ಯದತ್ತ ಬಂದರೆ, ಇದು ತೀರ ನಿರ್ವಿಕಲ್ಪ ನಿರಾಕಾರ ಅಮೂರ್ತತೆಗೆ ಬರುತ್ತದೆ, ಕೊನೆಗೆ ಏನೂ ಇಲ್ಲವೆನ್ನುವ "ಅಸತ್"ನಲ್ಲಿ ಕೊಂಡೊಯ್ಯುತ್ತದೆ, ಮಾನವ, ಅವನ ಜೀವನ, ಅವನ ಆತ್ಮ – ಇಲ್ಲಿಯವರೆಗೆ ಅದರ ಪ್ರವೃತ್ತಿಯಿಂದಾಗಿಯೇ ಆಧ್ಯಾತ್ಮದ ಕಡೆಗೆ ಬಂದಿದ್ದರೂ ಎಲ್ಲವೂ ಕೇವಲ ಭ್ರಮೆ ಎಂದಾಗಿಬಿಟ್ಟರೆ, ಮುಕ್ತಿ, ಮೋಕ್ಷ, ಸಾರೂಪ್ಯ, ಸಾಯುಜ್ಯ ಸಾಲೋಕ್ಯ ಮುಂತಾದ ಪರಿಕಲ್ಪನೆಗಳಿಗೆ ಅರ್ಥವೇ ಉಳಿಯುವುದಿಲ್ಲ. ಆತ್ಮವೇ ಇಲ್ಲವೆಂದಾಗಿ ಬಿಟ್ಟರೆ ಮುಮುಕ್ಷುತ್ವ, ಸಾಧನೆ, ಮೋಕ್ಷ ಇವುಗಳಿಗೆ ಯಾವ ಅರ್ಥವೂ ಉಳಿಯುವುದಿಲ್ಲ. ಈ ರೀತಿ ವಿಚಾರ ಮಾಡುವುದರಿಂದ ಪ್ರಕೃತಿಯಲ್ಲಿ ಉಳಿದಂತೆ ಯಾವ ಅಸ್ತಿತ್ವದ ಶಕ್ತಿಗಳಿಗೂ ಬೆಲೆ ಇಲ್ಲದಾಗುವುದು, ಅವುಗಳಿಗೆ ತೀರ ನಿಕೃಷ್ಟತೆ ಬರುವುದು. ಹೀಗಾಗಿ ಪರಾತ್ಪರ ಶಾಶ್ವತ, ಅನಂತ ತತ್ವದ ಇದಿರಲ್ಲಿ ಅವು ತೃಪ್ತಿ ನೀಡದೇ ಹೋಗುವ ಸಾಕ್ಷಾತ್ಕಾರಗಳಂತಾಗಿ ಬಿಡುವುವು. ಅರ್ಥಹೀನವಾಗಿ ಹೋಗುವುವು. ಆದರೂ ಇವನ್ನೆಲ್ಲ ತೀರ ಅಲ್ಲಗಳೆಯಲು ಬರುವುದಿಲ್ಲ: ಸಶಕ್ತ ಸಂಕಲ್ಪ, ಬಯಕೆ, ಪ್ರೇಮದ ಅತುಲನೀಯ ಭಾವಾಭಿವೇಶ, ಸಕಾರಾತ್ಮಕ ಬೆಳಕು,

ಎಲ್ಲವನ್ನೂ ಸಮಾಹರಿಸಿಕೊಳ್ಳುವ ಅಂತಃಸ್ಫೂರ್ತಿ, ಪ್ರಜ್ಞಾಮುಕ್ತ ಮನದ ಚಲನೆ ಇವೆಲ್ಲವೂ ಭಗವತ್ ಪ್ರೇರಿತವೇ ಆಗಿರುತ್ತವೆ, ಅವನ ಒಂದೊಂದು ಶಕ್ತಿ ಸಾಮರ್ಥ್ಯದ ಪ್ರತಿನಿಧಿಗಳೇ ಆಗಿರುತ್ತವೆ, ಆದ್ದರಿಂದ ಅವುಗಳ ಮೂಲದಲ್ಲಿ – ಮೂಲ ಸ್ರೋತದಲ್ಲಿ – ಸಮರ್ಥನೀಯವೇ ಆಗಿರುತ್ತವೆ ಮತ್ತು ಸಾಕ್ಷಾತ್ಕಾರಕ್ಕೆ ದಾರಿಗಳೇ ಆಗಿರುತ್ತವೆ ಎನ್ನುವುದನ್ನು ತೀರ ಅಲ್ಲಗಳೆಯಲಾಗುವುದಿಲ್ಲ. ಯಾವುದೇ ಭಗವಂತನ – ಜ್ಞಾನವಿರಲಿ ಅದು ತನ್ನ ಆತ್ಯಂತಿಕ ಗುರಿಯನ್ನು ಸಾಧಿಸದೇ ಹೋಗುವುದಾದರೆ ಅಪೂರ್ಣವೇ, ಅಸಾರ್ಥಕವೇ, ಯಾವುದೇ ಜ್ಞಾನ, ಪಾಂಡಿತ್ಯವಿರಲಿ ತನ್ನ ತಪಸ್ಸಿನಲ್ಲಿ ಅಥವಾ ಕಠಿಣ ಸಾಧನೆಯಲ್ಲಿ ಅಥವಾ ಪರಿಶುದ್ಧ ಜ್ಞಾನದಲ್ಲಿ ಭಗವಂತನೆಡೆಗೆ ಸಾಗುವ ಈ ದಾರಿಗಳನ್ನು ನಗಣ್ಯ ಅಥವಾ ನಿರಾಕರಣೆ ಮಾಡಿದರೆ ಅದು ಸಮಗ್ರ ಸಾಕ್ಷಾತ್ಕಾರದಲ್ಲಿ ಪರ್ಯವಸಾನ ಹೊಂದುವುದಿಲ್ಲ.

ಗೀತೆಯ ಪ್ರಮುಖ ವಿಚಾರದ ಹಿರಿಮೆ ಏನೆಂದರೆ ಅದು ಎಳೆಗಳನ್ನು ಜೋಡಿಸುತ್ತದೆ, ಸಮನ್ವಯಪೂರ್ವಕವಾಗಿ ಹೆಣೆಯುತ್ತದೆ, ಎಲ್ಲ ಸೇರಿ ವಿಶ್ವದಲ್ಲಿ ಮಾನವನ ಆತ್ಮದ ಅಸ್ತಿತ್ವದ ಮಹತಿ ಏನು ಎಂಬುದನ್ನು ಚರ್ಚಿಸುತ್ತ ವಿಶ್ವಾತ್ಮಕ ಸತ್ಯ, ಶಕ್ತಿ, ಪ್ರೇಮ, ಸತ್ತೆ ಎಲ್ಲವುಗಳ ಏಕತೆಯನ್ನು ಪ್ರಸ್ತಾಪಿಸುತ್ತದೆ; ನಮ್ಮ ಮಾನವತೆಯು ಪರಿಪೂರ್ಣತೆ ಮತ್ತು ಅಮರತ್ವದ ಹುಡುಕಾಟದಲ್ಲಿ, ಉನ್ನತ ಆನಂದದ ಶೋಧನೆಯಲ್ಲಿ, ಶಾಂತಿ ಹಾಗೂ ಶಕ್ತಿಗಳ ಪರಿಶೋಧನೆಯಲ್ಲಿ ಅತ್ತಲೇ ಹೋಗುತ್ತದೆ ಎಂಬುದನ್ನು ದೃಢಪಡಿಸುತ್ತದೆ. ಈಶ್ವರನನ್ನು ಸಮಗ್ರವಾಗಿ ಆಧ್ಯಾತ್ಮಿಕವಾಗಿ ತಿಳಿದುಕೊಳ್ಳುವ ಪ್ರಬಲ ಪ್ರಯತ್ನದಲ್ಲಿ ಮಾನವತೆ ನಿರಂತರ ಶ್ರಮಿಸುತ್ತದೆ. ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಹೇಳದೇ ಬಿಟ್ಟದ್ದು ಏನೂ ಇಲ್ಲ, ಎಲ್ಲವನ್ನೂ ಹೇಳಲಾಗಿದೆ. ಯಾವ ಆಧ್ಯಾತ್ಮಿಕ ಸಮಸ್ಯೆಗೂ ಪರಿಹಾರ ಹೇಳದೇ ಬಿಟ್ಟಿಲ್ಲ. ಆದರೆ ಅಲ್ಲೊಂದು ದೊಡ್ಡ ಯೋಜನೆಯ ಪ್ರಕಾರ ಹೇಳದೇ ಬಿಟ್ಟದ್ದನ್ನು ನಾವು ತುಂಬಿಸಬೇಕಾಗಿದೆ, ಬೆಳೆಸಿ, ಹೊಂದಾಣಿಕೆ ಮಾಡಿ, ಒತ್ತು ಕೊಟ್ಟು, ಎಲ್ಲ ಬಿಂದುಗಳನ್ನು ಬಿಟ್ಟಿರುವಲ್ಲಿ ಸರಿಯಾಗಿ ಜೋಡಿಸಿ, ಸರಿಯಾಗಿ ಅರ್ಥೈಸಿಕೊಳ್ಳಬೇಕಾಗಿದೆ. ನಮ್ಮ ಬುದ್ಧಿಗೆ ಇನ್ನೂ ಹೆಚ್ಚಿನ ಅರ್ಥೈಕೆ ಬೇಕಾದರೆ, ಆತ್ಮಕ್ಕೆ ಅವಶ್ಯವಿದ್ದರೆ, ಅಲ್ಲಲ್ಲಿ ಬೆಳಕು ಚೆಲ್ಲಿ ಸರಿಯಾದ ಅರ್ಥ ಸೂಚಿಸಿರುವುದನ್ನು ಹೆಕ್ಕಿ ತೆಗೆದು ಅಭ್ಯಸಿಸಬೇಕಾಗಿದೆ. ತನ್ನ ಪ್ರಶ್ನೆಗಳಿಗೆ ತಾನೇ ನಿಖರವಾದ

ಉತ್ತರವನ್ನು ಗೀತೆ ನೀಡುವುದಿಲ್ಲ; ತನಗೆ ಏನು ಹೇಳಬೇಕಾಗಿದೆಯೋ ಅದನ್ನು ವಿವರಿಸಲು ಅದು ವೇದಾಂತ ಮತ್ತು ಉಪನಿಷತ್ತುಗಳ ಮೂಲ ಸಿದ್ಧಾಂತಗಳ ಸಮಗ್ರ ದೃಷ್ಟಿಕೋನದ ಅವಲೋಕನಕ್ಕೆ ಹೊರಳುತ್ತದೆ. ಏಕೆಂದರೆ ಆತ್ಮ, ಮಾನವ ಮತ್ತು ಜಗತ್ತು ಅಥವಾ ಬ್ರಹ್ಮಾಂಡಗಳ ಸಮಗ್ರ ಸಮನ್ವಯ ಪೂರ್ವಕ ದೃಷ್ಟಿ, ವಿವರಣೆ ಸಿಕ್ಕುವುದು ಅಲ್ಲಿಯೇ. ಆದರೆ ಉಪನಿಷತ್ತುಗಳಲ್ಲಿ ಏನನ್ನು ಹೇಳಿಲ್ಲವೋ, ಅಂತರ್ಬೋಧೆಯ ದರ್ಶನ ಮತ್ತು ಸಾಂಕೇತಿಕ ಭಾಷೆಯಲ್ಲಿ ಹೇಳಿರುವುದು ಎಲ್ಲಿ ಬುದ್ಧಿಯ ಗ್ರಾಹ್ಯಕ್ಕೆ ನಿಲುಕುವುದಿಲ್ಲವೋ ಅದೆಲ್ಲವನ್ನು ಬೌದ್ಧಿಕ ಮತ್ತು ಸ್ಪಷ್ಟ ಅನುಭವಕ್ಕೆ ತರುವ ರೀತಿಯಲ್ಲಿ ವಿವರಿಸುತ್ತದೆ.

ಗೀತೆಯ ಸಮನ್ವಯದ ಚೌಕಟ್ಟಿನಲ್ಲಿ ಅನಿರ್ದೇಶ್ಯ ಮತ್ತು ಅವ್ಯಕ್ತ, ಅಕ್ಷರ ಅಂದರೆ ಅನಿರ್ದೇಶ್ಯ ಅವ್ಯಕ್ತ ಬ್ರಹ್ಮನ ಅನುಸಂಧಾನ ಮಾಡುವ ತಾತ್ವಿಕ ಮನೀಷಿಗಳ ಚಿಂತನೆಗೂ ಆಸ್ಪದವಿದೆ. ಗೀತೆಯು ಆ ರೀತಿ ಅಮೂರ್ತ ಬ್ರಹ್ಮನನ್ನು ಆರಾಧಿಸುವ, ಚಿಂತಿಸುವ ಹಾಗೂ ಅದರ ಅನುಸಂಧಾನಕ್ಕೆ ತಮ್ಮನ್ನು ಸಮರ್ಪಿಸಿ–ಕೊಂಡವರೂ ಸಹ ದಿವ್ಯ ಪುರುಷನ ದರ್ಶನವನ್ನು "ಮಾಮ್" (12.4) ಅಂದರೆ ಸಮಸ್ತ ಸೃಷ್ಟಿಯ ಪ್ರಭುವಿನ ದರ್ಶನ ಪಡೆಯುತ್ತಾರೆ ಎಂದೇ ಹೇಳುತ್ತದೆ. ಪರಮ ಪುರುಷನಾದ ಸ್ವಯಂಭೂ ಆತ್ಮ ಸ್ವರೂಪದ ಅವನ ಇರುವಿಕೆಯು ನಿಜವಾಗಿಯೂ "ಅಚಿಂತ್ಯ"ವಾಗಿದೆ, ಕಲ್ಪನಾತೀತವಾಗಿದೆ, ಕೇವಲವಾಗಿದೆ, ಬುದ್ಧಿಯ ಶಕ್ತಿಯನ್ನು ಮೀರಿ, ಎಲ್ಲವನ್ನೂ ಮೀರಿದೆ, ಎಲ್ಲಕ್ಕೂ ಅತೀತವಾದ ಸಾರಭೂತವಾದ ತತ್ವವಾಗಿದೆ. ಬುದ್ಧಿಗೆ ನಿಲುಕದ ಈ "ಅಂತಿಮ ಕೇವಲದ" ಅನುಭವಕ್ಕಾಗಿ ಮಾನವನು ನಿರಾಕರಣ, ನಿವೃತ್ತಿ, ನಿಶ್ಚಲ, ನಿರವತೆಯ, ಕರ್ಮಗಳ ತ್ಯಾಗದ ದಾರಿಗೆ ಕೂಡ ಗೀತೆಯಲ್ಲಿ ಸ್ಥಾನವಿದೆ. ನಿವೃತ್ತಿ ಮಾರ್ಗವೂ ಗೀತೆಗೆ ಮಾನ್ಯವಿದೆ. ಆದರೆ ಅದು ಗೀತೆಯ ಪ್ರಮುಖ ತತ್ವವೇನಲ್ಲ; ಅದರ ಸಮಗ್ರ ದರ್ಶನದಲ್ಲಿ ಈ ನಿವೃತ್ತಿಗೆ ಗೌಣ ಸ್ಥಾನವಿದೆ. ನಿರಾಕರಣೆಯ ಜ್ಞಾನವು ಶಾಶ್ವತ ಪುರುಷನನ್ನು ಸತ್ಯದ ಒಂದು ಮುಖದಿಂದ ಸಂಧಿಸಲೆಳಸುತ್ತದೆ; ಆ ಮುಖವು ಅತಿ ಕಠಿಣವಾದ ಮಾರ್ಗದ್ದಾಗಿದ್ದು, ಸಾಧಕನಿಗೆ ಅತಿ ಪ್ರಯಾಸದಾಯಕವಾಗಿರುವುದು "ದುಃಖಂ ದೇಹವದ್ಭಿಃ ಅವಾಪ್ಯತೇ" (12.5) ಇದು ಅತಿ ವಿಶೇಷ ತಾಂತ್ರಿಕ ಪರಿಣತಿಯನ್ನು ಬೇಡುವ ದಾರಿಯಾಗಿದ್ದು ಅತಿ ಕಠೋರ ಸಾಧನೆಯನ್ನು ಬೇಡುತ್ತದೆ, ಇದು

ಅನವಶ್ಯಕವಾಗಿ ಅತಿ ಕಠಿಣವಾದ ಕತ್ತಿಯ ಅಲಗಿನ ಮೇಲೆ ನಡೆಯುವಂಥ ಅಸಿಧಾರಾ ವ್ರತದ ತರಹ. ನಿರಾಕರಣೆಯ ದಾರಿಯಲ್ಲಿ ಎಲ್ಲ ಸಂಬಂಧಗಳನ್ನು ತಳ್ಳಿಹಾಕಲಾಗುತ್ತದೆ. ಆದರೆ ಮನುಷ್ಯನಿಗೆ ಸಹಜವಾದ ಮಾರ್ಗವೆಂದರೆ ಎಲ್ಲ ಸಂಬಂಧಗಳನ್ನು ಹೊಂದಿಯೂ ಶಾಶ್ವತನೂ ಅನಂತನೂ ಆದ ಪರಮಾತ್ಮನೆಡೆಗೆ ಸಾಗುವುದೇ ಸರಳವಾದ, ಸುಲಭವಾದ ಒಳ್ಳೆಯ ದಾರಿ – ಇದನ್ನು ವ್ಯಕ್ತಿ ಸುಲಭವಾಗಿ ಸಾಧಿಸಬಲ್ಲ. ಈ ರೀತಿಯ ಸಾಧಕರು ಅಂದರೆ ಎಲ್ಲ ಸಂಬಂಧಗಳನ್ನು ತಿರಸ್ಕರಿಸಿ ಕೇವಲ ಪರಮಾತ್ಮನನ್ನೇ ಅರಸಿ ಹೋಗುವುದೇ ಶ್ರೇಷ್ಠವಾದ ದಾರಿ ಎಂದು ಭಾವಿಸಬಾರದು. ಏಕೆಂದರೆ ಪರಮಾತ್ಮನು ಎಲ್ಲ ಸಂಬಂಧಗಳಿಂದ ದೂರ ಇದ್ದಾನೆ, ಮಾನಸಿಕ–ಪ್ರಾಣಿಕ, ಭೌತಿಕ ಹೀಗೆ ಯಾವ ಸಂಬಂಧಗಳಿಂದಲೂ ಅವನು ಹೊರತಾಗಿದ್ದಾನೆ, "ಅವ್ಯವಹಾರ್ಯ"ನಾಗಿದ್ದಾನೆ. ಅದೇ ರೀತಿ ಸಂಬಂಧಗಳು ಕೇವಲ ವ್ಯಾವಹಾರಿಕ ಎಂದು ಹೇಳಿ ಪಾರಮಾರ್ಥಿಕವಾಗಿರುವ ಸತ್ಯಕ್ಕೆ ಅದು ವಿರೋಧವೇನಲ್ಲ. ಇನ್ನೂ ಹೇಳಬೇಕೆಂದರೆ, ಪರಮ ಸನಾತನ ತತ್ವವು ನಮ್ಮ ಸಾವಿರಾರು ಮಾನವೀಯ ಸಂಬಂಧಗಳಿಗೆ ರಹಸ್ಯವಾಗಿ ಹೆಣೆದುಕೊಂಡೇ ಇದೆ, ಅದರೊಡನೆ ಏಕರೂಪವಾಗಿದೆ ಮತ್ತು ನಮ್ಮ ಹಾಗೂ ವಿಶ್ವ ಪ್ರಕೃತಿಯೊಡನೆ ಎಲ್ಲ ಮೂಲಭೂತ ವ್ಯವಹಾರಗಳ ರೂಪದಿಂದ "ಸರ್ವಭಾವೇನ" ಈ ಸಂಬಂಧದ ಇಂದ್ರಿಯಾನುಭೂತಿಯಾಗಬಲ್ಲದು. ಈ ಏಕತೆ ನಮ್ಮ ಆತ್ಮ ಚೈತನ್ಯ, ಹೃದಯ, ಇಚ್ಛೆ, ಬುದ್ಧಿಗಳಿಗೆ ಸತ್ಯವೆಂದು ಕಾಣುವಂತೆ ವ್ಯಕ್ತವಾಗಬಲ್ಲದು. ಆದ್ದರಿಂದ ಈ ಎರಡನೆಯ ದಾರಿ ಮಾನವನಿಗೆ ಸಹಜ, ಸುಲಭ ದಾರಿ "ಸುಖಂ ಆಪ್ತುಮ್" – ಈಶ್ವರನ ದರ್ಶನ ನಮಗೆ ಕಠಿಣವಾಗಿರಬಹುದು, ಆದರೆ ಈ ಕಠಿಣತೆ ಈಶ್ವರನ ಇಚ್ಛೆಯಲ್ಲ, ಅವನ ಇಚ್ಛೆ ಒಂದೇ ಒಂದು, ಅದಮ್ಯವಾದ ಅಚಲ ಆರಾಧನಾಪೂರ್ಣ ಹಂಬಲ (ಅಭೀಪ್ಸೆ). ಅಜ್ಞಾನದ ಪರದೆಯನ್ನು ಹರಿದು ಹೊರಬರಲು, ಈ ಅಭೀಪ್ಸೆ ಅತ್ಯಂತ ಅವಶ್ಯಕ. ಆದರೆ ಇದೇ ನಮಗಿರುವ ದೊಡ್ಡ ತೊಂದರೆ, ಉಳಿದಂತೆ ಎಲ್ಲವನ್ನೂ ಆ ಭಗವಂತನೇ ನೋಡಿಕೊಳ್ಳುತ್ತಾನೆ – "ಅಹಂ ತ್ವಾಂ ಮೋಕ್ಷಯಿಷ್ಯಾಮಿ ಮಾ ಶುಚಃ" (18.66).

(ಸಶೇಷ)



ಫೋಟೋ: ಇಮೇಜಿಂಗ್ ಸಾವಿತ್ರಿ

ಮಾನವನ ರೂಪಧಾರಣೆಯಲಿಂತು ಪರಿತಾಪ ಸತತದಲ್ಲಿ
ನಿತ್ಯತ್ವವಿದುವು ಘಾತ–ಆಘಾತ ಸರಣಿಗಳ ಸಹಿಸುತಿಲ್ಲಿ,
ಮುಕ್ತತ್ವದೊಡನೆ ರಕ್ತ–ಋಜುವಿತ್ತು ಒಡಂಬಡಿಕೆಯನು ನೇದು
ಅವನದೇ ಅಮರ–ಶಾಂತಿಯಾ ದ್ವಾರಗಳನವನು ಪೂರ್ಣ ತೆರೆದು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 6 ರೇಣು 2 ಪುಟ 445)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.